ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು - ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)

# ಚೀನಾ - ಜಪಾನ್ ಇತಿಹಾಸ ಹಕ್ಕೊತ್ತಾಯ ಮಿತ್ರ ಆಳ್ವಿಕೆ ಬಾಕ್ಸರ್ ದಂಗೆ ಸನ್‌ಯಾತ್ ಸೇನ್ ಮೆಯ್ಜಿ ಪುನರ್ ಸ್ಥಾಪನೆ ಮಂಚೂಕೊ

ಕೋರ್ಸ್ - 5

ಬ್ಲಾಕ್ - 7

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

**Higher Education To Everyone Everywhere**

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 5

# ಬ್ಲಾಕ್ 7

ಘಟಕ - 158
ಜಪಾನ್ ಮತ್ತು ಎರಡನೆಯ ಮಹಾಯುದ್ಧ

ಘಟಕ - 159
ಜಪಾನಿನ ವಿಸ್ತರಣೆ ಮತ್ತು ಆಗ್ನೇಯ ಏಷ್ಯಾದಲ್ಲಿ ಅದರ ಆಳ್ವಿಕೆ

ಘಟಕ - 160
ಮಿತ್ರ ಪಕ್ಷಗಳ ಆಳ್ವಿಕೆಯಲ್ಲಿ ಜಪಾನ್

ಘಟಕ - 161
1952 ರ ನಂತರ ಜಪಾನ್ ಆಂತರಿಕ ಬದಲಾವಣೆಗಳು ಮತ್ತು ಬೆಳವಣಿಗೆಗಳು

ಘಟಕ - 162
1952 ರ ನಂತರ ಜಪಾನಿನ ವಿದೇಶಾಂಗ ನೀತಿ

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ


**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*


## ಪಠ್ಯಕ್ರಮ ನಿರೂಪಕರು


ಡಾ. ಬಿ.ಸಿ. ಮಹಬಲೇಶ್ವರಪ್ಪ
ಇತಿಹಾಸ ಪ್ರಾಧ್ಯಾಪಕರು,
ಗುಲ್ಬರ್ಗಾ ವಿಶ್ವವಿದ್ಯಾನಿಲಯ,
ಗುಲ್ಬರ್ಗಾ.


**ಘಟಕಗಳು 158 ರಿಂದ 162**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. **2013**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೯ - 5

## ಬ್ಲಾಕ್ - 7

## ಪೀಠಿಕೆ

## ಚೀನಾ ಮತ್ತು ಜಪಾನ್ ಇತಿಹಾಸ (ಕ್ರಿ.ಶ 1839ರ ನಂತರ)

ಘಟಕ - 7 ರಲ್ಲಿ ಜಪಾನ್ ಎರಡನೆಯ ಮಹಾಯುದ್ಧದಲ್ಲಿ ಪ್ರವೇಶಿದ್ದನ್ನು ಮತ್ತು ಯುದ್ಧಾ ನಂತರದ ಅಲ್ಲಿನ ಬೆಳವಣಿಗೆಯನ್ನು ಕುರಿತಂತೆ ನೀವು ಓದುತ್ತೀರಿ. ಈ ಘಟಕದ 5ಭಾಗಗಳಲ್ಲಿ ಯುದ್ಧದಲ್ಲಿ ಜಪಾನಿನ ಪಾತ್ರ, ಅದು ಹೀಗೆ ಜರ್ಮನಿ ಮತ್ತು ಇಟಲಿಗಳ ಪೂರ್ಣ ಅನುಮೋದನೆಯೊಂದಿಗೆ ಮಹಾ ಏಷ್ಯಾದ ನಾಯಕನಾಗಲು ಪ್ರಯತ್ನಿಸಿತು ಎಂಬುದನ್ನು ನೀವು ತಿಳಿದುಕೊಳ್ಳುತ್ತೀರಿ. ಜಪಾನ್ ಪೂರ್ವ ಪ್ರಾಚ್ಯದ ಮೇಲೆ ನಡೆಸಿದ ಆಕ್ರಮಣದಿಂದ ಉಂಟಾದ ಘಟನೆಗಳನ್ನು ನೀವು ಚರ್ಚಿಸುತ್ತೀರಿ. ಜಪಾನ್ ಹೆಚ್ಚಿನ ವಿಶ್ವಾಸ ಹಾಗೂ ಉಗ್ರ ರೀತಿಯಲ್ಲಿ ಚೀನಾ ಮತ್ತು ಆಗ್ನೇಯ ಏಷ್ಯಾದ ದ್ವೀಪಗಳ ಮೇಲೆ ಆಕ್ರಮಣ ಮಾಡತೊಡಗಿತು. ಇದು ಪೂರ್ವ ಏಷ್ಯಾದಲ್ಲಿ ಒಂದು 'ಸಮೃದ್ಧತೆಯ ಸಹ ಪ್ರಾಂತ'ವೊಂದನ್ನು ಕಟ್ಟಲು ಜಪಾನಿಗೆ ಅವಕಾಶವೂದಗಿಸಿತು. ಯುರೋಪಿನ ಮಹಾಶಕ್ತಿಗಳಾದ ಜರ್ಮನಿ, ಇಟಲಿ ಮತ್ತು ರಷ್ಯಾಗಳೊಂದಿಗೆ ರಾಜ ತಾಂತ್ರಿಕ ಮೈತ್ರಿಯನ್ನು ಸಾಧಿಸಿಕೊಂಡು ಪೌರಾತ್ಯದಲ್ಲಿ ಜಪಾನು ತನ್ನ ಸ್ಥಾನಮಾನವನ್ನು ಭದ್ರಪಡಿಸಿಕೊಂಡಿತು. ಆದರೆ ಅಂತಿಮವಾಗಿ ಅಮೇರಿಕೆಯು ಹಿರೋಶಿಮಾ, ನಾಗಸಾಕಿಗಳ ಮೇಲೆ ಅಣುಬಾಂಬುಗಳನ್ನು ಹಾಕಿದ ಪರಿಣಾಮವಾಗಿ 1945 ರಲ್ಲಿ ಮೈತ್ರಿ ಪಡೆಗಳಿಗೆ ಜಪಾನು ಶರಣಾಯಿತು. ಜಪಾನು 1952 ರವರೆಗೆ ಮೈತ್ರಿಪಡೆಗಳ ಸ್ವಾದೀನದಲ್ಲಿತ್ತು. ಘಟಕ -7 ರಲ್ಲಿ ವಿಭಾಗಗಳಿವೆ. (157 ರಿಂದ 162 ಭಾಗಗಳು).

ವಿಭಾಗ 158 ರಲ್ಲಿ ಜಪಾನ್ ಯಾವ ಪರಿಸ್ಥಿತಿಯಲ್ಲಿ ಎರಡನೆಯ ಮಹಾಯುದ್ಧ ಪ್ರವೇಶಿಸಿತು ಎಂಬುದನ್ನು ಮತ್ತು ಫೆಸಿಪಿಕ್ ಯುದ್ಧದಲ್ಲಿ ಅದು ಆರಂಭದಲ್ಲಿ ಸಾಧಿಸಿದ ಯಶಸ್ಸು ಮತ್ತು ತದನಂತರ ಅದು ಮುಂಚೂಣಿಯಿಂದ ಹಿಂದೆ ಸರಿದದ್ದನ್ನು ಹಾಗೂ 1945 ರಲ್ಲಿ ಅದು ಶರಣಾದುದನ್ನು ವಿವರಿಸಲಾಗಿದೆ. ವಿಭಾಗ 159ರಲ್ಲಿ ಜಪಾನಿನ ವಿಸ್ತರಣಾವಾದಿ ನೀತಿಯನ್ನು ವಿವರಿಸಲಾಗಿದೆ. ಜಪಾನಿನ ತೀವ್ರ ಕೈಗಾರಿಕೀರಣ ಹಾಗೂ ಆಧುನೀಕರಣಗಳಿಂದಾಗಿ ಪೂರ್ವ ಏಷ್ಯದಲ್ಲಿ ಸನ್ನಿವೇಶ ತೀವ್ರ ಬದಲಾಯಿತು.

ಜಪಾನಿನಲ್ಲಿ ಜನಸಂಖ್ಯೆ ಅಧಿಕವಾಗಿದ್ದುದರಿಂದ, ತನ್ನ ಕೈಗಾರಿಕಾ ಸರಕುಗಳನ್ನು ಮಾರಾಟ ಮಾಡಲು ಅದಕ್ಕೆ ವಿಸ್ತೃತ ಮಾರುಕಟ್ಟೆ ಬೇಕಾಯಿತು. ವಿಸ್ತರಣಾವಾದಿ ನೀತಿಯಿಂದಾಗಿ ಜಪಾನು ಶಕ್ತಿಶಾಲಿ ರಾಷ್ಟ್ರವಾಗಿ ರೂಪುಗೊಂಡು ಅದರ ಸ್ಥಾನ ಉನ್ನತಕ್ಕೇರಿತು. ಆದರೆ ಅದೇ ನೀತಿಯು ಅದರ ಅತಃಪತನಕ್ಕೂ ಕಾರಣವಾಯಿತು.

ವಿಭಾಗ 160 ರಲ್ಲಿ ಅಗಸ್ಟ್ 14, 1945ರಲ್ಲಿ ಜಪಾನ್ ಮೈತ್ರಿ ಪಡೆಗಳಿಗೆ ಶರಣಾದ ಸಂಗತಿಯನ್ನು ಮತ್ತು ಅದು ಮೈತ್ರಿ ಪಡೆಗಳ ಸ್ವಾದೀನವಾದ ಪರಿಯನ್ನು ವಿವರಿಸಲಾಗಿದೆ. ಈ ಭಾಗದಲ್ಲಿ ಎಸ್‌ಸಿಎಫಿಯು ಜಾರಿಗೆ ತಂದ ಅನೇಕ ಸುಧಾರಣಾ ಕ್ರಮಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

ವಿಭಾಗ 161 ರಲ್ಲಿ 1952 ರ ನಂತರ ಜಪಾನಿನಲ್ಲಿ ಅಂತರಿಕವಾಗಿ ಉಂಟಾದ ಮಹತ್ವದ ಬೆಳವಣಿಗೆಗಳನ್ನು ಚರ್ಚಿಸುತ್ತೀರಿ. ಮೈತ್ರಿಪಡೆಗಳ ಸ್ವಾದೀನವು ಎಪ್ರಿಲ್ 2, 1952 ರಲ್ಲಿ ಕೊನೆಗೊಂಡಿತು. ಜಪಾನು ಒಂದು ಸ್ವತಂತ್ರ ರಾಷ್ಟ್ರವಾಗಿ ಹೊರಹೊಮ್ಮಿತು. ಕೊನೆಯ ವಿಭಾಗದಲ್ಲಿ 1952 ನಂತರದ ಜಪಾನಿನ ವಿದೇಶಿ ನೀತಿಯನ್ನು ವಿವರಿಸಲು ಮೀಸಲಿಡಲಾಗಿದೆ. ಈ ಭಾಗದಲ್ಲಿ ಅಮೇರಿಕಾ, ರಷ್ಯಾ, ಚೀನಾ ಮತ್ತು ಇವರ ಏಷ್ಯದ ದೇಶಗಳೊಂದಿಗಿನ ಜಪಾನಿನ ಸಂಬಂಧಗಳನ್ನು ಕುರಿತಂತೆ ಚರ್ಚಿಸಲಾಗಿದೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 158

# ಜಪಾನ್ ಮತ್ತು ಎರಡನೆಯ ಮಹಾಯುದ್ಧ

**ಪರಿವಿಡಿ**


158.0 ಉದ್ದೇಶಗಳು

158.1 ಪ್ರಸ್ತಾವನೆ

158.2 ಎರಡನೆಯ ಮಹಾಯುದ್ಧ : ಜಪಾನಿನ ಪ್ರವೇಶ

158.3 ಯುದ್ಧದ ಕಾರಣಗಳು

158.3.1 ಮಿಲಿಟರಿಸಮ್

158.3.2 ಜಪಾನಿನ ಆಕ್ರಮಣದ ಪ್ರಗತಿ

158.3.3. ರಷ್ಯಾದೊಂದಿಗೆ ತಾಟಸ್ಥ್ಯ ಒಪ್ಪಂದ

158.3.4 ಗ್ರೇಟ್ ಬ್ರಿಟನ್ ಜೊತೆ ಜಪಾನಿನ ಸಂಬಂಧ

158.3.5 ಅಮೇರಿಕಾ ಮತ್ತು ಜಪಾನ್

158.3.6 ತತ್ಕ್ಷಣದ ಕಾರಣಗಳು.

158.4. ಫೆಸಿಫಿಕ್ ಯುದ್ಧ (1941-1845)

158.5 ಜಪಾನಿನ ಸೋಲು ಮತ್ತು ಯುದ್ಧದ ಅಂತ್ಯ.

158.6 ಯುದ್ಧದ ಪರಿಣಾಮಗಳು.

158.7 ಸಾರಾಂಶ

158.8 ಸ್ವಯಂ ಪ್ರಗತಿಯ ಪರಾಮರ್ಶೆ

158.9 ಹೆಚ್ಚಿನ ಓದಿಗೆ ಗ್ರಂಥಗಳು

## 158.0 ಉದ್ದೇಶಗಳು

ಈ ಘಟಕದಲ್ಲಿ ಎರಡನೆಯ ಮಹಾಯುದ್ಧದಲ್ಲಿ ಜಪಾನು ನಿರ್ವಹಿಸದ ಪಾತ್ರವನ್ನು ಕುರಿತಂತೆ ಚರ್ಚಿಸಲಾಗುವುದು. ಈ ಘಟಕದ ಅಧ್ಯಯನದಲ್ಲಿ ನೀವು ಕೆಳಕಂಡ ಸಂಗತಿಗಳನ್ನು ಚರ್ಚಿಸುತ್ತೀರಿ.

ಜಪಾನು ಎರಡನೇಯ ಮಹಾಯುದ್ಧ ಪ್ರವೇಶಿಸಲು ಕಾರಣವಾದ ಪರಿಸ್ಥಿತಿ.

ಫೆಸಿಫಿಕ್ ಯುದ್ಧದಲ್ಲಿ ಜಪಾನು ಕಂಡ ಆರಂಭದ ಗೆಲುವು.

1941ಡಿಸೆಂಬರ್ 7 ರಂದು ಪೆರ್ಲ್ ಹಾರ್ಬರ್ ಮೇಲೆ ಜಪಾನಿನ ಏಕಾಏಕಿ ಆಕ್ರಮಣ ಮಹಾ ಏಷ್ಯಾ: ಸಮೃದ್ಧತೆಯ ಪ್ರಾತ

ಎಲ್ಲಾ ನೆಲೆಗಳಿಂದಲೂ ಜಪಾನಿನ ಹಿನ್ನೆಡೆ

1945ರಲ್ಲಿ ಜಪಾನಿನ ಬೇಷರತ್ ಶರಣಾಗತಿ

## 158.1 ಪ್ರಸ್ತಾವನೆ

1939 ರ ಸೆಪ್ಟಂಬರ್ ನಲ್ಲಿ ಯೂರೋಪಿನಲ್ಲಿ ಎರಡನೆಯ ಮಹಾಯುದ್ಧವು ಆರಂಭಗೂಂಡಿತು. ಅನತಿಕಾಲದಲ್ಲಿ ಇದು ಇಡೀ ಯುರೋಪ್ ಖಂಡವನ್ನು ವ್ಯಾಪಿಸುತ್ತು. ಮುಂದೆ ಅದು ತೀವ್ರಗತಿಯಲ್ಲಿ ಏಷ್ಯಾದ ರಾಜಕೀಯವನ್ನು ಪ್ರವೇಶಿಸಿತು. 1940 ರ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಹಾಲೆಂಡ್, ಬೆಲ್ಜಿಯಮ್ ಮತ್ತು ಪ್ರಾನ್ಸ್ ದೇಶಗಳು ಜರ್ಮನಿ ಪಡೆಗಳಿಗೆ ಶರಣಾದವು. ಬ್ರಿಟನ್ ಜೊತೆಗಿನ ಯುದ್ಧ ಆರಂಭಗೊಂಡಿತು. ಈ ಘಟನೆಗಳು ಜಪಾನಿನ ಚಟುವಟಿಕೆಗಳು ಮುಕ್ತ ಅವಕಾಶ ಒದಗಿಸಿದವು. ಅದು ಜರ್ಮನಿ ಮತ್ತು ಇಟಲಿಗಳ ಕೂಟಕ್ಕೆ ಹತ್ತಿರವಾಗಿ ಬಿಟ್ಟಿತು. 1940ರ ಸೆಪ್ಟೆಂಬರ್‌ನಲ್ಲಿ ತ್ರಿಪಕ್ಷೀಯ ಏಷ್ಯಾ ಒಪ್ಪಂದಕ್ಕೆ ಅವು ಸಹಿ ಹಾಕಿದವು.

ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಮೇಲೆ ಜಪಾನು ಯುದ್ಧ ಘೋಷಿಸಿತು. ಚೀನಾದಿಂದ ತಮ್ಮ ಸೈನ್ಯವನ್ನು ಹಿಂತೆಗೆದುಕೊಳ್ಳಲು ಆದೇಶಗಳನ್ನು ಒತ್ತಾಯಿಸಿತು. ಆಗಸ್ಟ್ 1940 ರಲ್ಲಿ ಚೀನಾದಲ್ಲಿದ್ದ ಪಡೆಯನ್ನು ಬ್ರಿಟನ್ ಹಿಂದೆ ಕರೆಸಿಕೊಂಡಿತು. ಜಪಾನಿಗೆ ಇದೊಂದು ಮಹತ್ವದ ಗೆಲುವಾಗಿತ್ತು. ಅನಂತರ ಜಪಾನು ಚೀನಾದ ಕರಾವಳಿಯನ್ನು ಪೂರ್ಣವಾಗಿ ವಶಪಡಿಸಿಕೊಂಡಿತು. ವಿಶ್ವದಲ್ಲಿ ತಾನೊಂದು ಶಕ್ತಿಯೆಂಬುದನ್ನು ಸಾಬೀತು ಪಡೆಸುವ ಉದ್ದೇಶದಿಂದ ಜಪಾನು ಎರಡನೆಯ ಮಹಾಯುದ್ಧ ಪ್ರವೇಶಿಸಿತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ವಸಾಹತುಗಳನ್ನು ಸ್ಥಾಪಿಸುವ ಉದ್ದೇಶವೂ ಅದಕ್ಕಿತ್ತು. ತೀವ್ರವಾಗಿ ಬೆಳೆಯುತ್ತಿದ್ದ ತನ್ನ ಜನಸಂಖ್ಯೆಯ ಸಮಸ್ಯೆಯನ್ನು ಇದರಿಂದ ಬಗೆಹರಿಸಿಕೊಳ್ಳಬಹುದೆಂದು ಅದು ಭಾವಿಸಿತ್ತು. ಪೂರ್ವ ಏಷ್ಯಾದಲ್ಲಿ ತನ್ನ ಜನರನ್ನು ನೆಲೆಗೊಳಿಸಲು ಇದರಿಂದ ಸುಲಭವಾಯಿತು.

1945ರಲ್ಲಿ ಎರಡನೆಯ ಮಹಾಯುದ್ಧವು ಶೀಘ್ರುವಾಗಿ ಕೊನೆಯನ್ನು ತಲುಪಿತು. ಜರ್ಮನಿಯ ಶರಣಾಗತಿಯ ನಂತರ ಅಮೆರಿಕಾ ಮತ್ತು ಬ್ರಿಟನ್‌ಗಳು ಜಪಾನಿನ ಮೇಲೆ ಆಕ್ರಮಣ ಮಾಡಲು ತಮ್ಮ ಪಡೆಗಳಿಗೆ ಆದೇಶ ನೀಡಿದವು. ಆಗಸ್ಟ್ 6, 1945 ರಂದು ಹಿರೋಶಿಮಾದ ಮೇಲೆ ಅಣುಬಾಂಬನ್ನು ಹಾಕಲಾಯಿತು. ಆಗಸ್ಟ್ 8 ರಂದು ಜಪಾನಿನ ಮೇಲೆ ರಷ್ಯಾ ಯುದ್ದವನ್ನು ಘೋಷಿಸಿತು. ಆಗಸ್ಟ್ 9 ರಂದು ನಾಗಸಾಕಿಯ ಜೊತೆ ಇನ್ನೊಂದು ಅಣುಬಾಂಬನ್ನು ಹಾಕಲಾಯಿತು. ಜನರಲ್ ಮೆಕಾರ್ಥರ್‌ನ ನೇತೃತ್ವದ ಪಡೆಗಳಿಗೆ ಆಗಸ್ಟ್ 14ರಂದು ಜಪಾನು ಬೇಷರತ್ತಾಗಿ ಶರಣಾಯಿತು. ಪೊಸ್ಟ್‌ಡಾಮ್ ಘೋಷಣೆಯ ನಿರ್ಬಂಧನೆಗಳಿಗನುಗುಣವಾಗಿ ಶರಣಾಗುವಂತೆ ಜಪಾನಿಗೆ ಅವಕಾಶ ನೀಡಲಾಗಿತ್ತು.

## 158.2 ಎರಡನೆಯ ಮಹಾಯುದ್ಧದಲ್ಲಿ ಜಪಾನಿನ ಪ್ರವೇಶ

ಎರಡನೆಯ ಮಹಾಯುದ್ಧವು ಆರಂಭಗೊಳ್ಳುವುದಕ್ಕೆ ಸ್ವಲ್ಪ ಸಮಯಕ್ಕೆ ಮುಂಚೆ ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯಾಗಳ ವಿರುದ್ಧ ಜರ್ಮನಿಯ ಜೊತೆ ಮಿಲಿಟರಿ ಮೈತ್ರಿಯನ್ನು ಸ್ಥಾಪಿಸಿಕೊಳ್ಳಲು ಜಪಾನಿನ ಸೈನಾಧಿಕಾರಿಗಳು ಸಕಲ ಪ್ರಯತ್ನ ನಡೆಸಿದರು. ಫ್ರಾನ್ಸ್ 1940ರಲ್ಲಿ ಸೋತ ನಂತರ ಬ್ರಿಟನ್‌ನ ಭವಿಷ್ಯ ಡೋಲಾಯಮಾನವಾಯಿತು. ಈ ಸಂದರ್ಭವನ್ನು ಸದುಪಯೋಗ ಪಡಿಸಿಕೊಂಡ ಜಪಾನು ಆಗ್ನೇಯ ಏಷ್ಯಾದ ಮೇಲೆ ಆಕ್ರಮಣ ನಡೆಸಿತು. ಇಂಡೋ-ಚೀನಾದಲ್ಲಿನ ಫ್ರಾನ್ಸಿನ ಗೌವರ್ನರ್ ಜನರಲ್‌ಗೆ ಅಲ್ಲಿನ ವಿಮಾನ ನಿಲ್ದಾಣಗಳಲ್ಲಿ ತಮಗೆ ಅವಕಾಶ ನೀಡುವಂತೆ ಅಂತಿಮ ಎಚ್ಚರಿಕೆಯನ್ನು ಜಪಾನು ನೀಡಿತು. ವಿಮಾನ ನಿಲ್ದಾಣಗಳು ಡಚ್‌ನ ಈಸ್ಟ್ ಇಂಡಿಸ್‌ಗೆ ಬಹಳ ಹತ್ತಿರ ಇದ್ದುದರಿಂದ ಜಪಾನ್ ತನಗೆ ಅವಶ್ಯವಾಗಿ ಬೇಕಾಗಿದ್ದ ಸಕ್ಕರೆ, ಅಕ್ಕಿ, ರಬ್ಬರ್, ಎಣ್ಣೆ ಮುಂತಾದ ಸರಕುಗಳನ್ನು ಆಮದು ಮಾಡಿಕೊಳ್ಳುವುದು ಸುಲಭವಾಗುತ್ತಿತ್ತು. ಜಪಾನಿನ ಒತ್ತಾಯಕ್ಕೆ ಫ್ರಾನ್ಸಿನ ಗೌರ್ವನರ್ ಜನರಲ್ ಮಣಿಯ ಬೇಕಾಯಿತು. ಜಪಾನಿಗೆ ಉತ್ತರಾಭಿಮುಖಿ ವಿಸ್ತರಣೆ ಇದರಿಂದ ಅನುರ್ಬಾಧಿತವಾಗಿ ಸಾಗಿತು.

ಈ ಮಧ್ಯ 1940ಸೆಪ್ಟೆಂಬರ್‌ನಲ್ಲಿ ಜಪಾನು ರೋಮ್-ಬರ್ಲಿನ್ ಕೂಟವನ್ನು ಸೇರಿಕೊಂಡಿತು. ಇದು ಮುಂದೆ 'ರೋಮ್ -ಬರ್ಲಿನ್ -ಟೋಕಿಯೋ' ಕೂಟವೆಂದು ಪ್ರಸಿದ್ಧವಾಯಿತು. ಈ ತ್ರಿಪಕ್ಷಿಯ ಒಪ್ಪಂದದ ಪ್ರಕಾರ ಹಿಟ್ಲರ್ ಮತ್ತು ಮುಸೊಲೋನಿಯವರು ಯುರೋಪಿನಲ್ಲಿ ಹೊಸದೊಂದು ಅಧಿಪತ್ಯವನ್ನು ಸ್ಥಾಪಿಸಬೇಕಾಗಿತ್ತು ಮತ್ತು ಜಪಾನಿನ ಮಿಲಿಟರಿಯ ನೇತೃತ್ವದಲ್ಲಿ ಏಷ್ಯಾ ಖಂಡದಲ್ಲಿ 'ಮಹಾಪೂರ್ವ ಏಷ್ಯಾ ಸಮೃದ್ಧತೆಯ ಪ್ರಾಂತ'ವನ್ನು ಸ್ಥಾಪಿಸಬೇಕಾಗಿತು. ಯುರೋಪು ಮತ್ತು ಏಷ್ಯಾಗಳಲ್ಲಿನ ಇಂತಹ ಬೆಳವಣಿಗೆಗಳು ಸದರಿ ಖಂಡಗಳಲ್ಲಿನ ಅಮೇರಿಕಾದ ಹಿತಾಸಕ್ತಿಗಳಿಗೆ ಪೂರ್ಣ ದಕ್ಕೆ ಉಂಟುಮಾಡಿಬಿಟ್ಟವು. ಅಮೇರಿಕಾ ಮತ್ತು ಜಪಾನುಗಳ ನಡುವಣ ಸಂಬಂಧವು ತೀವ್ರ ಸಂಘರ್ಷದ ಹಂತ ತಲುಪಿದವು. ಜಪಾನಿನ ರಾಜಕೀಯ ನೇತಾರರು ಮತ್ತು ಅಲ್ಲಿನ ಪ್ರಧಾನ ಮಂತ್ರಿ ಯುದ್ಧವನ್ನು ತಪ್ಪಿಸಲು ತುಂಬಾ ಕಾತುಕರಾಗಿದ್ದರೂ. ಈ ದಿಶೆಯಲ್ಲಿ ಸಂಘರ್ಷವನ್ನು ಬಗೆಹರಿಸುವ ಸಲುವಾಗಿ ಅಮೇರಿಕೆಯ ಜೊತೆ ಸಂಧಾನಕ್ಕೂ ಅವರು ಸಿದ್ಧರಿದ್ದರು. ಈ ಸಂದರ್ಭದಲ್ಲಿ ಜಪಾನಿನ ವಿದೇಶಾಂಗ ಸಚಿವರು ಯುರೋಪಿನಲ್ಲಿ ಪ್ರವಾಸದಲ್ಲಿದ್ದರೂ. ಇದರಿಂದಾಗಿ ಸಂಧಾನವು ತಡವಾಯಿತು.

ಬರ್ಲಿನ್‌ನಲ್ಲಿ ಜಪಾನಿನ ವಿದೇಶಾಂಗ ಮಂತ್ರಿ ಮಾಕ್ಸೂಕೊಗೆ ಜರ್ಮನಿಯ ನಾಜಿ ನಾಯಕರು ಅಮೇರಿಕಾದ ವಿರುದ್ಧ ಎಲ್ಲ ನೆರವು ನೀಡುವ ಭರವಸೆ ನೀಡಿದರು. ಮಾಕ್ಸುಕೆ ಮಾಸ್ಕೋದಲ್ಲಿ ತಂಗಿದ್ದು ಅವನು ಏಪ್ರಿಲ್ 1941ರಂದು ರಷ್ಯಾ -ಜಪಾನು ತಾಟಸ್ಥ್ಯ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಜಪಾನು ಅಥವಾ ರಾಷ್ಯ ಯುದ್ಧಕ್ಕೆ ಇಳಿದರೆ ಯಾರು ಯುದ್ಧದಲ್ಲಿ ತೊಡಗಿರುವುದಿಲ್ಲವೊ ಅಂತಹ ಮೂರನೆ ಪಕ್ಷವು ತಟಸ್ಥ ನೀತಿ ಅನುಸರಿಸಬೇಕಾಗಿತ್ತು. ಮನ್‌ಚುಕೋದ ಗಡಿಯನ್ನು ಗೌರವಿಸಲು ರಷ್ಯಾ ಬದ್ಧವಾಗಿದ್ದರೆ ಮಂಗೋಲಿಯಾನನ್ನು ಗೌರವಿಸುವ ನಿಬಂಧನೆಗೆ ಜಪಾನು ಬದ್ಧವಾಗಿತ್ತು. ಮಾಕ್ಸುಟೋನ ಯುರೋಪು ಪ್ರವಾಸವು ಜಪಾನಿನ ಯುದ್ಧ ಪ್ರವೇಶದ ಹಿಂದಿನ ಪ್ರಮುಖ ಕಾರಣವಾಗಿದೆ. ಮಾಸ್ಕೋ ಒಪ್ಪಂಧದಿಂದಾಗಿ ಜಪಾನಿನ ಗಡಿಗಳು ಭದ್ರವಾದವು. ಹಿಟ್ಲರ್‌ನ ಆಶ್ವಾಸನೆಯು ಜಪಾನಿನಿ ಮಿಲಿಟರಿ ಅಧಿಪತಿಗಳಲ್ಲಿ ಹೆಚ್ಚಿನ ವಿಶ್ವಾಸ ಹುಟ್ಟಿಸಿತು. ಇದರಿಂದಾಗಿ ಜಪಾನು ಮತ್ತು ಅಮೇರಿಕೆಯ ನಡುವೆ ಸಂಧಾನದ ಮಾತುಕತೆಗೆ ಅವಕಾಶವಿಸಲ್ಲದಂತಾಯಿತು. ಜಪಾನಿನ ಯುದ್ಧ ಸಚಿವನಾಗಿದ್ದ ಜನರಲ್ ಟೋಜೋನ ಹಟಮಾರಿತನದಿಂದಾಗಿ ಪರ್ಯಾಯ ದಾರಿ ಕಾಣದೆ ಪ್ರಧಾನಿ ಕೋನೋಯ ರಾಜಿನಾಮೆ ನೀಡಬೇಕಾಯಿತು. ಚಕ್ರವರ್ತಿಯ ರಾಜಿನಾಮೆಯ ನಂತರ ಟೋಜೋ ಪ್ರಧಾನಿಯಾಗಿ ತನ್ನದೇ ಮಂತ್ರಿ ಮಂಡಲ ರಚಿಸಿದರು. ಯುದ್ಧ ಪ್ರವೇಶಕ್ಕೆ ಎಲ್ಲವೂ ಸಿದ್ಧವಾಗಿದ್ದವು. ಮಿತ್ರಪಕ್ಷಗಳ ವಿರುದ್ಧ ಹೋರಾಟ ಮಾಡುವ ಸಲುವಾಗಿ ಜಪಾನು ಎರಡನೆಯ ಮಹಾಯುದ್ಧ ಪ್ರವೇಶಿಸಿತು.

## 158.3 ಯುದ್ಧದ ಕಾರಣಗಳು

ಈ ಯುದ್ಧಕ್ಕೆ ಅನೇಕ ಕಾರಣಗಳನ್ನು ನೀಡಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

### *158.3.1 ಮಿಲಿಟರಿಸಮ್*

ನಿಧಾನವಾಗಿ ಮತ್ತು ನಿರ್ದಿಷ್ಟವಾಗಿ ಜಪಾನಿನ ರಾಜಕೀಯದಲ್ಲಿ ಮಿಲಿಟರಿಯ ಪ್ರಭಾವ ಹೆಚ್ಚಾಗುತ್ತಾ ಬಂದಿತು. ಎರಡನೆಯ ಚೀನಾ-ಜಪಾನು ಯುದ್ಧವು ಮಿಲಿಟರಿ ಶಾಹಿ ಮತ್ತು ಸಾಮ್ರಾಜ್ಯಶಾಹಿ ಮನೋಭಾವದ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿತು. ಮಿಲಿಟರಿಶಾಹಿಗೆ ಫಲವತ್ತಾದ ಭೂಮಿಕೆ ಸಿದ್ಧವಾಗಿಬಿಟ್ಟಿತು. ಜಪಾನಿನಲ್ಲಿ ಫಾಸಿಸ್ಟ್ ಶಕ್ತಿಗಳು ಉದ್ಭವಿಸಿದವು. ಮಿಲಿಟರಿಯ ಮೇಲೆ ವಿಶ್ವಾಸ ಅಧಿಕವಾಗತೊಡಗಿತು. ಜನರಲ್ ಟೋಜೋ ಹೊಸದಾಗಿ ರಚಿಸಿದ್ದ, ಮಿಲಿಟರಿ ಏವಿಯೇಷನ್ ಇಲಾಖೆಯ ಮುಖ್ಯಸ್ಥನಾದನು. 'ಏಷ್ಯಾ ಏಷ್ಯನ್ನರಿಗೆ', 'ಹೊಸ ರಾಜಕೀಯ ವ್ಯವಸ್ಥೆ', 'ಮಹಾಪೂರ್ವ ಏಷ್ಯಾ ಸಮೃದ್ಧತೆಯ ಪ್ರಾಂತ'ಮುಂತಾದ ಘೋಷಣೆಗಳಲ್ಲಿ ಜಪಾನಿನ ಸಾಮ್ರಾಜ್ಯಶಾಹಿ ಆಕಾಂಕ್ಷೆಗಳನ್ನು ಗುರುತಿಸಬಹುದಾಗಿದೆ. ಮಿಲಿಟರಿ ಕಾರ್ಯಚರಣೆ ಮೂಲಕ ಜಪಾನ್ -ವಿರೋಧಿ ಕೋಮಿಂಗ್‌ಟಾಂಗ್ ಅಧಿಪತ್ಯವನ್ನು ಸಂಪೂರ್ಣವಾಗಿ ಧ್ವಂಸ ಮಾಡಲು ಜಪಾನ್ ಸರ್ಕಾರವು ನಿರ್ಣಯ ಮಾಡಿದೆಯೆಂದು ಪ್ರಧಾನಿ ಕೊನೋಯ ಘೋಷಿಸಿದನು. ಪೂರ್ವ ಏಷ್ಯಾದಲ್ಲಿ ಹೊಸ ಅಧಿಪತ್ಯ ಸ್ಥಾಪಿಸುವ ತನ್ನ ಕಾರ್ಯಯೋಜನೆಯಲ್ಲಿ ಜಪಾನು ಚೀನಾವನ್ನು ಸೇರಿಸಿಕೊಂಡಿತು. ಈ ಹೊಸ ಅಧಿಪತ್ಯದ ಕಾರ್ಯಸೂಚಿಯಲ್ಲಿ ಮೂರು ಪಕ್ಷಗಳಾದ ಜಪಾನು, ಮುನ್‌ಚಕೊ ಮತ್ತು ಚೀನಾ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪರಸ್ಪರ ನೆರವು ನೀಡಬೇಕು ಮತ್ತು ಸಹಕಾರ ನೀಡಬೇಕು ಎಂಬ ನಿರ್ಬಂಧನೆಯಿತ್ತು. ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯನ್ನು ಧ್ವಂಸಗೊಳಿಸುವ ಆಕಾಂಕ್ಷೆಯು ಮಿಲಿಟರಿ ಮುಖಂಡರಲ್ಲಿತ್ತು. ಜಪಾನು ತನ್ನ 1941ರ ಪ್ರಣಾಳಿಕೆಯಲ್ಲಿ ಶಾಂತಿಯ ಸ್ಥಾಪನೆಗಾಗಿ ಆಗ್ನೇಯ ಏಷ್ಯಾದಲ್ಲಿ ಬಿಳಿಯರ ಆಳ್ವಿಕೆಯನ್ನು -ಪ್ರಾಬಲ್ಯವನ್ನು ಕಿತ್ತೊಗೆಯಬೇಕೆಂದು ಕರೆ ನೀಡಲಾಗಿತು.

### *158.3.2 ಜಪಾನಿನ ಆಕ್ರಮಣದ ಪ್ರಗತಿ*

ಎರಡನೆಯ ಮಹಾಯುದ್ಧವು 1939ರಲ್ಲಿ ಆರಂಭಗೊಂಡ ಮೇಲೆ ಜಪಾನು ನಡೆಸಿದ ಆಕ್ರಮಣವು ಪೂರ್ವ ಏಷ್ಯಾದಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಯಿತು. ಅದು ಚೀನಾದ ಮೇಲೆ ಉಗ್ರವಾಗಿ ಮತ್ತು ಆತ್ಮವಿಶ್ವಾಸದಿಂದ ಆಕ್ರಮಣ ನಡೆಸಿತು. ಬ್ರಿಟನ್, ಫ್ರಾನ್ಸ್ ಮತ್ತು ಹಾಲೆಂಡುಗಳು ಯುರೋಪ್‌ನಲ್ಲಿ ಬೀಕರ ಕದನದಲ್ಲಿ ತೊಡಗಿದವು. ಇದರಿಂದಾಗಿ ಪೂರ್ವ ಏಷ್ಯಾದ ತಮ್ಮ ವಸಾಹತುಗಳ ಮೇಲಿನ ಅವುಗಳ ಹಿಡಿತವು ಸಡಿಲವಾಗತೊಡಗಿತು. ಪೂರ್ವಏಷ್ಯಾದಲ್ಲಿ 'ಸಮೃದ್ಧತೆಯ ಪ್ರಾಂತ'ವನ್ನು ಕಟ್ಟುವ ಜಪಾನಿನ ಆಕಾಂಕ್ಷೆಗೆ ಅವಕಾಶ ಒದಗಿಬಂದಿತು. ತನ್ನ ಸ್ಥಾನಮಾನವನ್ನು ಮತ್ತಷ್ಟು ಭದ್ರಪಡಿಸಿಕೊಳ್ಳುವ ಸಲುವಾಗಿ ಅದು ಯುರೋಪಿನ ಪ್ರಬಲ ರಾಷ್ಟ್ರಗಳೊಂದಿಗೆ ರಾಜತಾಂತ್ರಿಕ ಸಂಬಂಧ ಸಾಧಿಸಿಕೊಳ್ಳುವ ಸಲುವಾಗಿ ಸಂಧಾನವನ್ನು ಪ್ರಾರಂಭಿಸಿತು. ಜಪಾನು 1937ರಲ್ಲಿ ಜರ್ಮನಿ ಮತ್ತು ಇಟಲಿಗಳ ಜೊತೆ 'ಕಮ್ಮಿನ್‌ಟರ್ನ್ ವಿರೋಧಿ ಒಪ್ಪಂದಕ್ಕೆ ಸಹಿ ಹಾಕಿತು. ಕಮ್ಮಿನ್‌ಟರ್ನ್ ಶಕ್ತಿಯ ವಿರುದ್ಧ ಹೋರಾಡಲು ಮೂರು ದೇಶಗಳು ಸಮ್ಮತಿಸಿದವು. ಜರ್ಮನಿ ಇಟಲಿಯ ಜೊತೆಗಿನ ಜಪಾನಿನ ಸಂಬಂಧವು ಅನೋನ್ಯವಾಗಿ ಸೌಹಾರ್ದಯವಾಗಿ ಬೆಳೆಯ ತೊಡಗಿತು. ಎರಡನೆಯ ಮಹಾಯುದ್ಧದ ಆರಂಭದಲ್ಲಿ ಯುರೋಪಿನಲ್ಲಿ ಜರ್ಮನಿಯು ಸಾಧಿಸಿಕೊಂಡ ವಿಜಯವು ಪೂರ್ವ ಏಷ್ಯಾದಲ್ಲಿ ತನ್ನ ಆಕ್ರಮಣವನ್ನು ಮುಂದುವರಿಸಲು ಜಪಾನಿಗೆ ಹೆಚ್ಚಿನ ಉತ್ತೇಜನ ದೊರಕಿದಂತಾಯಿತು. ಇದಲ್ಲದೆ ಜಪಾನು 1940ರಲ್ಲಿ ಜರ್ಮನಿ ಮತ್ತು ಇಟಲಿಗಳ ಜೊತೆ ಮಿಲಿಟರಿ ಮೈತ್ರಿಯ ಒಪ್ಪಂದಕ್ಕೆ ಸಹಿ ಹಾಕಿತು. ಈ ಒಪ್ಪಂದದ ಪ್ರಕಾರ ಒಂದು ವೇಳೆ ಯುರೋಪಿನ ಯುದ್ಧದಲ್ಲಿ ತೊಡಗಿರುವ ದೇಶವೊಂದು ಅಥವಾ ಚೀನ-ಜಪಾನ್ ನಡುವೆ ಸಂಘರ್ಷ ಉಂಟಾದರೆ ಈ ಮೂರು ದೇಶಗಳಲ್ಲಿ ಯಾವುದಾದರೊಂದು ದೇಶದ ಮೇಲೆ ಆಕ್ರಮಣ ನಡೆದರೆ ಅವು ಪರಸ್ಪರ ಮಿಲಿಟರಿ ಮತ್ತು ಹಣಕಾಸು ನೆರವು ನೀಡಲು ಒಪ್ಪಿಕೊಂಡವು.

### 158.3.3 ರಷ್ಯಾದ ಜೊತೆ ತಾಟಸ್ಥ್ಯ ಒಪ್ಪಂದ (1940)

ರಷ್ಯಾವನ್ನು ತನ್ನ ಜೊತೆ ಸೇರಿಸಿಕೊಳ್ಳಲು ಜಪಾನು ಅನೇಕ ಮೈತ್ರಿ ಒಪ್ಪಂದವನ್ನು ಮಾಡಿಕೊಳ್ಳಲು ಪ್ರಯತ್ನಿಸಿತು. ಈಗಾಗಲೇ ತಿಳಿಸಿರುವಂತೆ ರಷ್ಯಾ ಜಪಾನು ಸಂಬಂಧಗಳು ಪೂರ್ವ ಏಷ್ಯಾ ರಾಜಕೀಯಕ್ಕೆ ಸಂಬಂಧಿಸಿದಂತೆ ಸೌಹಾರ್ದಯುತವಾಗಿರಲ್ಲಿಲ್ಲ. ಇವೆರಡೂ ದೇಶಗಳು ಮಂಚೂರಿಯಾ ಮತ್ತು ಕೊರಿಯಾ ಪ್ರದೇಶದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಪರಸ್ಪರ ಸೆಣಸಾಡುತ್ತಿದ್ದವು. ಪೂರ್ವ ಏಷ್ಯಾದ ತನ್ನ ಪ್ರಾಬಲ್ಯವನ್ನು ಭದ್ರಪಡಿಸಿಕೊಳ್ಳುವ ರಷ್ಯಾದ ಪ್ರಯತ್ನದಿಂದಾಗಿ ಜಪಾನಿನ ಜೊತೆ ಎರಡು ಉಗ್ರ ಗಡಿ ತಂಟೆಗಳು ಉಂಟಾಗಿಬಿಟ್ಟಿದ್ದವು. ಮೊದಲನೆಯದು 1938ರ ಸೈಬೀರಿಯನ್ ಮಂಚು ಕುಹಾನ್ ಪ್ರದೇಶದಲ್ಲಿನ ಚಾಂಗ್ ಕೊಪೆಂಗ್ ಗುಡ್ಡಗಾಡು ಪ್ರದೇಶಕ್ಕೆ ಸಂಬಂಧಿಸಿದಂತೆ, ಎರಡನೆಯದು 1939ರ ಮಂಗೋಲಿಯಾ -ಸೈಬೀರಿಯಾ ಗಡಿಭಾಗಕ್ಕೆ ಸಂಬಂಧಿಸಿತ್ತು. ಜಪಾನು ಮತ್ತು ರಷ್ಯಾಗಳ ನಡುವಿನ ಸಂಬಂಧದ ಮೇಲೆ ಮುಂದಿನ ವರ್ಷಗಳಲ್ಲಿ ಸದರಿ ಒಪ್ಪಂದವು ತೀವ್ರ ಪರಿಣಾಮ ಬೀರಿತು. ಜರ್ಮನಿಯ ಮತ್ತು ರಷ್ಯಾಗಳ ನಡುವಿನ ಸಂಬಂಧದ ಮೇಲೆ ಮುಂದಿನ ವರ್ಷಗಳಲ್ಲಿ ಸದರಿ ಒಪ್ಪಂದವು ತೀವ್ರ ಪರಿಣಾಮ ಬೀರಿತು. ಜರ್ಮನಿಯ ಮಿತ್ರ ರಾಷ್ಟ್ರವಾದ ಜಪಾನಿಗೆ ರಷ್ಯಾದ ಜೊತೆಯಲ್ಲಿ ವೈರತ್ವ ಕಟ್ಟಿಕೊಳ್ಳುವುದು ಬೇಕಿರಲಿಲ್ಲ. ರಷ್ಯಾದ ಜೊತೆ ಮಿತೃತ್ವದ ಒಪ್ಪಂದ ಮಾಡಿಕೊಳ್ಳಲು ಜಪಾನು ಪ್ರಯತ್ನಿಸಿತು. ಯುರೋಪಿನಲ್ಲಿರುವ ಪರಿಸ್ಥಿತಿಯ ಅಧ್ಯಯನಕ್ಕಾಗಿ ವಿದೇಶಾಂಗ ಮಂತ್ರಿ ಮ್ಯಾಟ್ ಸಾಕ್‌ನನ್ನು ಬರ್ಲಿನ್‌ಗೆ ಕಳುಹಿಸಲಾಯಿತು. ನಂತರ ಮಾಸ್ಕೊಗೆ ಭೇಟಿ ನೀಡಿ 1941ರ ಏಪ್ರಿಲ್‌ನಲ್ಲಿ ರಷ್ಯಾದ ಜೊತೆ ತಾಟಸ್ಥದ ಒಪ್ಪಂದ ಮಾಡಿಕೊಳ್ಳಲು ಅದು ಉದೇಶಿಸಿತ್ತು. ಈ ಒಪ್ಪಂದದ ಪ್ರಕಾರ ಎರಡು ದೇಶಗಳು ಪರಸ್ಪರ ಗಡಿ ರೇಖೆಗಳನ್ನು ಗೌರವಿಸಬೇಕಾಗಿತ್ತು. ಯಾವುದೇ ಮೂರನೆಯ ದೇಶ ಇವೆರಡರಲ್ಲಿ ಯಾವುದಾದರೂ ಒಂದರ ಮೇಲೆ ಆಕ್ರಮಣ ಮಾಡಿದಾಗ ಉಳಿದ ದೇಶ ತಟಸ್ಥವಾಗಿರಬೇಕಾಗಿತ್ತು. ಹೀಗೆ ಜರ್ಮನಿ, ಇಟಲಿ ಮತ್ತು ರಷ್ಯಾಗಳ ಜೊತೆ ಒಪ್ಪಂದ ಮಾಡಿಕೊಂಡು ಪೂರ್ವ ಭಾಗದಲ್ಲಿ ತನ್ನ ಸ್ಥಾನಮಾನವನ್ನು ಪ್ರಬಲವಾಗಿ ಭದ್ರಪಡಿಸಿಕೊಂಡಿತು.

### 158.3.4 ಗ್ರೇಟ್ ಬ್ರಿಟನ್ ಜೊತೆ ಜಪಾನಿನ ಸಂಬಂಧ

ಜಪಾನು ಮತ್ತು ಇಂಗ್ಲೆಂಡ್‌ಗಳ ನಡುವಣ ಸಂಬಂಧ ಸೌಹಾರ್ದಯುತವಾಗಿರಲಿಲ್ಲ. ಜಪಾನು ಮತ್ತು ಇಂಗ್ಲೆಂಡ್ ಮೈತ್ರಿ ಒಪ್ಪಂದದಿಂದಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಪಾನಿನ ಪ್ರತಿಷ್ಟೆ ಉತ್ತಮಗೊಂಡಿತು. ಈ ಒಪ್ಪಂದವನ್ನು ವಾಷಿಂಗ್‌ಟನ್ ಸಮಾವೇಶದ ಸಂದರ್ಭದಲ್ಲಿ ಕೊನೆಗೊಳಿಸಲಾಯಿತು. ಇದಾದ ಮೇಲೂ ಇಂಗ್ಲೆಂಡ್ ಜಪಾನಿನ ಜೊತೆ ಸ್ನೇಹದಿಂದಲೇ ಇತ್ತು. ಆದರೆ 1930ರ ದಶಕದಲ್ಲಿ ಬ್ರಿಟನ್ನಿನ ವಾಣಿಜ್ಯ ಹಿತಾಸಕ್ತಿಗಳು ಬಹಳ ವ್ಯಾಪಕವಾಗಿದ್ದ ಚೀನಾವನ್ನು ಹತ್ತಿಕ್ಕಲು ಜಪಾನು ನಿರ್ಧರಿಸಿತು. ಇದನ್ನು ಇಂಗ್ಲೆಂಡಿಗೆ ಸಹಿಸಲಾಗಲಿಲ್ಲ. ಚೀನಾಕ್ಕೆ ಇಂಗ್ಲೆಂಡ್ ನೆರವು ನೀಡಲು ತೀರ್ಮಾನಿಸಿತು. ಚೀನಾದಲ್ಲಿದ್ದ ಬ್ರಿಟಿಷ್ ನಾಗರೀಕರನ್ನು ಜಪಾನು ಅವಮಾನಗೊಳಿಸ ತೊಡಗಿತು. ಚೀನಾಕ್ಕೆ ಇಂಗ್ಲೆಂಡ್ ನೆರವನ್ನು ಕಡಿತಗೊಳಿಸುವ ಉದ್ದೇಶದಿಂದ ಬರ್ಮಾ-ಚೀನಾ ಮಾರ್ಗವನ್ನು ನಿಷೇದಿಸಲು ಜಪಾನು ಒತ್ತಾಯ ಮಾಡತೊಡಗಿತು. ಚೀನಾದಲ್ಲಿನ ತನ್ನ ನಾಗರಿಕರಿಗೆ ಉಂಟಾಗುತ್ತಿರುವ ಅವಮಾನಕ್ಕೆ ಇಂಗ್ಲೆಂಡಿನ ಪ್ರತಿಭಟನೆಯನ್ನು ಜಪಾನ್ ತಿರಸ್ಕರಿಸಿಬಿಟ್ಟಿತು. ಜಪಾನಿನ ವಿರುದ್ಧ ಇಂಗ್ಲೆಂಡಿಗೆ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳುವುದು ಸಾಧ್ಯವಾಗಲಿಲ್ಲ. ಏಕೆಂದರೆ ಹಿಟ್ಲರ್‌ನ ಅಟ್ಟಹಾಸದಿಂದಾಗಿ ಇಂಗ್ಲೆಂಡ್ ಯುರೋಪಿನಿಂದ ಕಾಲ್ತೆಗೆಯುವಂತಿರಲಿಲ್ಲ. ಜಪಾನಿನ ವರ್ತನೆಯಿಂದ ಇಂಗ್ಲೆಂಡ್ ರೋಸಿ ಹೋಯಿತು. ಅದು ಮಲಯ ಮತ್ತು ಬರ್ಮಾಗಳಲ್ಲಿ ತನ್ನ ನೆಲೆಗಳನ್ನು ಭದ್ರಪಡಿಸಿಕೊಳ್ಳತೊಡಗಿತು.

### 158.3.5 ಅಮೇರಿಕಾ ಮತ್ತು ಜಪಾನ್

ಜಪಾನು ಪೂರ್ವ ಏಷ್ಯಾದಲ್ಲಿ ಅನುಸರಿಸುತ್ತಿದ್ದ ವಿಸ್ತರಣಾ ನೀತಿಯಿಂದಾಗಿ ಅಮೇರಿಕಾದ ಆಸಕ್ತಿ ಕೆರಳಿತು. ಜಪಾನು 1937ರಲ್ಲಿ ಚೀನಾದ ಮೇಲೆ ಪೂರ್ಣಪ್ರಮಾಣದ ಆಕ್ರಮಣ ನಡೆಸಿದ ಮೇಲೆ ಅಮೇರಿಕೆಯಲ್ಲಿ ಜಪಾನು ವಿರೋಧಿ ಮನೋಭಾವ

ಗಟ್ಟಿಯಾಗತೊಡಗಿತು. ಅಸ್ತವ್ಯಸ್ತ ಸ್ಥಿತಿಯಲ್ಲಿದ್ದ ಚೀನಾದ ಮೇಲೆ ಉದ್ದೇಶ ಪೂರ್ವಕವಾಗಿ ಆಕ್ರಮಣ ನಡೆಸಿದ ದೇಶವೆಂದು ಜಪಾನನ್ನು ಅಮೇರಿಕಾ ಕರೆಯಿತು. ಜಪಾನು ರೋಮ್ -ಬರ್ಲಿನ್ ಮೈತ್ರಿಕೂಟ ಸೇರಿದ ಅದು ಪೂರ್ವ ಏಷ್ಯಾದಲ್ಲಿ ನಡೆಸುತ್ತಿದ್ದ ಕಾರ್ಯಚರಣೆಯಿಂದಾಗಿ ಅಮೇರಿಕಾ ಪೂರ್ಣವಾಗಿ ಎಚ್ಚೆತ್ತುಕೊಂಡಿತು. ಜಪಾನಿನ ಆಕ್ರಮಣಕಾರಿ ನಡೆಯನ್ನು ತಡೆಯುವ ಉದ್ದೇಶದಿಂದ ಅದರ ಮೇಲೆ ಅಮೆರಿಕಾವು ಅನೇಕ ನಿರ್ಬಂಧಗಳನ್ನು ಹೇರಿತು. ಅಮೇರಿಕಾವು 1940ರಲ್ಲಿ ಜಪಾನಿನ ಪೆಟ್ರೋಲಿಯಂ ಉತ್ಪನ್ನಗಳ ಆಮದಿನ ಮೇಲೆ ನಿರ್ಬಂಧನ ಹೇರಿತು. ಜಪಾನು 1940ರಲ್ಲಿ ನ್ಯಾರಿಕಿಂಗ್‌ನಲ್ಲಿ ಸ್ಥಾಪಿಸಿದ್ದ ತನ್ನ ಕೈಗೊಂಬೆ ಸರ್ಕಾರಕ್ಕೆ ಅಮೇರಿಕಾ ಮನ್ನಣೆ ನೀಡಲು ನಿರಾಕರಿಸಿತು. ಇದಕ್ಕೆ ಪ್ರತಿಯಾಗಿ ಚಿಯಾಂಗ್ ಕೈಶೇಕ್ ಆಳ್ವಿಕೆಗೆ ಅಮೇರಿಕಾವು ಹಣಕಾಸು ನೆರವನ್ನು ಒದಗಿಸತೊಡಗಿತು. ಜಪಾನಿನ ಜೊತೆಗಿದ್ದ ವಾಣಿಜ್ಯ ಒಪ್ಪಂದವನ್ನು ಅದು ತಿರಸ್ಕರಿಸಿತು. ಅಂತಿಮವಾಗಿ ಫ್ರಾನ್ಸಿನ ದುರ್ಬಲ ಸರ್ಕಾರವು ಇಂಡೋ-ಚೀನಾ ಪ್ರದೇಶವನ್ನು ಆಕ್ರಮಿಸಿಕೊಳ್ಳಲು ಜಪಾನಿಗೆ ಅವಕಾಶ ನೀಡಿದಾಗ ಮತ್ತು ಅಲ್ಲಿನ ವಾಯು ನಿಲ್ದಾಣಗಳನ್ನು ಬಳಸಲು ಅನುಮತಿ ನೀಡಿದಾಗ ಅಮೇರಿಕೆಯು ಅನಿವಾರ್ಯವಾಗಿ ಜಪಾನಿನ ಆಸ್ತಿಯೆಲ್ಲವನ್ನು 1944ರಲ್ಲಿ ಮುಟ್ಟುಗೋಲು ಹಾಕಿಕೊಂಡಿತು. ಇದರಿಂದಾಗಿ ಎರಡು ದೇಶಗಳ ನಡುವಿನ ವ್ಯಾಪಾರ ಸ್ತಂಬ್ಧಗೊಂಡಿತು. ಜಪಾನಿನ ಮೇಲೆ ಅಮೇರಿಕೆಯು ವಿಧಿಸಿದ ನಿರ್ಬಂಧ ಮತ್ತು ನಿಯಂತ್ರಣಗಳಿಂದಾಗಿ ಎರಡೂ ದೇಶಗಳ ನಡುವಣ ಸಂಬಂಧ ತೀವ್ರವಾಗಿ ಹದಗೆಟ್ಟಿತು.

### *158.3.6 ತತ್‌ಕ್ಷಣದ ಕಾರಣಗಳು*

ಆಗ್ನೇಯ ಏಷ್ಯಾದಲ್ಲಿ ಜಪಾನು ತನ್ನ ಸರ್ವಾಧಿಕಾರವನ್ನು ಸ್ಥಾಪಿಸಲು ಬಯಸಿತು. ಜಪಾನಿನ ಸಾಮ್ರಾಜ್ಯಶಾಹಿಯ ವಿಸ್ತರಣೆಯನ್ನು ವಿರೋಧಿಸುವ ತೀರ್ಮಾನವನ್ನು ಅಮೆರಿಕಾ ತೆಗೆದುಕೊಂಡಿತು. ಸಂಧಾನಗಳ ಮೂಲಕ ಜಪಾನು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿತು. ಆದರೆ ಅದರಲ್ಲಿ ಅದು ಯಶಸ್ವಿಯಾಗಲಿಲ್ಲ. ಅನಿವಾರ್ಯವಾಗಿ ಜಪಾನು ಯುದ್ಧದ ದಾರಿ ಹಿಡಿಯಬೇಕಾಯಿತು. ಈ ಉದ್ದೇಶದಿಂದ ಸಂಧಾನಗಳು ಪ್ರಾರಂಭವಾದವು. ತಿಂಗಳಾನುಗಟ್ಟಲೆ ಮಾತುಕತೆಗಳು ಮುಂದುವರೆದವು. ಜಪಾನಿನ ಪರವಾಗಿ ಅಡ್ಮಿರಲ್ ಕಿಶಿಸಬುರೊ ಗೊಮುರಾ ಮತ್ತು ಕುರುಸು ಸಂಧಾನದ ಮಾತುಕತೆ ನಡೆಸಿದರು. ಆದರೆ ಒಪ್ಪಂದಕ್ಕೆ ಸಾಧ್ಯವಾಗುವ ಪರಿಸ್ಥಿತಿ ಇರಲಿಲ್ಲ. ಈ ಮಾತುಕತೆಗಳ ವೈಫಲ್ಯವೇ ಅಮೆರಿಕೆಯ ನೌಕನೆಲೆಯಾಗಿದ್ದ ಪರ್ಲ್ ರೇವು ಪಟ್ಟಣದ ಮೇಲೆ ಜಪಾನು ಆಕ್ರಮಣ ಮಾಡಲು ಕಾರಣವಾಯಿತು.

ಹವಾಯಿ ದ್ವೀಪಗಳಲ್ಲಿದ್ದ ಅಮೇರಿಕೆಯ ಅತಿದೊಡ್ಡ ನೌಕಾನೆಲೆ ರೇವು ಪಟ್ಟಣದ ಮೇಲೆ ಡಿಸೆಂಬರ್ 7, 1941ರಲ್ಲಿ ಜಪಾನಿನ 150 ಬಾಂಬರ್ ಮತ್ತು ಫೈಟರ್ ವಿಮಾನಗಳು ವಿನಾಶಕಾರಿ ಧಾಳಿ ನಡೆಸಿದವು. ಎರಡನೆಯ ಮಹಾಯುದ್ಧದಲ್ಲಿ ಜಪಾನು ಪೂರ್ಣವಾಗಿ ಮುಳುಗಿ ಹೋಗಿತ್ತು. ಅದೇ ದಿನ ವೇಕ್ ದ್ವೀಪಗಳು, ಮಿಡವೇ, ಫಿಲಿಫೈನ್ಸ್, ಹಾಂಕ್‌ಕಾಂಗ್‌ಗಳ ಮೇಲೂ ಧಾಳಿ ಮಾಡಲಾಯಿತು. ಮರುದಿನ ಮಲಯದ ಪೂರ್ವ ಕರಾವಳಿಯಲ್ಲಿ ಜಪಾನಿನ ಸೈನಿಕರು ಪ್ರವೇಶಿದರು. ಜಪಾನಿನ ವಿಮಾನಗಳು ಹಾರಾಟವನ್ನು ತಡೆಯಲು ಪ್ರಯತ್ನಿಸುತ್ತಿದ್ದ ಇಂಗ್ಲೆಂಡಿನ ಪ್ರಮುಖ ಯುದ್ಧ ನೌಕೆ 'ರಿಫೆಲ್ಸ್' ಮತ್ತು 'ಪ್ರಿನ್ಸ್ ಆಫ್ ವೇಲ್ಸ್' ಗಳನ್ನು ಮಲಯದಲ್ಲಿದ್ದ ಜಪಾನಿನ ಯುದ್ಧ ವಿಮಾನಗಳು ಸಮುದ್ರದಲ್ಲಿ ಮುಳುಗಿಸಿದವು. ಹೀಗೆ ಪೌರಾತ್ಯದ ಸಮುದ್ರಗಳಲ್ಲಿ ಪತ್ತೆ ಕಾರ್ಯದಲ್ಲಿ ನಿರತವಾಗಿದ್ದ ಮಿತ್ರ ಪಕ್ಷಗಳ ನೌಕಾ ಪಡೆಗಳು ಈಗ ಸಂಪೂರ್ಣವಾಗಿ ನೆಲಸಮಗೊಂಡವು. ಹಾಂಗ್‌ಕಾಂಗ್ ಕೆಲವೇ ದಿನಗಳ ಯುದ್ಧದ ನಂತರ 1941ರ ಕ್ರಿಸ್‌ಮಸ್ ದಿನದಂದು ಜಪಾನಿನ ವಶವಾಯಿತು. ಗೌಮ್ ಮತ್ತು ವೇಕ್ ದ್ವೀಪಗಳನ್ನು ಜಪಾನು ತನ್ನ ವಶಕ್ಕೆ ತೆಗೆದುಕೊಂಡಿತು. ಅಮೇರಿಕೆಯನ್ನು ಮಲಯ ದ್ವೀಪದವರೆಗೆ ಹಿಮ್ಮೆಟಿಸಲಾಯಿತು.

## 158.4 ಫೆಸಿಫಿಕ್ ಯುದ್ಧ 1941-1945

ಪರ್ಲ್ ರೇವು ಪಟ್ಟಣದ ಮೇಲೆ ಡಿಸೆಂಬರ್ 8, 1941 ರಂದು ಧಾಳಿ ನಡೆದ ಮೇಲೆ ಅಮೇರಿಕಾ, ಗ್ರೇಟ್ ಬ್ರಿಟನ್ ಮತ್ತು ನೆದರ್‌ಲ್ಯಾಂಡ್ಸ್ ದೇಶಗಳು ಜಪಾನಿನ ಮೇಲೆ ಯುದ್ಧ ಘೋಷಿಸಿದವು. ಎರಡನೆಯ ಮಹಾಯುದ್ಧದ ಫೆಸಿಫಿಕ್ ಹಂತವು ಹೀಗೆ

ಆರಂಭಗೊಂಡಿತು. ಆರಂಭದಲ್ಲಿ ಜಪಾನಿನ ಯಶಸ್ಸು ಅಸಮಾನ್ಯವಾಗಿತ್ತು. ಪೆರ್ಲ್ ರೇವು ಪಟ್ಟಣದಲ್ಲಿನ ಅಮೇರಿಕೆಯ ನೌಕಾನೆಲೆಯನ್ನು ನೆಲಸಮಗೊಳಿಸಿದ ಮೂರು ದಿನಗಳ ನಂತರ ಮಲಯದ ಪೂರ್ವ ಕರಾವಳಿಯಲ್ಲಿ ಬೀಡುಬಿಟ್ಟಿದ್ದ ಇಂಗ್ಲೆಂಡಿನ ಯುದ್ಧ ನೌಕೆಗಳಾದ ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿಫಲ್ಸ್‌ಗಳನ್ನು ಜಪಾನಿನ ಪಡೆಗಳು ಮುಳುಗಿಸಿದವು. ಪೆರ್ಲ್ ರೇವು ಪಟ್ಟಣದ ಹಾಗೂ ಬ್ರಿಟಿಷ್ ಯುದ್ಧನೌಕೆಗಳ ನಾಶದ ನಂತರ ಫೆಸಿಫಿಕ್ ಪ್ರದೇಶದಲ್ಲಿ ಜಪಾನಿನ ಪಡೆಗಳ ನಡೆಯನ್ನು ವಿರೋಧಿಸುವ ಕಾರ್ಯ ಕಷ್ಟ ಸಾಧ್ಯವಾಯಿತು. ಚೀನಾ, ಇಂಡೋಚೀನಾ, ಫಾರ್ಮೋಸ ಮತ್ತು ಫೆಸಿಫಿಕ್ ದ್ವೀಪಗಳ ತನ್ನ ನೆಲೆಗಳ ನೆರವಿನಿಂದ ಜಪಾನು ಡಿಸೆಂಬರ್ 25, 1941ರಲ್ಲಿ ಹಾಂಗ್‌ಕಾಂಗ್‌ನ್ನು, ಫೆಬ್ರವರಿ 15, 1942ರಂದು ಮಲಯ ಮತ್ತು ಸಿಂಗಪುರಗಳನ್ನು, ಜೂನ್ 1942ರಂದು ಬರ್ಮಾ ದೇಶವನ್ನು, ಮಾರ್ಚ್ 1942ರಂದು ಡಚ್‌ನ ಈಸ್ಟ್ ಇಂಡೀಸ್‌ನ್ನು, ಜನವರಿ 2, 1942 ರಂದು ಡಚ್‌ನ ಈಸ್ಟ್ ಇಂಡೀಸನ್ನು ಜನವರಿ 2, 1942 ರಂದು ಮನಿಲಾವನ್ನು ಏಪ್ರಿಲ್ 9, 1942 ರಂದು ಬ್ರಿಟನನ್ನು ಮತ್ತು ಮೆ 6, 1942 ರಂದು ಕಾರಿಗಿಕಾರನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಇಡೀ ಆಗ್ನೇಯ ಏಷ್ಯಾವು 1942ರ ಬೇಸಿಗೆಯಲ್ಲಿ ಸಂಪೂರ್ಣವಾಗಿ ಜಪಾನಿನ ಕರತಲದಲ್ಲಿ ಶರಣಾಗಿತ್ತು.

ಉತ್ತರ ಫೆಸಿಫಿಕ್‌ನ ಆಲ್‌ಟಿಯನ್ ದ್ವೀಪದಲ್ಲಿ ಜಪಾನು ತನ್ನ ನೆಲೆಯನ್ನು ಸ್ಥಾಪಿಸಿದರೆ ನೈರುತ್ಯ ಪ್ರದೇಶದಲ್ಲಿನ ನ್ಯೂಗಿನಿಯಾ ಮತ್ತು ಸಾಲೋಮನ್ ದ್ವೀಪಗಳಲ್ಲಿ ತನ್ನ ನೆಲೆಗಳನ್ನು ಸ್ಥಾಪಿಸಿತು. ಏಷ್ಯಾದ ಪೂರ್ವ ಮತ್ತು ಆಗ್ನೇಯ ಭಾಗಗಳಲ್ಲಿ ಬ್ರಿಟನ್‌ನ ಹಾಗೂ ಡಚ್‌ನ ಎಲ್ಲ ವಸಾಹತುಗಳನ್ನು ಪೆರ್ಲ್ ರೇವು ಪಟ್ಟಣದ ಮೇಲಿನ ಆಕ್ರಮಣದ ನಂತರದ ಆರು ತಿಂಗಳೊಳಗೆ ಸಂಪೂರ್ಣವಾಗಿ ಜಪಾನು ತನ್ನ ವಶಕ್ಕೆ ತೆಗೆದುಕೊಂಡಿತು. ಫಿಸಿಫೈನ್ಸ್ ಮತ್ತು ಫೆಸಿಫಿಕ್‌ನ ಪಶ್ಚಿಮ ಭಾಗದಲ್ಲಿದ್ದ ಅಮೇರಿಕೆಯ ನೆಲೆಗಳ ಮೇಲೆ ಜಪಾನು ತನ್ನ ಆಧಿಪತ್ಯವನ್ನು ಘೋಷಿಸಿತು. ಆದರೆ ಆಸ್ಟ್ರೇಲಿಯಾ ಮತ್ತು ಅಮೇರಿಕಾ ಪಡೆಗಳು 1942 ರಲ್ಲಿ ನ್ಯೂಗಿನಿಯಾ ಮತ್ತು ಸಾಲೋಮನ್ ದ್ವೀಪಗಳಲ್ಲಿ ಜಪಾನಿನ ಪಡೆಗಳಿಗೆ ತೀವ್ರ ತಡೆಯನ್ನೊಡ್ಡಿದವು. ಜೂನ್ 1942ರಲ್ಲಿ ಅಮೇರಿಕೆಯ ಯುದ್ಧ ನೌಕೆ 'ಬ್ಯಾಟಲ್ ಆಫ್ ಮಿಡ್ ವೇ' ಜಪಾನಿನ ಪಡೆಗಳಿಗೆ ತಡೆಯನ್ನೊಡ್ಡಿತು.

## 158.5 ಜಪಾನಿನ ಸೋಲು ಮತ್ತು ಮಹಾಯುದ್ಧದ ಅಂತ್ಯ

ಜಪಾನು 1942ರ ಬೇಸಿಗೆಯಲ್ಲಿ ಅನೇಕ ಹಿನ್ನಡೆಯನ್ನು ಎದುರಿಸಬೇಕಾಯಿತು. ಮಿಡ್ ವೇ ದ್ವೀಪ ಮತ್ತು ಕೋರಲ್ ಸಮುದ್ರದಲ್ಲಿನ ಎರಡು ನೌಕಾಯುದ್ಧದಲ್ಲಿ ಜಪಾನಿಗೆ ನಿರ್ಣಾಯಕ ಗೆಲವು ಸಾಧ್ಯವಾಗಲಿಲ್ಲ. ನ್ಯೂಗಿನಿಯಾದಲ್ಲಿ ಜಪಾನಿನ ಆಕ್ರಮಣವನ್ನು ಆಸ್ಟ್ರೇಲಿಯಾ ಹಿಮ್ಮೆಟ್ಟಿಸಿತು. ಫೆಸಿಫಿಕ್ ಸಮುದ್ರದಲ್ಲಿನ ಕೆಲವು ಸಣ್ಣ ದ್ವೀಪಗಳನ್ನು ಅಮೇರಿಕಾ ಮರುವಶಪಡಿಸಿಕೊಂಡಿತು. ಮಿಡ್ ವೇ ಹೋರಾಟದ ನಂತರ ಅಮೇರಿಕೆಯ ಉಗ್ರ ಆಕ್ರಮಣಕ್ಕೆ ಮುಂದಾಗತೊಡಗಿತು. ಆಗಸ್ಟ್ 1942ರಲ್ಲಿ ಅಮೇರಿಕಾಯ ಸಾಲೋಮನ್ ದ್ವೀಪಗಳಲ್ಲಿನ ಗುಡಾಲ್ ಕಾಲುವೆಯನ್ನು ವಶಪಡಿಸಿಕೊಂಡಿತು.

ಫೆಸಿಫಿಕ್‌ನ ಆಗ್ನೇಯ ಭಾಗದಿಂದ ಜಪಾನನ್ನು ಹಿಮ್ಮೆಟಿಸಲಾಯಿತು. ಆಸ್ಟ್ರೇಲಿಯಾವನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಜಪಾನಿನ ಮೇಲೆ ದಾಳಿ ನಡೆಸಲು ಜನರಲ್ ಮೆಕಾರ್ಥರ್‌ನನ್ನು ಸೈನಾಧಿಕಾರಿಯನ್ನಾಗಿ ಮಾಡಲಾಯಿತು. ಜಪಾನು ವಶಪಡಿಸಿಕೊಂಡಿದ್ದ ದ್ವೀಪಗಳ ಮೇಲೆ ಉಗ್ರಧಾಳಿ ನಡೆಸುವುದು ಮಿತ್ರಪಕ್ಷಗಳ ಯುದ್ಧ ತಂತ್ರವಾಗಿತ್ತು. ಗುಡಾಲ್ ಕಾಲುವೆಯನ್ನು ವಶಪಡಿಸಿಕೊಂಡ ನಂತರ ಜಪಾನಿನ ಭದ್ರಕೋಟೆಗಳನ್ನೆಲ್ಲ ಒಂದೊಂದಾಗಿ ಮಿತ್ರ ಪಕ್ಷಗಳ ಪಡೆಗಳು ವಶಪಡಿಸಿಕೊಳ್ಳತೊಡಗಿದವು. ಅಂತಿಮವಾಗಿ ಇದು ಜಪಾನಿನ ಸೋಲಿನಲ್ಲಿ ಕೊನೆಗೊಂಡಿತು. ಮಿತ್ರ ಪಕ್ಷ ಪಡೆಗಳು 1943ರಲ್ಲಿ ಮತ್ತು ಆಲ್‌ಟಿಯನ್‌ಗಳನ್ನು ವಶಪಡಿಸಿಕೊಳ್ಳುವುದರಲ್ಲಿ ಯಶಸ್ವಿಯಾದವು. ಅಮೆರಿಕಾ ಮತ್ತು ಇಂಗ್ಲೆಂಡ್‌ಗಳು ಒಪ್ಪಂದವೊಂದನ್ನು ಮಾಡಿಕೊಂಡು ಚೀನಾದ ಸಹಕಾರವನ್ನು ಪೂರ್ಣವಾಗಿ ಪಡೆಯುವ ಸಲುವಾಗಿ ಅಲ್ಲಿ ತಮ್ಮ ಆಳ್ವಿಕೆ ಸ್ಥಾಪಿಸುವುದಿಲ್ಲವೆಂಬ ಭರವಸೆ ನೀಡಿದವು. ಜೂನ್ 1943ರಲ್ಲಿ ಫಿಲಿಫೈನ್ಸ್ ಸಮುದ್ರದ ಮೇಲೆ ನಡೆದ ಯುದ್ಧದಲ್ಲಿ ಜಪಾನು ಅಪಾರ ಸಾವು-ನೋವು-ನಷ್ಟ ಅನುಭವಿಸಿತು. ಮಿತ್ರಪಕ್ಷಗಳ

ಪಡೆಗಳು ಲಿಯಿಟಿ ದ್ವೀಪದ ಮೇಲೆ ಇಳಿದವು. ಎರಡನೆಯ ಮಹಾಯುದ್ಧದಲ್ಲೇ ಉಗ್ರವೆನ್ನಬಹುದಾದ ಹೋರಾಟ ಅಲ್ಲಿ ನಡೆಯಿತು. ಜಪಾನು ತನ್ನೆಲ್ಲ ಶಕ್ತಿಯನ್ನು ಅಲ್ಲಿ ಪಣಕ್ಕೊಡ್ಡಿತು. ಅಮೇರಿಕೆಯ ವಿಮಾನ ಪಡೆಗಳ ಸಾಮರ್ಥ್ಯದ ಮುಂದೆ ಜಪಾನು ನಿಲ್ಲದಾಯಿತು.

ಜಪಾನಿಗೆ ತನ್ನ ದೇಶವನ್ನು ಬಾಂಬುಗಳ ಧಾಳಿಯಿಂದ ರಕ್ಷಿಸಿಕೊಳ್ಳುವುದು ಅಸಾಧ್ಯವಾಯಿತು. ಫೆಬ್ರವರಿ 1945 ರಲ್ಲಿ ಕೈಯುಕು ದ್ವೀಪದಲ್ಲಿನ ಒಕಿನಾವ ಎಂಬಲ್ಲಿ ಭೂಸೇನಾ ಯುದ್ಧ ನಡೆಯಿತು. ಮಾರ್ಚ್ 9 1945ರಲ್ಲಿ ಟೋಕಿಯೋ ನಗರದ ಮೇಲೆ ಬಾಂಬ್‌ಗಳನ್ನು ಹಾಕಲಾಯಿತು. ಇಡೀ ನಗರವು ಹೊಗೆ ಮತ್ತು ಬೆಂಕಿಯಿಂದ ಆವೃತ್ತವಾಯಿತು. ಜಪಾನಿನ ಪಡೆಗಳು ಮಣಿಪುರದಿಂದ ಹಿಮ್ಮೆಟ್ಟಿದವು ಮತ್ತು ಬ್ರಿಟಿಷರು ಬರ್ಮಾವನ್ನು ತಮ್ಮ ವಶಪಡಿಸಿಕೊಂಡರು. ಬ್ರಿಟಿಷರ ನಿಯಂತ್ರಣ ಅಧಿಕವಾಗತೊಡಗಿತು. ಸ್ವತಂತ್ರ ಚೀನಾದ ಸಹಕಾರ ಪೂರ್ಣವಾಗಿ ಬ್ರಿಟನ್‌ಗೆ ದೊರೆಯಿತು. ಯಲ್ಟಾ ಸಮಾವೇಶದ ನಂತರ (ಫೆಬ್ರವರಿ 1945) ರಷ್ಯಾ ಕೂಡ ಜಪಾನಿನ ಮೇಲೆ ಯುದ್ಧ ನಡೆಸಲು ತೀರ್ಮಾನಿಸಿತು. ಇದಕ್ಕೆ ಪ್ರತಿಯಾಗಿ 1905ಕ್ಕೆ ಪೂರ್ವದಲ್ಲಿ ರಷ್ಯಾದ ವಶದಲ್ಲಿದ್ದ ಕೋರಿಯಾ, ಮಂಚೂರಿಯಾಗಳನ್ನು ಮರುವಶಪಡಿಸಿಕೊಡುವುದಾಗಿ ಮಿತ್ರ ಪಕ್ಷಗಳು ಭರವಸೆ ನೀಡಿದವು. ರಷ್ಯಾದ ಪಡೆಗಳು ಮಂಚೂರಿಯಾದ ಮೇಲೆ ಆಕ್ರಮಣ ನಡೆಸಿ ಮಂಚುಕೊನ ಸ್ವಾತಂತ್ರ್ಯವನ್ನು ಅಳಿಸಿಹಾಕಿದವು. ಯುರೋಪಿನಲ್ಲಿ ಶತೃಗಳನ್ನು ಅಂತಿಮವಾಗಿ ಸೋಲಿಸಲಾಯಿತು ಮತ್ತು ಅವರನ್ನು ಶರಣಾಗುವಂತೆ ಮಾಡಲಾಯಿತು. ಇದರಿಂದಾಗಿ ಜಪಾನು ಏಕಾಂಗಿಯಾಗಬೇಕಾಯಿತು. ಜಪಾನಿನ ಸುತ್ತ ದಿಗ್ಬಂಧನ ವಿಧಿಸಿದವು. ಜುಲೈ 1944 ರಲ್ಲಿ ಟೋಜೋ ಸಚಿವ ಸಂಪುಟವು ರಾಜಿನಾಮೆ ನೀಡಿತು. ಸೂಜಿಕಿ ನೇತೃತ್ವದ ಸಂಪುಟವು ಮಧ್ಯವರ್ತಿಗಳ ಮೂಲಕ ಶಾಂತಿ ಸಂಧಾನಕ್ಕೆ ಕ್ರಮ ತೆಗೆದುಕೊಂಡಿತು. ಅಮೇರಿಕಾ, ಬ್ರಿಟನ್ ಮತ್ತು ಚೀನಾ ದೇಶಗಳ ಪೊಟ್ಸ್ ದಾಮ್‌ನಲ್ಲಿ ಸಭೆ ಸೇರಿ ಬೇಷರತ್ತಾಗಿ ಶರಣಾಗುವಂತೆ ಜಪಾನಿನ ಪಡೆಗಳಿಗೆ ಕರೆ ನೀಡಿದವು. ಆದರೆ ಜಪಾನಿನ ಮಿಲಿಟರಿ ಅಧಿಕಾರಿಗಳು ಇದನ್ನು ವಿರೋಧಿಸಿದವು. ಶಿಂಟೋ ಮತ್ತು ಸಮುದಾಯಿ ಪರಂಪರೆಗೆ ಮತ್ತು ಜಪಾನಿನ ನೈತಿಕತೆಗೆ ಬೇಷರತ್ ಶರಣಾಗತಿಯು ವಿರುದ್ಧವಾಗಿತ್ತು. ಜಪಾನಿನಲ್ಲಿ 'ಯಮಾಟೋ - ತಮಶಿ' ಭಾವನೆಯು ತುಂಬಾ ಜೀವಂತವಾಗಿತ್ತು. ಇದರಿಂದ ಆತಂಕಗೊಂಡ ಮಿತ್ರಪಕ್ಷಗಳು ಜಪಾನಿನ ಮೇಲೆ ಅಣುಬಾಂಬು ಹಾಕುವ ತೀರ್ಮಾನ ತೆಗೆದುಕೊಂಡವು. ಅದರಂತೆ ಆಗಸ್ಟ್ 6, 1945ರಲ್ಲಿ ಹಿರೋಶಿಮ ನಗರದ ಮೇಲೆ ಮತ್ತು ಎರಡು ದಿನಗಳ ನಂತರ ನಾಗಸಾಕಿ ನಗರದ ಮೇಲೆ ಬಾಂಬುಗಳನ್ನು ಹಾಕಲಾಯಿತು. ಇದರಿಂದಾಗಿ 2.8 ಲಕ್ಷ ಜನರು ಕಣ್ಮುಚ್ಚಿ ತೆರೆಯುವುದರೊಳಗಾಗಿ ಬಲಿಯಾದರು. ಅಣುಬಾಂಬುಗಳ ಸ್ಫೋಟದ ನಂತರ ಪರಿಸ್ಥಿತಿ ಬದಲಾಯಿತು. ಯುದ್ಧವನ್ನು ನಿಲ್ಲಿಸುವ ಬಗ್ಗೆ ಚಕ್ರವರ್ತಿಯು ಕಾತರನಾಗಿದ್ದನು. ಪೊಟ್ಸ್ ಡಾಮ್‌ನ ಘೋಷಣೆಯನ್ನು ಅವನು ಒಪ್ಪಿಕೊಂಡನು. ಟೋಕಿಯೋ ಕೊಲ್ಲಿಯಲ್ಲಿ ನೆಲೆಗೊಂಡಿದ್ದ ಮಿಸ್ಸೋರಿ ನೌಕೆಯ ಮೇಲೆ ಸೆಪ್ಟೆಂಬರ್ 1945 ರಲ್ಲಿ ಅಧಿಕೃತ ಶರಣಾಗತಿ ಸಭೆ ನಡೆಯಿತು. ಸೆಪ್ಟೆಂಬರ್ 2, 1945 ರಿಂದ ಏಪ್ರಿಲ್ 28, 1952 ರವರೆಗೆ ಅಕ್ಷರಶಃ ಜಪಾನು ಹೆಸರಿಗೆ ಮಿತ್ರ ಪಕ್ಷಗಳ ಸ್ವಾದೀನದಲ್ಲಿತ್ತು. ವಾಸ್ತವವಾಗಿ ಅಲ್ಲಿದ್ದುದು ಅಮೇರಿಕೆಯ ಆಳ್ವಿಕೆಯಾಗಿತ್ತು. ರಿಫಬ್ಲಿಕನ್ ಪಕ್ಷದ ಕಟ್ಟಾ ಅನುಯಾಯಿಯಾಗಿದ್ದ ಜನರಲ್ ಡಗ್ಲಾಸನು ಸ್ವಾದೀನ ಪಡೆಯ ಮುಖ್ಯಸ್ಥನಾಗಿದ್ದನು. ಈ ಸ್ವಾದೀನ ಆಳ್ವಿಕೆಯು ಏಳು ವರ್ಷ ಮಾತ್ರವಾಗಿದ್ದರೂ ಅದು ಜಪಾನಿನ ಮೇಲೆ ಅಳಿಸಲಾಗದ ಪ್ರಭಾವವನ್ನು ಬೀರಿತು.

## 158.6 ಯುದ್ಧದ ಪರಿಣಾಮಗಳು

ಯುದ್ಧದಲ್ಲಿ ಸೋತ ಜಪಾನು ಸಂಪೂರ್ಣವಾಗಿ ವಿಧ್ವಂಸವಾಗಿತ್ತು. ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಮಿಲಿಟರಿ ಪುನರ್ ನಿರ್ಮಾಣದ ಸವಾಲು ಆದರೆದುರಿಗಿತ್ತು. ಪೂರ್ವ ಏಷ್ಯಾದಲ್ಲಿ ಸಮೃದ್ಧತೆಯ ಸಹಪ್ರಾಂತವನ್ನು ಕಟ್ಟುವ ಜಪಾನಿನ ಮಹತ್ವಕಾಂಕ್ಷೆ ಯುದ್ಧದ ಜ್ವಾಲೆಗಳಲ್ಲಿ ಬೆಂದು ಹೋಯಿತು. ಅದರ ಸಾಮ್ರಾಜ್ಯಶಾಹಿ ಆಕಾಂಕ್ಷೆಗಳು ಮಣ್ಣುಗೂಡಿದವು. ವಾಸ್ತವವಾಗಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಸೌದೆಗಳೆಲ್ಲಕ ವಿಶ್ವಾದ್ಯಂತ ನುಚ್ಚುನೂರಾಗುತ್ತಿದ್ದವು. ಇಂಡಿಯಾ, ಸಿಲೋನ್ (ಶ್ರೀ ಲಂಕಾ) ಬರ್ಮಾ, ಇಂಡೋಚೈನಾ, ಇಂಡೋನೇಶಿಯ ಮುಂತಾದವುಗಳೆಲ್ಲ ಸ್ವಾತಂತ್ರ್ಯ ಪಡೆದುಕೊಂಡವು. ಏಕೆಂದರೆ ಮಹಾಯುದ್ಧದಲ್ಲಿ ಸಾಮ್ರಾಜ್ಯಶಾಹಿ

ಶಕ್ತಿಗಳೆಲ್ಲ ಅಪಾರ ಸಾವು, ನೋವುಗಳನ್ನು ಅನುಭವಿಸಿದ್ದವು. ಮಾನವ ಸಂಪನ್ಮೂಲ ಮತ್ತು ಭೌತಿಕ ಸಂಪನ್ಮೂಲಗಳು ತೀವ್ರ ಕೊರತೆಯಿಂದಿದ್ದವು. ವಸಾಹತುಗಳ ಮೇಲೆ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ತಮ್ಮ ಅಂಕುಶವಿಟ್ಟುಕೊಳ್ಳುವುದು ಸಾಧ್ಯವಾಗಲಿಲ್ಲ. ಈ ಬಗೆಯ ಸ್ವಾತಂತ್ರ್ಯ ಚಳುವಳಿಗೆ ಅಪ್ರತ್ಯಕ್ಷವಾಗಿ ಜಪಾನು ಕಾರಣವಾಗಿತ್ತು. ಜಪಾನಿನ ಸಾಮ್ರಜ್ಯವೇ ಅದರ ಕೈತಪ್ಪಿ ಹೋಗುವಂತಾಯಿತು. ಅದರ ಗಡಿರೇಖೆಗಳು 1894ರಲ್ಲಿದ್ದ ಸ್ಥಿತಿಗೆ ಮೊಟಕುಗೊಂಡವು. ಫಾರ್ಮೋಸವನ್ನು ಚೀನಾಕ್ಕೆ ಹಿಂತುರುಗಿಸಬೇಕಾಯಿತು. ಕೊರಿಯಾವನ್ನು ವಿಭಜಿಸಲಾಯಿತು. ಅದರ ಉತ್ತರ ಭಾಗವು ರಷ್ಯಾದ ಕೈಗೊಂಬೆ ರಾಷ್ಟ್ರವಾದರೆ, ಅದರ ದಕ್ಷಿಣ ಭಾಗವು ಅಮೇರಿಕೆಯ ಕೈಗೊಂಬೆಯಾಯಿತು. ಜಪಾನಿನ ಸಾಮ್ರುಜ್ಯಶಾಹಿ ಮಹತ್ವಾಕಾಂಕ್ಷೆಯ ಸರ್ವನಾಶ ಮತ್ತು ಸಾವುಗಳಲ್ಲಿ ಪರ್ಯಾವಸಾನಗೊಂಡಿತು. ಮೆಕಾರ್ಥರನ ನೇತೃತ್ವದ ಅಮೆರಿಕಾ ಪಡೆಗಳು ಜಪಾನಿನಲ್ಲಿ ಸರ್ವಾಧಿಕಾರವನ್ನು ಕೊನೆಗೊಳಿಸಿದವು. ಅಲ್ಲಿ ಸಂವಿಧಾನಾತ್ಮಕ ಪ್ರಜಾ ಪ್ರಭುತ್ವವಾದಿ ರಾಜಕೀಯ ವ್ಯವಸ್ಥೆಯನ್ನು ಉದಾರವಾದಿ ವಿಚಾರ ಪ್ರಣಾಳಿಕೆಗನುಗುಣವಾಗಿ ಪ್ರತಿಷ್ಠಾಪಿಸಲಾಯಿತು. ಯುದ್ಧೋನ್ಮತ್ತ ಮಿಲಿಟರಿ ಆಳ್ವಿಕೆಯಿಂದಾಗಿ ಉದಯಿಸುತ್ತಿರುವ ಸೂರ್ಯನೆಂಬ ಹೆಸರು ಪಡೆದಿದ್ದ ಜಪಾನಿನ ಮೇಲೆ ಕಾಲ ಕಪ್ಪು ಮೋಡ ಮುಸುಕಿ ಬಿಟ್ಟಿತು.

## 158.7 ಸಾರಾಂಶ

ಎರಡನೆಯ ಮಹಾಯುದ್ಧವು 1939ರಲ್ಲಿ ಆರಂಭಗೊಂಡಿತು. ಯುದ್ಧಕ್ಕೆ ಪೂರ್ವದಲ್ಲಿ ಜಪಾನು ತೀವ್ರ ಆಕ್ರಮಣಕಾರಿ ನೀತಿಯನ್ನು ಅನುಸರಿಸುತ್ತಿತ್ತು. ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಅದರ ಆರ್ಥಿಕತೆಯು ತೀವ್ರ ಪ್ರಗತಿಯಲ್ಲಿ ಬೆಳೆದ ಪರಿಣಾಮವಾಗಿ ದೊಡ್ಡ ಶಕ್ತಿಯಾಗಿ ರೂಪಗೊಂಡಿತು. ವಿಶ್ವಸಮರದಲ್ಲಿ ಯುರೋಪಿನ ದೇಶಗಳೆಲ್ಲ ಬೆಳದ ಪರಿಣಾಮವಾಗಿ ದೊಡ್ಡ ಶಕ್ತಿಯಾಗಿ ರೂಪುಗೊಂಡಿತು. ವಿಶ್ವಸಮರದಲ್ಲಿ ಯುರೋಪಿನ ದೇಶಗಳೆಲ್ಲ ತೊಡಗಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡ ಜಪಾನು ತನ್ನ ಆರ್ಥಿಕತೆಯನ್ನು ಭದ್ರವಾಗಿ ಕಟ್ಟಿಕೊಂಡಿತು. ಫ್ರಾನ್ಸಿನ ಶರಣಾಗತಿ ನಂತರ ಜಪಾನು ಜರ್ಮನಿ ಮತ್ತು ಇಟಲಿಗಳ ಕಡೆಗೆ ಸರಿಯತೊಡಗಿತು. ಇದರ ಪರಿಣಾಮವಾಗಿ ಸೆಪ್ಟೆಂಬರ್ 1940ರಲ್ಲಿ ತ್ರೀಪಕ್ಷೀಯ ಕೂಟ ಒಪ್ಪಂದಕ್ಕೆ ಸಹಿ ಹಾಕಿತು. ಡಿಸೆಂಬರ್ 7, 1941ರಲ್ಲಿ ಜಪಾನಿನ ಯುದ್ಧ ವಿಮಾನಗಳು ಅಮೇರಿಕೆಯ ಪರ್ಲ್ ರೇವು ಪಟ್ಟಣದಲ್ಲಿ ಫೆಸಿಫಿಕ್ ಯುದ್ಧ ನೌಕೆಯ ಮೇಲೆ ಧಾಳಿ ನಡೆಸಿ ಧ್ವಂಸ ಪಡಿಸಿದವು ಮತ್ತು ಫಿಲಿಫೈನ್ಸ್‌ನಲ್ಲಿ ಅಮೇರಿಕೆಯ ವಿಮಾನ ನೆಲೆಯನ್ನು ನಾಶಮಾಡಿತು.

ಕ್ಷಿಪ್ರಗತಿಯಲ್ಲಿ ಫಿಲಿಫೈನ್ಸ್ ಬೋರ್ನಿಯೋ, ಸಿಲಿಬೆಸ್, ಮಲಯ, ಸುಮಾತ್ರ, ಜಾವಾಗಳನ್ನು ಜಪಾನು ವಶಪಡಿಸಿಕೊಂಡಿತು. ಚೀನಾದ ಕಡೆಗೆ ಜಪಾನಿನ ಪಡೆಗಳು ಸಾಗತೊಡಗಿದವು. ಆದರೆ 1943ರ ನಂತರ ಫೆಸಿಫಿಕ್ ಯುದ್ಧರಂಗದಲ್ಲಿ ಪರಿಸ್ಥಿತಿ ಜಪಾನಿಗೆ ಪ್ರತಿಕೂಲವಾಗತೊಡಗಿತು.

ಎರಡನೆಯ ಮಹಾಯುದ್ಧದಲ್ಲಿ ತೊಡಗಿದ್ದ ಜಪಾನು 1945ರಲ್ಲಿ ಮಿತ್ರ ಪಕ್ಷಗಳ ಪಡೆಗಳಿಗೆ ಅಂತಿಮವಾಗಿ ಶರಣಾಗಬೇಕಾಯಿತು. ಮಿತ್ರಪಕ್ಷಗಳ ನಾಗಸಾಕಿ ಮತ್ತು ಹಿರೋಶಿಮಾಗಳ ಮೇಲೆ ಅಣುಬಾಂಬು ಹಾಕಿದ ಪರಿಣಾಮವಾಗಿ ಜಪಾನು ಶರಣಾಗಬೇಕಾಯಿತು. ಅದ್ಭುತವಾಗಿ ವೈಭವವನ್ನು ಮತ್ತು ಅಧಿಕಾರವನ್ನು ಒದಗಿಸಿದ್ದ ವಿಸ್ತರಣಾವಾದಿ ನೀತಿಯೇ ಕೊನೆಗೆ ಜಪಾನಿನ ಸಂಪೂರ್ಣ ಶರಣಾಗತಿಗೂ ಕಾರಣವಾಯಿತು.

## 158.8 ಸ್ವಯಂ ಪ್ರಗತಿ ಪರೀಕ್ಷೆ

*I. ಕೆಳಗಿನವುಗಳಿಗೆ ಪ್ರತಿಯೊಂದಕ್ಕೂ ಒಂದೊಂದು ಪ್ಯಾರದಲ್ಲಿ ಉತ್ತರಿಸಿ.*

ಅ. ತ್ರಿಪಕ್ಷಿಯ ಕೂಟ ಒಪ್ಪಂದ (1940)

ಆ. ಪೆರ್ಲ್ ರೇವು ಪಟ್ಟಣದ ಮೇಲಿನ ದಾಳಿ (1941)

ಇ. ಯಲ್ಟಾ ಸಮಾವೇಶ (1945)

ಈ. ಜಪಾನಿನ ಶರಣಾಗತಿ (1945)

*II. ಪ್ರತಿಯೊಂದಕ್ಕೂ ಎರಡು ಪುಟಗಳಲ್ಲಿ ಉತ್ತರಿಸಿ.*

ಅ. ಫೆಸಿಫಿಕ್ ಯುದ್ಧಕ್ಕೆ (1941-43) ಕಾರಣವಾದ ಸಂಗತಿಗಳ ಒಂದು ವಿವರಣೆ ನೀಡಿ.

ಆ. ಪೂರ್ವ ಏಷ್ಯಾದ ಚರಿತ್ರೆ ಮೇಲೆ ಎರಡನೆಯ ಮಹಾಯುದ್ಧವು ಉಂಟು ಮಾಡಿದ ಪರಿಣಾಮಗಳನ್ನು ವಿವರಿಸಿ.

## 158.9 ಹೆಚ್ಚಿನ ಓದಿಗೆ ಗ್ರಂಥಗಳು

ಹೂಜ್ ಬರ್ಟನ್ ಮತ್ತು ಇತರರು : ಜಪಾನ್ ಬಿಟ್ವೀನ್ ಈಸ್ಟ್ ಅಂಡ್ ವೆಸ್ಟ್.

ಹೂಜ್ ಬರ್ಟನ್ ಮತ್ತು ಇತರರು : ಜಪಾನ್ ಬಿಟ್ವೀನ್ ಈಸ್ಟ್ ಅಂಡ್ ವೆಸ್ಟ್.

ರೀಸಾಫರ್ .ಇ.ಓ : ದಿ ಯೂನೈಟೆಡ್ ಸ್ಟೇಟ್ಸ್ ಅಂಡ್ ಜಪಾನ್.

ಸ್ಟೋರ್ಟಿನಿ : ಹಿಸ್ಟರಿ ಆಫ್ ಮಾರ್ಡನ್ ಜಪಾನ್.

ವಿಲಿಯಮ್ ಬೇರಿ : ಮಾರ್ಡನ್ ಜಪಾನ್.

# ಘಟಕ - 159

## ಜಪಾನಿನ ವಿಸ್ತರಣೆ ಮತ್ತು ಆಗ್ನೇಯ ಏಷ್ಯಾದಲ್ಲಿ ಅದರ ಆಳ್ವಿಕೆ

ರಚನೆ


159.0 ಉದ್ದೇಶಗಳು

159.1 ಪ್ರಸ್ತಾವನೆ

159.2 ವಿಸ್ತರಣಾವಾದಿ ದಾರಿಯಲ್ಲಿ ಜಪಾನು

159.3 ತ್ರೀಪಕ್ಷಿಯ ಒಪ್ಪಂದ

159.4 ಆಗ್ನೇಯ ಏಷ್ಯಾದಲ್ಲಿ ಜಪಾನಿನ ಆಳ್ವಿಕೆ

159.5 ಆಗ್ನೇಯ ಏಷ್ಯಾದ ಸಮೃದ್ಧತೆಯ ಸಹಪ್ರಾಂತ

159.6 ಸಾರಾಂಶ

159.7 ಸ್ವಯಂ ಪ್ರಗತಿ ಪರೀಕ್ಷೆ

159.8 ಹೆಚ್ಚಿನ ಓದಿಗೆ ಗ್ರಂಥಗಳು

## 159.0 ಉದ್ದೇಶಗಳು

ಜಪಾನಿನ ವಿಸ್ತರಣಾವಾದಿ ನೀತಿ ಮತ್ತು ಆಗ್ನೇಯ ಏಷ್ಯಾದಲ್ಲಿನ ಅದರ ಆಳ್ವಿಕೆಯನ್ನು ಚರ್ಚಿಸುವುದು ಪ್ರಸ್ತುತ ವಿಭಾಗದ ಉದ್ದೇಶವಾಗಿದೆ. ಈ ವಿಭಾಗದ ಅಧ್ಯಯನದ ನಂತರ ತಾವು ಕೆಳಕಂಡ ಸಂಗತಿಯನ್ನು ತಿಳಿದುಕೊಂಡಿರುತ್ತೀರಿ.

ಜಪಾನು 1932ರ ನಂತರ ಉತ್ತರ ಚೀನಾದ ವಿಸ್ತೃತ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ನಡಿಸಿದ ತೀವ್ರ ಪ್ರಯತ್ನ.

1937ರಲ್ಲಿ ಆರಂಭವಾದ ರಷ್ಯಾ-ಜಪಾನು ನಡುವಿನ ಯುದ್ಧ

ಶತ್ರು ಪಕ್ಷಗಳ ಜೊತೆಗಿನ ತನ್ನ ಸಂಬಂಧವನ್ನು ಭದ್ರಪಡಿಸಿಕೊಳ್ಳಲು ಜಪಾನು ಸಹಿ ಹಾಕಿದ ತ್ರೀಪಕ್ಷೀಯ ಒಪ್ಪಂದ (1940)

ಆಗ್ನೇಯ ಏಷ್ಯಾವನ್ನು ಜಪಾನು ಆಕ್ರಮಿಸಿಕೊಂಡಿದ್ದು.

ಏಷ್ಯಾ ಖಂಡದ ಪುನಾರಚನೆಗೆ ಜಪಾನು ನಡೆಸಿದ ಪ್ರಯತ್ನ ಮತ್ತು ಅದು ನಿರ್ಮಿಸಲು ಪ್ರಯತ್ನಿಸಿದ ಮಹಾ ಏಷ್ಯಾ ಸಮೃದ್ಧತಾ ಸಹಪ್ರಾಂತ.

## 159.1 ಪ್ರಸ್ತಾವನೆ

ಜಪಾನು ಜಾಗತಿಕ ಶಕ್ತಿಶಾಲಿ ರಾಷ್ಟ್ರವಾಗಿ ಇಪ್ಪತ್ತನೆಯ ಶತಮಾನದಲ್ಲಿ ರೂಪುಗೊಂಡಿತು. ರಷ್ಯಾ-ಜಪಾನುಗಳ ನಡುವಣ ಯುದ್ಧದ ನಂತರ ಅದು ಪೌರಾತ್ಯ ರಾಜಕಾರಣದಲ್ಲಿ ಒಂದು ಪ್ರಮುಖ ಶಕ್ತಿಯೆಂಬುದು ರುಜುವಾತಾಯಿತು. ಜಪಾನಿನ ವಿಸ್ತರಣಾ ನೀತಿಗೆ ಅನೇಕ ಕಾರಣಗಳನ್ನು ನೀಡಬಹುದಾಗಿದೆ.

ಮಾನವ ಸಂಪತ್ತು ಹಾಗೂ ಭೌತಿಕ ಸಂಪತ್ತು ವೇಗವಾಗಿ ಬೆಳೆಯುತ್ತಿದ್ದ ಹುರುಪು-ಉಮೇದಿನಿಂದ ಮೆರೆಯುತ್ತಿದ್ದ ರಾಷ್ಟ್ರ ಜಪಾನು. ಪಾಶ್ಚಿಮಾತ್ಯ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕೈಗಾರೀಕರಣವನ್ನು ಸಾಧಿಸಿಕೊಂಡ ಪ್ರಥಮ ಪೌರಾತ್ಯ ದೇಶ ಜಪಾನು. ಅದು ಅತ್ಯಂತ ಆಯಕಟ್ಟಿನ ಭೌಗೋಳಿಕ ಸ್ಥಾನದಲ್ಲಿ ನೆಲೆಗೊಂಡಿತ್ತು. ಆಗ್ನೇಯ ಏಷ್ಯಾದ ಸಮುದ್ರ ಪ್ರದೇಶದ ಮೇಲೆ ಆಳ್ವಿಕೆ ಸ್ಥಾಪಿಸಲು ಅನುಕೂಲವಾದ ಕೋಟೆ ಬಾಗಿಲು ಅದಾಗಿದೆ. ಪೌರಾತ್ಯದಲ್ಲಿ, ವ್ಯಾಪಾರವಲ್ಲಾಗಲಿ ಅಥವಾ ಯುದ್ಧದಲ್ಲಾಗಲಿ ಜಪಾನು ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಮಿಲಿಟರಿ ಜ್ಞಾನದ ದೃಷ್ಟಿಯಿಂದ ಅದ್ವಿತೀಯ ಸ್ಥಾನ ಪಡೆದುಕೊಂಡಿತ್ತು. ವ್ಯಾಪಾರಿ ಹಡಗುಗಳ ಸಾಮರ್ಥ್ಯದ ದೃಷ್ಟಿಯಿಂದ ಅದು ಇಂಗ್ಲೆಂಡು ಮತ್ತು ಅಮೆರಿಕೆಯ ನಂತರ ಮೂರನೆಯ ಮುಖ್ಯ ರಾಷ್ಟ್ರವಾಗಿತ್ತು. ಅದನ್ನು ಏಷ್ಯಾ ಖಂಡದ ಪ್ರಬಲ ರಾಷ್ಟ್ರವನ್ನಾಗಿ ಪರಿಗಣಿಸಲಾಗಿತ್ತು. ಅದರ ಸಂಪತ್ತು ಮತ್ತು ಅಧಿಕಾರವು ತೀವ್ರಗತಿಯಲ್ಲಿ ಬೆಳೆಯುತ್ತಿತ್ತು.

ಆಕೆಯ ಜನಸಂಖ್ಯೆ ತೀವ್ರಗತಿಯಲ್ಲಿ ಬೆಳೆಯುತ್ತಿದ್ದುದರಿಂದ ಅಲ್ಲಿ ಆಹಾರಕ್ಕಾಗಿ ಮತ್ತು ಆಹಾರ ಬೆಳೆಯುವ ಭೂಮಿಗಳಿಗಾಗಿ ತೀರ ಬೇಡಿಕೆ ಉಂಟಾಯಿತು. ಜಪಾನಿನ ಜನಸಂಖ್ಯೆಯು ಅಮೆರಿಕೆಯ ಜನಸಂಖ್ಯೆಗೆ ಸಮನಾಗಿತ್ತು. ಆದರೆ ಅಷ್ಟು ಜನಸಂಖ್ಯೆಯನ್ನು ಕ್ಯಾಲಿಫೋರ್ನಿಯಾದಷ್ಟು ಪ್ರದೇಶದಲ್ಲಿ ಜಪಾನು ನೆಲೆಗೊಳಿಸ ಬೇಕಾಗಿತ್ತು. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಜಪಾನಿನಲ್ಲಿ ಜನಸಾಂದ್ರತೆಯ ಚೀನಾದಲ್ಲಿನ ಜನಸಾಂದ್ರತೆಗಿಂತ ಐದುಪಟ್ಟು ಅಧಿಕವಾಗಿತ್ತು. ಇದರಿಂದಾಗಿ ಜಪಾನು ವಿಸ್ತರಣಾವಾದಿ ನೀತಿಯನ್ನು ಅನುಸರಿಸತೊಡಗಿತು.

ಪೆರ್ಲ್ ರೇವು ಪಟ್ಟಣದ ನಾಶ ಮತ್ತು ಅಮೆರಿಕಾದ ಯುದ್ಧ ನೌಕೆಗಳ ಮುಳುಗಡೆ (ಡಿಸೆಂಬರ್ 10, 1941) ನಂತರ ಫೆಸಿಫಿಕ್‌ನಲ್ಲಿನ ಬ್ರಿಟನ್ ಮತ್ತು ಅಮೆರಿಕಾ ಪಡೆಗಳಲ್ಲಿ ಜಪಾನಿನ ವಿಸ್ತರಣಾವಾದಿ ನೀತಿಗೆ ತಡೆಯೊಡ್ಡುವ ಸಾಮರ್ಥ್ಯವಿರಲಿಲ್ಲ.

ಚೀನಾ, ಇಂಡೋ-ಚೀನಾ, ಫಾರ್‌ಮೋಸಾ ಮತ್ತು ಫೆಸಿಫಿಕ್ ದ್ವೀಪಗಳಲ್ಲಿನ ತನ್ನ ನೆಲೆಗಳಿಂದ ಜಪಾನು ತನ್ನ ಪ್ರಭಾವ ಮತ್ತು ಆಳ್ವಿಕೆಯನ್ನು ವಿಶಾಲ ಪ್ರದೇಶದ ಮೇಲೆ ವಿಸ್ತರಿಸಿತು. ಅತ್ಯಂತ ಕಡಿಮೆ ಕಾಲಾವಧಿಯಲ್ಲಿ ಜಪಾನು ಹಾಂಕ್‌ಕಾಂಗ್, ಮಲಯ, ಸಿಂಗಪುರ, ಬರ್ಮಾ, ನೆದರ್‌ಲ್ಯಾಂಡ್ಸ್‌ನ ದ್ವೀಪಗಳು, ಮನಿಲಾ, ಬಟಾನ್ ಮತ್ತು ಕಾರ್ಗಿಡೋರ್‌ಗಳನ್ನು ತನ್ನ ವಶಪಡಿಸಿಕೊಂಡಿತು.

1942ರ ಬೇಸಿಗೆಯಷ್ಟೊತ್ತಿಗೆ ಇಡೀ ಆಗ್ನೇಯ ಏಷ್ಯಾವನ್ನು ಜಪಾನು ತನ್ನ ವಶಕ್ಕೆ ತೆಗೆದುಕೊಂಡಿತು. ಫೆಸಿಫಿಕ್ ಮಹಾಸಮುದ್ರದ ಬಹುಪಾಲು ಪ್ರದೇಶದ ಮೇಲೆ ಜಪಾನು ತನ್ನ ಆಳ್ವಿಕೆಯನ್ನು ಸ್ಥಾಪಿಸಿತು ಮತ್ತು ಹಿಂದೂ ಮಹಾಸಾಗರವು ಜಪಾನಿನ ಕೊಲ್ಲಿಯಾಗಿಬಿಟ್ಟಿತು. ಮುಂದೆ ನ್ಯೂಗಿನಿಯಾ ಮತ್ತು ಸಾಲೋಮನ್‌ಗಳಲ್ಲಿನ ಆಸ್ಟ್ರೇಲಿಯಾ ಮತ್ತು ಅಮೇರಿಕಾ ಪಡೆಗಳು ಜಪಾನಿನ ಆಕ್ರಮಣವನ್ನು ಅಂತ್ಯಗೊಳಿಸಿದವು. ಮಿಡ್ ವೇ ಯುದ್ಧದಲ್ಲಿ ಅಮೇರಿಕಾ ನೌಕಾಪಡೆಗಳು ಜಪಾನಿನ ಅಟ್ಟಹಾಸವನ್ನು ಕೊನೆಗೊಳಿಸಿದವು.

## 159.2 ಜಪಾನಿನ ವಿಸ್ತರಣಾವಾದಿ ನೀತಿ

ಜಪಾನಿನ ಕೈಗಾರೀಕರಣ ಹಾಗೂ ಆಧುನೀಕರಣಗಳಿಂದಾಗಿ ಆಗ್ನೇಯ ಏಷ್ಯಾದ ಸ್ಥಿತಿಗತಿಯಲ್ಲಿ ತೀವ್ರ ಬದಲಾವಣೆಗಳುಂಟಾದವು. ತನ್ನ ಅಧಿಕ ಜನಸಂಖ್ಯೆಯ ದೃಷ್ಟಿಯಿಂದ ಜಪಾನಿಗೆ ವಸಾಹತುಗಳು ಅಗತ್ಯವಾಗಿದ್ದವು. ಅದರ ಕೈಗಾರಿಕಾ ಉತ್ಪನ್ನಗಳು ಮಾರಾಟಕ್ಕೆ ಮಾರುಕಟ್ಟೆಗಳು ಬೇಕಾಗಿದ್ದವು. ಈ ಕಾರಣಗಳಿಂದಾಗಿ ಜಪಾನು ತನ್ನ ಸ್ವಾರ್ಥಪೂರಿತ ಕಣ್ಣುಗಳನ್ನು ನೆರೆಯ ರಾಷ್ಟ್ರಗಳ ಮೇಲೆ ಮುಖ್ಯವಾಗಿ ಚೀನಾದ ಮೇಲೆ ಹಾಯಿಸಿತು. ಚೀನಾದೊಂದಿಗೆ 1894-95ರಲ್ಲಿ ಯುದ್ಧ ನಡೆಸಿದ ಜಪಾನು ಫಾರ್‌ಮೋಸಾವನ್ನು ವಶಪಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿತ್ತು.

ಕೊರಿಯಾ ಮತ್ತು ಮಂಚೂರಿಯಾಗಳಿಗೆ ಸಂಬಂಧಿಸಿದಂತೆ ಜಪಾನು ಆಸಕ್ತಿ ತಳೆದಿದ್ದರಿಂದ ಅದು ರಷ್ಯಾದ ಜೊತೆ ವೈರತ್ವ ಕಟ್ಟಿಕೊಳ್ಳಬೇಕಾಯಿತು. ಇದರಿಂದಾಗಿ 1904-05ರಲ್ಲಿ ರಷ್ಯಾದ ಜೊತೆ ಯುದ್ಧ ನಡೆಯಿತು. ಪೋರ್ಟ್ಸ್‌ಮೌತ್ ಒಪ್ಪಂದದಿಂದಾಗಿ ಜಪಾನಿನ ಅಧಿಪತ್ಯವನ್ನು ಒಪ್ಪಿಕೊಂಡು ದಕ್ಷಿಣದ ಭಾಗವಾದ ಸಕಾಲಿನ್, ಆರ್ಥರ್ ಬಂದರು, ತಲಿಯಿವಾನ್ ಮತ್ತು ಟೈತುಂಗ್ ಪರ್ಯಾಯ ದ್ವೀಪ, ದಕ್ಷಿಣ ಮಂಚೂರಿಯಾದ ರೈಲುಮಾರ್ಗ, ಪೋರ್ಟ್‌ಆರ್ಥರ್‌ನಿಂದ ಚಾಂಗ್ ಚುನ್ ನಡುವಣ ದಕ್ಷಿಣ ಹಾರ್ಬಿನ್ ಭಾಗದ 150ಮೈಲಿ ಪ್ರದೇಶವನ್ನು ಜಪಾನಿನ ವಶಕ್ಕ ಒಪ್ಪಿಸಿಬಿಟ್ಟಿತು. ಜಪಾನು 1910 ರಲ್ಲಿ ಕೊರಿಯಾವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಮೊದಲನೆಯ ಮಹಾಯುದ್ಧವು ಜಪಾನಿಗೆ ಸುವರ್ಣಾವಕಾಶವನ್ನು ಒದಗಿಸಿತು. ಜರ್ಮನಿಯ ವಶದಲ್ಲಿದ್ದ ಶಾಮಂಗ್ ಅನ್ನು ಜಪಾನು ತನ್ನ ವಶಪಡಿಸಿಕೊಂಡು ಚೀನಾಕ್ಕೆ ತಾನು ವಿಧಿಸಿದ್ದ 20 ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಬಲತ್ಕಾರ ಪಡಿಸಿತು. ವರ್ಸೈಲ್ಸ್ ಒಪ್ಪಂದದ ನಿಭಂದನೆ ಪ್ರಕಾರ ಮೊದಲ ಮಹಾಯುದ್ಧದಲ್ಲಿ ಜಪಾನು ಆಕ್ರಮಿಸಿಕೊಂಡಿದ್ದ ಚೀನಾದ ಭಾಗಗಳಿಗೆ ಅಧಿಕೃತ ಮನ್ನಣೆ ನೀಡಲಾಯಿತು.

ಅದು 1931ರಲ್ಲಿ ಮಂಚೂರಿಯಾವನ್ನು ಆಕ್ರಮಿಸಿಕೊಂಡಿತು ಮತ್ತು 1937ರಲ್ಲಿ ಚೀನಾದ ವಿರುದ್ಧ ಅದು ಅಘೋಷಿತ ಯುದ್ಧವನ್ನು ಆರಂಭಿಸಿತು. ಇದರಿಂದಾಗಿ ಚೀನಾದ ಕೆಲಭಾಗಗಳು ಜಪಾನಿನ ಪಾಲಾದವು. ಫ್ರಾನ್ಸಿಗೆ 1940ರಲ್ಲಿ ಉಂಟಾದ ಸೋಲಿನಿಂದ ಜಪಾನಿಗೆ ಅನೇಕ ಅನುಕೂಲಗಳು ಒದಗಿಬಂದವು. ಹಿಟ್ಲರನು ಮಾರ್ಷಲ್ ಪೀಟನ್‌ನ ನೇತೃತ್ವದಲ್ಲಿ ಫ್ರಾನ್ಸಿನಲ್ಲಿ ರಚಿಸಿದ್ದ ಕೈಗೊಂಬೆ ಸರ್ಕಾರವು ಜಪಾನಿನ ಕ್ರಮಗಳನ್ನು ವಿರೋಧಿಸಲಿಲ್ಲ. ಇಂಡೋ-ಚೀನ ಪ್ರದೇಶವನ್ನು ಜಪಾನು ಆಕ್ರಮಿಸಿಕೊಂಡಿದ್ದನ್ನು ವಿರೋಧಿಸಲಿಲ್ಲ. ಇಂಡೋ-ಚೀನ ಪ್ರದೇಶವನ್ನು ಜಪಾನು ಆಕ್ರಮಿಸಿಕೊಂಡಿದ್ದನ್ನು ವಿರೋಧಿಸಲಿಲ್ಲ. ಜಪಾನಿನ ಸಾಮ್ರಾಜ್ಯಶಾಹಿ ನೀತಿಗಳು ಅಮೆರಿಕೆಯ ತೆರೆದ ಬಾಗಿಲ ಮುಕ್ತ ನೀತಿಗೆ ವಿರುದ್ಧವಾಗಿದ್ದವು. ಅಮೇರಿಕೆಯು ಜಪಾನಿನ ಮೇಲೆ ಆರ್ಥಿಕ ದಿಗ್ಬಂದನ ವಿಧಿಸಿತು. ಇದರಿಂದಾಗಿ ಜಪಾನಿನ ಸ್ಥಿತಿ ಗಂಭೀರವಾಯಿತು. ಅಮೆರಿಕೆಯ ಆರ್ಥಿಕ ದಿಗ್ಬಂಧನದಿಂದಾಗಿ ಜಪಾನಿಗೆ ಉಸಿರುಕಟ್ಟುವಂತಾಯಿತು. ಹದಿನೈದು ವರ್ಷಗಳಿಂದಲೂ ಯುದ್ಧ ಮಾಡಿಕೊಳ್ಳುತ್ತಲೇ ಬಂದು ಆಕ್ರಮಿಸಿಕೊಂಡಿದ್ದ ಚೀನಾದ ಭಾಗಗಳನ್ನು ಹಿಂತಿರುಗಿಸಲು ಅದು ಸಿದ್ಧವಿರಲಿಲ್ಲ.

ಜಪಾನಿನ ಸರ್ಕಾರವು ಇಂತಹ ಸಂದರ್ಭದಲ್ಲಿ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಅದಕ್ಕಿದ್ದ ಒಂದೇ ಮಾರ್ಗವೆಂದರೆ ಯುದ್ಧ ಮಾಡಿ ಶ್ರೀಮಂತ ದ್ವಿಪಗಳಾಗಿದ್ದ ಇಂಡೋನೇಶಿಯಾ, ಮಲಯ ಮತ್ತು ಫಿಲಿಫೈನ್ಸ್‌ಗಳನ್ನು ವಶಪಡಿಸಿಕೊಳ್ಳುವುದಾಗಿತ್ತು. ಜಪಾನು ಆಗ್ನೇಯ ಏಷ್ಯಾವನ್ನು ತನ್ನ ವಶಪಡಿಸಿಕೊಳ್ಳುವುದನ್ನು ಸಹಿಸಿಕೊಳ್ಳಲು ಅಮೆರಿಕಾ ಸಿದ್ಧವಿರಲಿಲ್ಲ. ಜರ್ಮನಿಯ ಒತ್ತಡದಿಂದಾಗಿ ರಷ್ಯಾ ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಆಗ್ನೇಯ ಏಷ್ಯಾವನ್ನು ಜಪಾನು ವಶಪಡಿಸಿಕೊಳ್ಳುತ್ತಿದ್ದುದನ್ನು ರಷ್ಯಾ ಮೂಕ ಮಾಡುವ ಸ್ಥಿತಿಯಲ್ಲಿರಲಿಲ್ಲ. ಆಗ್ನೇಯ ಏಷ್ಯಾವನ್ನು ಜಪಾನು ವಶಪಡಿಸಿಕೊಳ್ಳುತ್ತಿದ್ದುದನ್ನು ರಷ್ಯಾ ಮೂಕ ಪ್ರೇಕ್ಷಕನಾಗಿ ನಿಂತು ನೋಡಬೇಕಾಗಿತ್ತು. ಜರ್ಮನಿಯ ಬಾಂಬರ್‌ಗಳು 1940ರಲ್ಲಿ ನಡಿಸಿದ ವ್ಯಾಪಕ ವಿಮಾನಧಾಳಿಯಿಂದಾಗಿ ದುರ್ಬಲಗೊಂಡಿದ್ದ ಬ್ರಿಟನ್ ಏನನ್ನು ಮಾಡುವ ಸ್ಥಿತಿಯಲ್ಲಿರಲಿಲ್ಲ. ಜಪಾನಿನ ವಿರುದ್ಧ ನಿಲ್ಲುವ ಶಕ್ತಿ ಅದಕ್ಕಿರಲಿಲ್ಲ.

## 159.3 ತ್ರೀಪಕ್ಷೀಯ ಒಪ್ಪಂದ

ಎರಡನೆಯ ಮಹಾಯುದ್ಧವು 1939ರಲ್ಲಿ ಆರಂಭಗೊಂಡ ಮೇಲೆ ಆಗ್ನೇಯ ಏಷ್ಯಾದ ಮೇಲಿನ ಜಪಾನಿನ ಆಕ್ರಮಣವು ಹೊಸ ತಿರುವು ಪಡೆದುಕೊಂಡಿತು. ಈಗ ಅದು ಹೆಚ್ಚು ಉಗ್ರವಾಗಿ ಮತ್ತು ಆತ್ಮವಿಶ್ವಾಸದಿಂದ ಚೀನಾದ ಮೇಲೆ ಧಾಳಿ ನಡೆಸತೊಡಗಿತು. ಯುರೋಪಿನಲ್ಲಿ ಬ್ರಿಟನ್, ಫ್ರಾನ್ಸ್ ಮತ್ತು ಹಾಲೆಂಡ್ ದೇಶಗಳು ಭೀಕರ ಯುದ್ಧದಲ್ಲಿ ತೊಡಗಿದ್ದವು. ಇದರಿಂದಾಗಿ ಅವುಗಳು ಆಗ್ನೇಯ ಏಷ್ಯಾದಲ್ಲಿ ಸ್ಥಾಪಿಸಿದ್ದ ನೆಲೆಗಳು ಈಗ ದುರ್ಬಲಗೊಂಡವು. ಇದು ಜಪಾನಿನ ವಿಸ್ತರಣಾವಾದಿ ನೀತಿಯ ಅನುಷ್ಠಾನಕ್ಕೆ ಫಲವತ್ತಾದ ಅವಕಾಶವನ್ನೊದಗಿಸಿತು.

ತನ್ನ ಮೈತ್ರಿಯನ್ನು ಸುಭದ್ರಗೊಳಿಸಿಕೊಳ್ಳುವ ಸಲುವಾಗಿ ಜಪಾನು ಸೆಪ್ಟೆಂಬರ್ 26, 1940ರಲ್ಲಿ ಜರ್ಮನಿ ಮತ್ತು ಇಟಲಿಗಳ ಜೊತೆ ತ್ರೀಪಕ್ಷೀಯ ಒಪ್ಪಂದ ಮಾಡಿಕೊಂಡಿತು. ಅದರ ಪ್ರಕಾರ ಮೂರು ಪಕ್ಷಗಳಲ್ಲಿ ಯಾರ ಮೇಲಾದರೂ ಆಕ್ರಮಣ ನಡೆದರೆ ಏಷ್ಯಾದಲ್ಲಾಗಲಿ ಅಥವಾ ಯುರೋಪಿನಲ್ಲಾಗಲಿ ಕೂಟದ ಉಳಿದ ದೇಶಗಳು ತಟಸ್ಥವಾಗಿರಬೇಕಾಗಿತ್ತು. ಈ ಒಪ್ಪಂದದ ಗುರಿ ಮುಖ್ಯವಾಗಿ ಯುರೋಪಿನ ಶಕ್ತಿಗಳ ಹಾಗೂ ಅಮೇರಿಕೆಯ ವಿರುದ್ಧವಾಗಿತ್ತು. ಒಪ್ಪಂದದ ಮುಖ್ಯ ನಿಬಂಧನೆಗಳು ಹೀಗಿದ್ದವು.

1. ಯುರೋಪಿನಲ್ಲಿ ಜರ್ಮನಿ ಮತ್ತು ಇಟಲಿಗಳು ನಿರ್ಮಿಸಲಿದ್ದ ಹೊಸ ಅಧಿಪತ್ಯವನ್ನು ಜಪಾನು ಒಪ್ಪಿಕೊಳ್ಳುವುದು.

2. ಮಹಾ ಆಗ್ನೇಯ ಏಷ್ಯಾದಲ್ಲಿ ಜಪಾನು ನಿರ್ಮಿಸಲಿದ್ದ ಹೊಸ ಅಧಿಪತ್ಯವನ್ನು ಜರ್ಮನಿ ಮತ್ತು ಇಟಲಿ ಒಪ್ಪಿಕೊಳ್ಳಬೇಕಾಗಿತ್ತು.

3. ಅಂದು ಯುರೋಪು ಹಾಗೂ ಚೀನಾ ಯುದ್ಧಗಳಲ್ಲಿ ತೊಡಗಿಲ್ಲದ ಯಾವುದಾದರೂ ಒಂದು ಶಕ್ತಿ ಒಪ್ಪಂದದ ಮೂರು ದೇಶಗಳಾದ ಜರ್ಮನಿ, ಇಟಲಿ ಅಥವಾ ಜಪಾನಿನ ಮೇಲೆ ಆಕ್ರಮಣ ನಡೆಸಿದರೆ ಮೂರು ದೇಶಗಳೂ ಪರಸ್ಪರ ರಾಜಕೀಯ, ಆರ್ಥಿಕ ಮತ್ತು ಮಿಲಿಟರಿ ನೆರವು ನೀಡುವುದು.

4. ಈ ಒಪ್ಪಂದದ ಕಲಾವಧಿ ಹತ್ತು ವರ್ಷವಾಗಿರಬೇಕು ಮತ್ತು ಇದನ್ನು ಅನುಷ್ಠಾನಗೊಳಿಸಲು ಹಾಗೂ ಹೆಚ್ಚಿನ ಸಹಕಾರವನ್ನು ಸಾಧಿಸಲು ಮಾರ್ಗಗಳನ್ನು ಕಂಡು ಹಿಡಿಯಲು ಜಂಟಿ ಆಯೋಗಗಳನ್ನು ರಚಿಸುವುದು.

ಈ ಒಪ್ಪಂದಕ್ಕೆ ಬಂದ ಅಮೇರಿಕೆಯ ತೀವ್ರ ಟೀಕೆಯನ್ನು ಜಪಾನಿನ ವಿದೇಶಾಂಗ ಮಂತ್ರಿ ಮಾಟ್‌ಸೂಕ್ ಖಂಡಿಸಿದನು. ಹೊಸದಾಗಿ ನಿರ್ಮಿಸಲೆಂದು ಯೋಜಿಸಿದ್ದ ವ್ಯವಸ್ಥೆ ಪಾಲುದಾರನಾಗುವಂತೆ ಹಾಗೂ ಹೊಸ ಅಧಿಪತ್ಯವನ್ನು ಜರ್ಮನಿ, ಜಪಾನು ಮತ್ತು ಅಮೇರಿಕೆಗಳ ನಡುವೆ ಸಮಾನವಾಗಿ ಹಂಚಿಕೊಳ್ಳುವಂತೆ ವಾಷಿಂಗ್‌ಟನೆಗೆ ಆಹ್ವಾನ ನೀಡಿದನು.

## 159.4 ಆಗ್ನೇಯ ಏಷ್ಯಾದಲ್ಲಿ ಜಪಾನಿನ ಆಳ್ವಿಕೆ

ಪೆರ್ಲ್ ರೇವು ಪಟ್ಟಣದ ಮೇಲೆ ಆಕ್ರಮಣ ನಡೆಸಿದ ಸಮಯದಲ್ಲೇ ಜಪಾನು ಅಮೆರಿಕೆಯ ನೆಲೆಗಳಾಗಿದ್ದ ಗೌಮ್ ಮತ್ತು ವೇಕ್ ದ್ವೀಪಗಳ ಮೇಲೆ ಆಕ್ರಮಣ ಮಾಡಿ ಅವುಗಳನ್ನು ವಶಪಡಿಸಿಕೊಂಡಿತು. ಮುಂದೆ ಬ್ರಿಟನ್ನಿನ ವಶದಲ್ಲಿದ್ದ ಹಾಂಗ್‌ಕಾಂಗ್‌ನ್ನು ವಶಪಡಿಸಿಕೊಂಡಿತು. ಬ್ರಿಟನ್ನಿನ ರಕ್ಷಣೆಯಲ್ಲಿದ್ದ ಬೋರ್ನಿಯಾದ ರಾಜಧಾನಿ ಸರವಾಕ್ ಅನ್ನು ತಮ್ಮ ಕೈವಶ ಪಡಿಸಿಕೊಂಡಿತು. ಮಲಯಾದ ಪೂರ್ವ ಕರಾವಳಿಯಲ್ಲಿದ್ದ ಬ್ರಿಟನ್‌ನ ಯುದ್ಧ ನೌಕೆಗಳಾದ ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿಫಲ್ಸ್‌ಗಳನ್ನು ಜಪಾನು ಮುಳುಗಿಸಿಬಿಟ್ಟಿತು. ಜಪಾನು ವೇಗವಾಗಿ ಮಲಯ ಪರ್ಯಾಯ ದ್ವೀಪದ ಮೂಲಕವಾಗಿ, ಅಬೇಧ್ಯವಾದ ಅರಣ್ಯವನ್ನು ದಾಟಿ ಮುಂದೆಸಾಗಿತು. ಬೇಷರತ್ತಾಗಿ ಸಿಂಗಪುರವು ಜಪಾನಿಗೆ ಶರಣಾಯಿತು ಮತ್ತು ಬ್ರಿಟನ್‌ನ ಅಬೇಧ್ಯ ನೌಕನೆಲೆಯನ್ನು ಫೆಬ್ರವರಿ 1942ರಲ್ಲಿ ತನ್ನ ವಶಪಡಿಸಿಕೊಂಡಿತು. ನೆದರಲ್ಯಾಂಡ್ಸ್‌ನ ಪೂರ್ವ ಇಂಡೀಸ್ ಮೇಲೆ ವಿವಿಧ ಕಡೆಗಳಿಂದ ಧಾಳಿ ಮಾಡಲಾಯಿತು. ಡಚ್ ಪಡೆಗಳ ನೆರವಿಗಾಗಿ ಅಮೆರಿಕಾ, ಬ್ರಿಟನ್ ಮತ್ತು ಆಸ್ಟ್ರೇಲಿಯಾ ಪಡೆಗಳು ಧಾವಿಸಿದವು. ಈ ಎಲ್ಲ ಪಡೆಗಳನ್ನು ಜಪಾನು ಸುಲಭವಾಗಿ ಚದುರಿಸಿಬಿಟ್ಟಿತು. ಇಂಡೋನೇಶಿಯಾದ ರಾಜಧಾನಿ ಬಲಾವಿಯಾವು ಜಪಾನಿನ ವಶವಾಯಿತು. ಹೀಗೆ ಈಸ್ಟ್ ಇಂಡೀಸ್‌ನ ಆಕ್ರಮಣವು ಪೂರ್ಣಗೊಂಡಿತು. ಸರಿಸುಮಾರು ನಾಲ್ಕು ತಿಂಗಳುಗಳ ಕಾಲ ಅಮೇರಿಕೆಯ ಪಡೆಗಳ ನೆರವಿನೊಂದಿಗೆ ಫಿಲಿಫೈನ್ಸ್‌ನ ಪಡೆಗಳು ಜಪಾನಿನ ಪಡೆಗಳಿಗೆ ತೀವ್ರ ಪ್ರತಿರೋಧ ಒಡ್ಡಿದವು. ಈ ಎಲ್ಲ ಪ್ರತಿರೋಧಗಳು ಮೇ 1942ರಲ್ಲಿನ ಜಪಾನು ಕಾರಿಗಿಡಾರ ದ್ವೀಪವನ್ನು ವಶಪಡಿಸಿಕೊಂಡ ಮೇಲೆ ನಿಷ್ಫಲಗೊಂಡವು. ಇದೇ ಸಮಯದಲ್ಲಿ ಜಪಾನು ಬರ್ಮಾದ ಮೇಲೆ ತನ್ನ ಸಾರ್ವಭೌಮತ್ವವನ್ನು ಹೇರಿತು. ಥೈಲ್ಯಾಂಡು ಈಗ ಜಪಾನಿನ ಪರವಾಯಿತು. ಇಷ್ಟಾದರೂ ಅದು ಜಪಾನಿನಿಂದ ತೀವ್ರ ವಿನಾಶವನ್ನು ಅನುಭವಿಸಬೇಕಾಯಿತು. ಉತ್ತರ ಫೆಸಿಫಿಕ್ ಪ್ರದೇಶದಲ್ಲಿ ಆಲ್‌ಟಿಯನ್ ದ್ವೀಪಗಳ ಆಕ್ರಮಣದ ನಂತರ ಜಪಾನು ಸರ್ವಶಕ್ತವಾಯಿತು. ಆಗ್ನೇಯ ಭಾಗದಲ್ಲಿ ಅದು ನ್ಯೂಗಿನಿಯಾ ಮತ್ತು ಸಾಲೋಮನ್ ದ್ವೀಪಗಳಲ್ಲಿ ಬಹಳಷ್ಟು ಭಾಗಗಳನ್ನು ತನ್ನವಶಮಾಡಿಕೊಂಡಿತು.

ಪೆರ್ಲ್ ರೇವು ಪಟ್ಟಣದ ಮೇಲಿನ ದಾಳಿಯ ತರುವಾಯು ಕೇವಲ ಆರು ತಿಂಗಳ ಕಾಲದಲ್ಲಿ ಬ್ರಿಟನ್ನಿನ ಅನೇಕ ವಸಾಹತುಗಳನ್ನು ಅದು ತನ್ನ ವಶ ಮಾಡಿಕೊಂಡಿತು. ಪೂರ್ವ ಏಷ್ಯ ಮತ್ತು ಆಗ್ನೇಯ ಏಷ್ಯಾ ಪ್ರದೇಶದಲ್ಲಿ ಭಾರತದ ಗಡಿಯವರೆಗೆ ಹಬ್ಬಿದ್ದ ಡಚ್‌ನ ವಸಾಹತುಗಳನ್ನು ಜಪಾನು ಸಂಪೂರ್ಣವಾಗಿ ನೆಲಸಮಗೊಳಿಸಿತು. ಪಶ್ಚಿಮ ಫೆಸಿಫಿಕ್ ಮತ್ತು ಫಿಲಪೈನ್ಸ್ ಪ್ರದೇಶದಲ್ಲಿದ್ದ ಅಮೆರಿಕೆಯ ನೆಲೆಗಳ ಮೇಲೆ ಜಪಾನು ತನ್ನ ಆಧಿ ಪತ್ಯವನ್ನು ಘೋಷಿಸಿತು. ಏಪ್ರಿಲ್ 9, 1942ರಲ್ಲಿನ ಜಪಾನಿನ ವಿಜಯವು ಐತಿಹಾಸಿಕವಾದುದಾಗಿದೆ. ಸಿಲೋನಿ ಮೇಲೆ ಬಾಂಬುಗಳನ್ನು ಹಾಕಲಾಯಿತು. ಭಾರತವು ಆಕ್ರಮಣದ ಬಿಸಿಯನ್ನು ಎದುರಿಸಬೇಕಾಯಿತು. ಬರ್ಮಾದಿಂದ ಚೀನಾಕ್ಕಿದ್ದ ರಸ್ತೆ ಮಾರ್ಗವನ್ನು ಬಂದ್ ಮಾಡಲಾಯಿತು. ಪಶ್ಚಿಮ ಫೆಸಿಫಿಕ್ ಮತ್ತು ಆಗ್ನೇಯ ಏಷ್ಯಾಗಳಲ್ಲಿ ಜಪಾನ್ ಸಾರ್ವಭೌಮ ರಾಷ್ಟ್ರವಾಗಿ ರೂಪುಗೊಂಡಿತು.

ಆದರೆ ಅದರ ಯುದ್ಧಕೂಟದ ಮಿತ್ರರಾದ ಯುರೋಪಿನ ದೇಶಗಳು ಸೋಲನ್ನು ಅನುಭವಿಸತೊಡಗಿದವು. ಅವುಗಳ ಮೇಲೆ ಜಪಾನಿಗೆ ಹೆಚ್ಚಿನ ವಿಶ್ವಾಸವಿತ್ತು. ಪೆರ್ಲ್ ರೇವು ಪಟ್ಟಣದ ಮೇಲೆ ನಡೆದ ಧಾಳಿಯ ಮಾರನೆಯ ದಿನವೇ ಜರ್ಮನಿಯು ಮಾಸ್ಕೋದಿಂದ ಹಿಂದೆ ಸರಿಯಬೇಕಾಯಿತು. ಜರ್ಮನಿಯ ತೀವ್ರ ದಾಳಿಗೆ ಒಳಗಾಗಿದ್ದರೂ ಎಲ್ಲರ ನಿರೀಕ್ಷೆಯನ್ನು ಮೀರಿ ಇಂಗ್ಲೆಂಡ್ ಸೋಲಿನ ದವಡೆಯಿಂದ ತಪ್ಪಿಸಿಕೊಂಡಿತ್ತು.

ಅಮೇರಿಕೆಯ ಫೆಸಿಫಿಕ್ ನೌಕಾಪಡೆಯು ವಿಧ್ವಂಸವಾಗಿತ್ತು. ಜನರಲ್ ಡಗ್ಲಾಸ್ ಮೆಕಾರ್ಥರ್‌ನ ಸೈನ್ಯ ಹಿಂದೆ ಸರಿಯುತ್ತಿತ್ತು. ಇದರಿಂದಾಗಿ ಫಿಲಪೈನ್ಸ್, ಮನಿಲಾ, ಇಂಡೋನೇಶಿಯಾ ಹೀಗೆ ಒಂದಾದ ಮೇಲೊಂದರಂತೆ ಇಡೀ ಪೂರ್ವದ ಏಷ್ಯಾವು ಸೋಲು ಅನುಭವಿಸಬೇಕಾಯಿತು. ಉಳಿದ ಫೆಸಿಫಿಕ್ ದ್ವೀಪಗಳನ್ನು ಜಪಾನು ನುಂಗಿ ಹಾಕಿತು.

ಆಗ್ನೇಯ ಏಷ್ಯಾವನ್ನು ಜಪಾನು ವಶಪಡಿಸಿಕೊಂಡಿತು. ಆದರೆ ಅಲ್ಲಿ ಅದಕ್ಕೆ ಉತ್ತೇಜನಕಾರಿ ಬೆಂಬಲ ದೊರೆಯಲಿಲ್ಲ. ಬರ್ಮಾ ಮತ್ತು ಇಂಡೋನೇಶಿಯಾದ ಉಗ್ರರಾಷ್ಟ್ರೀಯವಾದಿಗಳು ಮಿತ್ರ ಪಕ್ಷಗಳ ಪಡೆಗಳಿಗೆ ಸ್ವಾಗತ ಕೋರಿದರು. ಉಳಿದವರು ಬದಲಾವಣೆಯನ್ನು ಹತಾಶರಾಗಿ ಒಪ್ಪಿಕೊಂಡರು. ಈ ಪ್ರದೇಶದ ಜನರು ಗೊಂದಲಕ್ಕೊಳಗಾದರು. ಆಕ್ರಮಣದಿಂದಾಗಿ ಅವರ ಮನಸ್ಸು ನೊಂದಿತ್ತು. ಪಾಶ್ಚಮಾತ್ಯ ಸೈನಿಕರು ಸ್ಥಳೀಯರಿಗೆ ಸ್ವಯಂ ರಕ್ಷಣೆ ಬಗ್ಗೆ ಯಾವುದೇ ತರಬೇತಿ ನೀಡದಿದ್ದ ಕಾರಣದಿಂದಾಗಿ ಅವರು ಜಪಾನಿನ ಆಕ್ರಮಣವನ್ನು ತಡೆಯಲು ಮುಂದಾಗಲಿಲ್ಲ. ಪಾಶ್ಚಿಮಾತ್ಯ ಸರ್ಕಾರಗಳು ತಮ್ಮನ್ನು ರಕ್ಷಿಸಿಕೊಳ್ಳಲು ಹೆಣಗಾಡುತ್ತಿರಬೇಕಾದರೂ ನಮ್ಮನೇನು ರಕ್ಷಿಸಿಯಾರು ಎಂದು ಅನೇಕ ರಾಷ್ಟ್ರೀಯವಾದಿಗಳು ಟೀಕಿಸತೊಡಗಿದರು. ಆಕ್ರಮಣದ ಆರಂಭದಲ್ಲಿ ಜಪಾನೀಯರು ಪ್ರಚುರಪಡಿಸಿದ್ದ 'ಏಷ್ಯಾ ಏಷಿಯನ್ನರಿಗೆ ಮಾತ್ರ' ಎಂಬ ಘೋಷಣೆಯು ಜನಪ್ರಿಯವಾಗಿತ್ತು. ಡಚ್, ಬ್ರಿಟಿಷ್ ಮತ್ತು ಫ್ರೆಂಚ್ ಸೆರೆಮನೆಗಳಿಂದ ಆಗ್ನೇಯ ಏಷ್ಯಾ ದೇಶಗಳ ರಾಷ್ಟ್ರೀಯ ವಾದಿಗಳನ್ನು ಬಿಡುಗಡೆ ಮಾಡಿದ್ದರಿಂದ ಜಪಾನೀಯರಿಗೆ ಜನಪ್ರಿಯ ಬೆಂಬಲ ಪ್ರಾಪ್ತವಾಯಿತು. ಯುರೋಪಿಯನ್ ಭಾಷೆಗಳನ್ನು ನಿಷೇಧಿಸಿ, ಜಪಾನು ಹೊರಡಿಸಿದ ಆದೇಶದಿಂದ ಅನೇಕರು ಜಪಾನಿನ ಅನುಯಾಯಿಗಳಾಗಿ ಬಿಟ್ಟರು.

## 159.5 ಮಹಾ ಆಗ್ನೇಯ ಏಷ್ಯಾ ಸಮೃದ್ಧತೆಯ ಸಹಪ್ರಾಂತ

ತನ್ನ ನಿಯಂತ್ರಣದಲ್ಲಿದ್ದ ಏಷ್ಯಾ ಭಾಗವನ್ನು 1942 ರಿಂದ 1944 ಪುನರ್ ಸಂಘಟಿಸಲು ಜಪಾನು ಪ್ರಯತ್ನಿಸಿತು. ತನ್ನ ಮಾರುಕಟ್ಟೆ ಅವಶ್ಯಕತೆಗಾಗಿ ಹಾಗೂ ಕಚ್ಚಾ ಸಾಮಗ್ರಿಗಳಿಗಾಗಿ ತಾನು ವಶಮಾಡಿಕೊಂಡಿದ್ದ ದೇಶ/ಪ್ರದೇಶಗಳನ್ನು ಜಪಾನು ಆರ್ಥಿಕವಾಗಿ ಶೋಷಿಸಲು ತೊಡಗಿತು. ಟೋಕಿಯೋದಲ್ಲಿ ನವೆಂಬರ್ 1942ರಲ್ಲಿ 'ಮಹಾಪೂರ್ವ ಏಷ್ಯಾ ಮಂತ್ರಮಂಡಳಿ'ಎನ್ನುವುದನ್ನು ಸ್ಥಾಪಿಸಿ ಅದರ ಮೂಲಕ ತಾನು ವಶಪಡಿಸಿಕೊಂಡಿದ್ದ ಏಷ್ಯಾ ದೇಶಗಳಲ್ಲಿ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳನ್ನು ಆರಂಭಿಸಿತು. ಜಪಾನಿನ ಸಾರ್ವಭೌಮತ್ವವು ಅತ್ಯಂತ ಅಲ್ಪಕಾಲಾವಧಿಯದಾಗಿತ್ತು. ಈ ಅವಧಿಯಲ್ಲಿ ಅದು ಹೊಸ ಅಧಿಪತ್ಯವೊಂದನ್ನು ಸ್ಥಾಪಿಸಲು ಪ್ರಯತ್ನಿಸಿತು. ತಾನು ವಶಮಾಡಿಕೊಂಡ ದೇಶಗಳನ್ನೆಲ್ಲಾ ಜಪಾನಿ ಭಾಷೆಯನ್ನು ಎರಡನೆಯ ಭಾಷೆಯನ್ನಾಗಿ ಘೋಷಿಸಲಾಯಿತು. ಜಪಾನು ತನ್ನ ಶಕ್ತಿಯ ಮೇಲೆ ತಾನು ನಿಲ್ಲಬೇಕಾಗಿತ್ತು. ಪ್ರತಿಯೊಂದು ದೇಶದಲ್ಲೂ ಆಡಳಿತದ ಅನುಕೂಲಕ್ಕೆ ಜಪಾನು ಪ್ರತ್ಯೇಕ ಇಲಾಖೆಗಳನ್ನು ರಚಿಸಿತು. ತಾನು ವಶಪಡಿಸಿಕೊಂಡಿದ್ದ ಪ್ರತಿಯೊಂದು ದೇಶವೂ ಜಪಾನಿನ ಮಿಲಿಟರಿ ವ್ಯವಸ್ಥೆಗೆ ಅಗತ್ಯವಾದ ಆಹಾರ ಮತ್ತು ಕಚ್ಚಾ ಸಾಮಗ್ರಿಗಳಾದ ರಬ್ಬರ್, ಪೆಟ್ರೋಲಿಯಂ, ಕಬ್ಬಿಣ, ಅಕ್ಕಿ ಮುಂತಾದವುಗಳನ್ನು ಸರಬರಾಜು ಮಾಡಬೇಕೆಂದು ಒತ್ತಾಯಿಸಲಾಯಿತು.

ದಕ್ಷಿಣ ಏಷ್ಯಾದಲ್ಲಿನ ಯುರೋಪಿಯನ್ ವಸಾಹತುಗಳನ್ನು ಜಪಾನು ವಶಪಡಿಸಿಕೊಂಡಿದ್ದರಿಂದ ಏಷ್ಯಾ ದೇಶಗಳಿಗೆ ಅನೇಕ ಅನುಕೂಲಗಳು ಒದಗಿದವು. ಪಾಶ್ಚಿಮಾತ್ಯ ರಾಷ್ಟ್ರಗಳ ವಸಾಹತುಶಾಹಿ ಆಳ್ವಿಕೆಯಿಂದ ಆಗ್ನೇಯ ಏಷ್ಯಾದ ದೇಶಗಳನ್ನು, ಪ್ರಜೆಗಳನ್ನು ಬಿಡುಗಡೆಗೊಳಿಸುವುದಕ್ಕೆ ತಾನು ಯುದ್ಧ ಮಾಡುತ್ತಿರುವುದಾಗಿ ಜಪಾನು ಘೋಷಿಸಿಕೊಂಡಿತು. ಈ ಆಧಾರದ ಮೇಲೆ ತಾನು ವಶಪಡಿಸಿಕೊಂಡ ದೇಶಗಳಿಂದ ವಿಮೋಚನಾ ಯುದ್ಧ ನಡೆಸಲು ನೆರವನ್ನು ಜಪಾನು ಅಪೇಕ್ಷಿಸಿತು. ಜಪಾನು 1942ರ ಮಧ್ಯ ಬಾಗದಲ್ಲಿ ತನ್ನ ಸಾರ್ವಭೌಮತ್ವದ ಉತ್ತುಂಗ ಶಿಖರದಲ್ಲಿತ್ತು ಮತ್ತು ವಿಶಾಲ ಸಾಮ್ರಾಜ್ಯವನ್ನು ಆಳುತ್ತಿತ್ತು. ಆದರೆ ಚೀನಿಯರು ತಮ್ಮ ದೇಶದ ಅನೇಕ ಭಾಗಗಳಲ್ಲಿ ಆರ್ಥಿಕ ದಿಗ್ಬಂಧನವನ್ನು ಹೇರುವುದರ ಮೂಲಕ ಜಪಾನೀಯರ ಪ್ರಯತ್ನವನ್ನು ಸೋಲಿಸಲು ತಂತ್ರಗಳನ್ನು ಹೂಡಿದರು. ವಾಸ್ತವವಾಗಿ ಚೀನಾ ದೇಶವು ತನ್ನ ಚರಿತ್ರೆಯಲ್ಲಿ ಅತ್ಯಂತ ಕ್ಲಿಷ್ಟ ಹಂತವನ್ನು ಹಾದು ಹೋಗುತ್ತಿತ್ತು. ಅಮೆರಿಕೆಯು ಚೀನಾಕ್ಕೆ ನೆರವು ನೀಡುವ ಉದ್ದೇಶದಿಂದ ಅಪಾರ ಹಣಕಾಸು ಸಂಪನ್ಮೂಲಗಳನ್ನು ಒದಗಿಸಿತು. ಭಾರತದಿಂದ ಸಾಮಾನು - ಸಾಮಗ್ರಿಗಳ ಸರಬರಾಜು ವ್ಯರ್ಥವಾಗದಂತೆ ನೋಡಿಕೊಳ್ಳಲು ಬರ್ಮ-ಭಾರತ ನಡುವಿನ ಮಾರ್ಗ ಮುಕ್ತವಾಗಿರುವಂತೆ ಮಾಡಲು ಸರ್ವಪ್ರಯತ್ನ ನಡೆಸಲಾಯಿತು. ಜಪಾನು 1944ರ ಆರಂಭದಲ್ಲಿ ಏಷ್ಯಾವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಳ್ಳುವ ಹಂತ ತಲುಪಿ

ಬಿಟ್ಟಿತು. ಭಾರತವನ್ನೂ ಬ್ರಿಟಿಷ್‌ರ ಆಳ್ವಿಕೆಯಿಂದ ಮುಕ್ತಗೊಳಿಸುವುದಾಗಿ ಜಪಾನು ಘೋಷಿಸಿತು. ಆದರೆ 1944ರ ಕೊನೆಯ ಹೊತ್ತಿಗೆ ಜಪಾನು ಹಿಮ್ಮೆಟ್ಟಬೇಕಾಯಿತು. ಚೀನಾದ ಆಗ್ನೇಯ ಪ್ರಾಂತಗಳ ಕಡೆಸಾಗಿದ ಜಪಾನು 1944ರ ಕೊನೆಯ ಹೊತ್ತಿಗೆ ಚೀನಾದ ಅರ್ಧಭಾಗವನ್ನು ತನ್ನ ವಶಮಾಡಿಕೊಂಡಿತು. ಮಂಚೂರಿಯಾದಿಂದ ಇಂಡೋ -ಚೀನಾದವರೆಗೆ ಭೂಸಂಪರ್ಕವನ್ನು ನೆಲೆಗೊಳಿಸಿರುವುದಾಗಿ ಹೇಳಿಕೊಂಡಿತು. ಆದರೆ ಅಷ್ಟರಲ್ಲಿ ಯುದ್ಧವು ಸ್ವರೂಪವು ತುಂಬ ಬದಲಾಗತೊಡಗಿತು ಮತ್ತು ಎಲ್ಲವೂ ಜಪಾನಿಗೆ ಪ್ರತಿಕೂಲವಾಗತೊಡಗಿತು.

ಕರೋಲ್ ಸಮುದ್ರದ 1942ರ ಯುದ್ಧದಲ್ಲಿ ಅಮೇರಿಕೆಯು ಜಪಾನಿಗೆ ಅಪಾರ ನಷ್ಟವುಂಟು ಮಾಡಿ ತೀವ್ರ ಸೋಲನ್ನು ಅನುಭವಿಸುವಂತೆ ಮಾಡಿತು. ಅದೇ ವರ್ಷ ವಸಂತ ಋತುವಿನಲ್ಲಿ ಅಮೇರಿಕೆಯ ಬಾಂಬುಗಳನ್ನು ತುಂಬಿಕೊಂಡ ವಿಮಾನಗಳು ಟೋಕಿಯೋದ ಮೇಲೆ ಧಾಳಿ ನಡೆಸಿದವು. ಒಂದೊಂದಾಗಿ ಫೆಸಿಫಿಕ್ ದ್ವೀಪಗಳನ್ನು ಅಮೇರಿಕಾ ಮತ್ತೊಮ್ಮೆ ತನ್ನ ವಶಪಡಿಸಿಕೊಳ್ಳತೊಡಗಿತು. ಅಮೆರಿಕೆಯು 1944 ರ ಅಂತ್ಯದೊತ್ತಿಗೆ ಸಾಯಿಸಾನ್ ಮತ್ತು ಮಾರಿಯನ್ಸ್ ದ್ವಿಪಗಳನ್ನು ತನ್ನ ವಶಪಡಿಸಿಕೊಂಡಿತು. ಜಪಾನಿನ ರಾಜಧಾನಿ ಮೇಲೆ ಆಕ್ರಮಣ ನಡೆಸಲು ಅಗತ್ಯವಾದ ನೆಲೆಗಳನ್ನು ಸದರಿ ದ್ವೀಪಗಳಲ್ಲಿ ಸ್ಥಾಪಿಸಿತು. ಜಪಾನಿನ ಸಾಮ್ರಾಜ್ಯ ಎಲ್ಲ ಕಡೆಯೂ ಕುಸಿಯತೊಡಗಿತು. ಜರ್ಮನಿಯ ಏಪ್ರಿಲ್ 1945ರಲ್ಲಿ ಶರಣಾಗತಿಯಾದ ಮೇಲೆ ಸೋಲು ಖಚಿತವಾಯಿತು. ಮಿತ್ರ ಪಕ್ಷಗಳ ಪಡೆಗಳು ಸಂಪೂರ್ಣವಾಗಿ ತಮ್ಮ ಗಮನವನ್ನು ಜಪಾನಿನ ಕಡೆ ಹೊರಳಿಸುವುದು ಸಾಧ್ಯವಾಯಿತು. ಫಿಲಿಪೈನ್ಸ್‌ನಿಂದ ಜಪಾನಿನ ಪಡೆಗಳನ್ನು ಹೊಡೆದೋಡಿಸಿದ ಮೇಲೆ ಬೋನಿನ್ ದ್ವೀಪದ ಬಳಿಯ ಒಂದು ಆಯಕಟ್ಟಿನ ದ್ವೀಪವನ್ನು ಅಮೇರಿಕಾ ವಶಪಡಿಸಿಕೊಂಡಿತು. ರೈಯುಕು ಗುಂಪಿನ ದ್ವೀಪಗಳಲ್ಲಿ ಒಕಿನಾವ ದ್ವೀಪವನ್ನು ಅಮೆರಿಕಾ ತನ್ನ ವಶಕ್ಕೆ ತೆಗೆದುಕೊಂಡಿತು. ಉತ್ತರಲ್ಲಿ ರಷ್ಯಾ ಜಪಾನಿನ ಪಡೆಗಳನ್ನು ಹಿಂದೆ ಸರಿಸುತ್ತಿತ್ತು. ಚೀನಾದಿಂದಲೂ ಜಪಾನಿನ ಪಡೆಗಳು ಕಾಲ್ತೆಗೆಯ ಬೇಕಾಯಿತು.

## 159.6 ಸಾರಾಂಶ

1939ರಲ್ಲಿ ಎರಡನೆಯ ಮಹಾಯುದ್ಧ ಆರಂಭಗೊಂಡಿತು. ಯುದ್ಧಕ್ಕೆ ಪೂರ್ವದಲ್ಲಿ ಜಪಾನು ತೀವ್ರ ಸ್ವರೂಪದ ಆಕ್ರಮಣಕಾರಿ ನೀತಿಯನ್ನು ಅನುಸರಿಸುತ್ತಿತ್ತು. ಯುರೋಪಿನ ಪ್ರಬಲ ರಾಷ್ಟ್ರಗಳ ಜಾಗತಿಕ ಯುದ್ಧದಲ್ಲಿ ಮುಳುಗಿ ಹೋಗಿದ್ದ ಸಂದರ್ಭದ ಲಾಭ ಮಾಡಿಕೊಂಡು ತನ್ನ ಆಕ್ರಮಣಕಾರಿ ನೀತಿಯನ್ನು ಮುಂದುವರಿಸಿತು. ಜಪಾನಿನ ಪಡೆಗಳು ಚೀನಾದ ಕಡೆ ತಮ್ಮ ಆಕ್ರಮಣ ನಡೆಸಿದವು. ಆಗ್ನೇಯ ಏಷ್ಯಾದ ದ್ವೀಪಗಳನ್ನೆಲ್ಲ ಆಕ್ರಮಿಸಿಕೊಂಡು ಮಹಾ ಏಷ್ಯಾದ ಮುಖಂಡನಾಗಬೇಕೆಂಬ ಮಹತ್ವಾಕಾಂಕ್ಷೆ ಉದ್ದೇಶದಿಂದ ಜಪಾನು ಎರಡನೆಯ ಮಹಾಯುದ್ಧ ಪ್ರವೇಶಿಸಿತು.

ಪೆರ್ಲ್ ರೇವುಪಟ್ಟಣದ ಧ್ವಂಸದಿಂದಾಗಿ, ಬ್ರಿಟನ್‌ನ ಯುದ್ಧ ನೌಕೆಗಳು ಮುಳುಗಿ ಹೋಗಿದ್ದರಿಂದ ಫೆಸಿಫಿಕ್ ಪ್ರದೇಶದಲ್ಲಿ ಬ್ರಿಟನ್ - ಅಮೇರಿಕಾ ಪಡೆಗಳು ಜಪಾನಿನ ಪಡೆಗಳ ಚಲನೆಯನ್ನು ತಡೆಗಟ್ಟುವುದರಲ್ಲಿ ವಿಫಲಗೊಂಡವು. ಜಪಾನು ತನ್ನ ಇಂಡೋ-ಚೀನಾ, ಫಾರಾಮೋಸಾ, ಫೆಸಿಫಿಕ್ ದ್ವೀಪಗಳಲ್ಲಿನ ನೆಲೆಗಳಿಂದ ಇಡೀ ಏಷ್ಯಾಖಂಡದ ತುಂಬಾ ತನ್ನ ಪ್ರಭಾವವನ್ನು ಪಸರಿಸಿತು. ಅತ್ಯಂತ ಅಲ್ಪಕಾಲಾವಧಿಯಲ್ಲಿ ಅದು ಹಾಂಕಾಂಗ್, ಮಲಯ, ಸಿಂಗಪುರ, ಬರ್ಮ, ನೆದರ್‌ಲ್ಯಾಂಡ್ಸ್, ಇಂಡೀಸ್, ಮಲಿನಾ, ಬಟಾನ್ ಮತ್ತು ಕಾರಿಗಿಡಾರ್‌ಗಳನ್ನು ತನ್ನ ವಶಪಡಿಸಿಕೊಂಡುಬಿಟ್ಟಿತು. ಅಂತಿಮವಾಗಿ ಅಮೆರಿಕೆಯ ಮಂಚೂಣೆಯ ಪಡೆಗಳು 1945ರಲ್ಲಿ ಮಿತ್ರ ರಾಷ್ಟ್ರಗಳ ಪಡೆಗಳಿಗೆ ಜಪಾನು ಶರಣಾಗುವಂತೆ ಮಾಡಿದವು. ಅಮೆರಿಕೆಯು ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿಗಳ ಮೇಲೆ ಅಣುಬಾಂಬುಗಳನ್ನು ಹಾಕಿತು.

ಜಪಾನಿಗೆ ವೈಭವ ಮತ್ತು ಅಧಿಕಾರವನ್ನು ತಂದುಕೊಟ್ಟ ವಿಸ್ತರಣಾವಾದಿ ನೀತಿಯೇ ಅದರ ಅತಃಪತನಕ್ಕೆ ಕಾರಣವಾಯಿತು. ಜಪಾನು ಅತಿಯಾದ ಮಹತ್ವಾಕಾಂಕ್ಷೆ ಇಟ್ಟುಕೊಳ್ಳದೇ ಇದ್ದಿದ್ದರೆ ಮತ್ತು ವಿಶ್ವದ ಪ್ರಬಲ ರಾಷ್ಟ್ರಗಳ ಜೊತೆ ವೈರತ್ವ ಕಟ್ಟಿಕೊಳ್ಳದೇ ಇದ್ದಿದ್ದರೆ ತನ್ನ ವಿಜಯದ ಯಾತ್ರೆಯನ್ನು ಇನ್ನಷ್ಟು ಕಾಲ ಭದ್ರವಾಗಿಟ್ಟುಕೊಳ್ಳ ಬಹುದಾಗಿತ್ತು.

## 159.7 ಸ್ವಯಂ ಪ್ರಗತಿ ಪರೀಕ್ಷೆ

**I.** ಆರು ವಾಕ್ಯಗಳಲ್ಲಿ ಪ್ರತಿಯೊಂದನ್ನು ಉತ್ತರಿಸಿ

ಅ. ಪರ್ಲ್ ರೇವು ಪಟ್ಟಣ್ಣದ ಮೇಲೆ ಧಾಳಿ.

ಆ. ಮಹಾ ಆಗ್ನೇಯ ಏಷ್ಯಾ ಸಮೃದ್ಧತೆ ಸಹಪ್ರಾಂತ.

ಇ. ಜನರಲ್ ಟೋಜೋ

**II.** ಹದಿನೈದರಿಂದ **20** ವಾಕ್ಯಗಳಲ್ಲಿ ಪ್ರತಿಯೊಂದನ್ನು ಉತ್ತರಿಸಿರಿ.

ಅ. ಎರಡನೆಯ ಮಹಾಯುದ್ಧದಲ್ಲಿ ಜಪಾನು ಆರಂಭದಲ್ಲಿ ಸಾಧಿಸಿದ ವಿಜಯಕ್ಕೆ ಮತ್ತು ಕೊನೆಯಲ್ಲಿ ಕಂಡ ಸೋಲಿಗೆ ಕಾರಣಗಳನ್ನು ವಿವರಿಸಿ.

ಆ. ಆಗ್ನೇಯ ಏಷ್ಯಾದಲ್ಲಿ ಜಪಾನಿನ ಆಕ್ರಮಣವು ಉಂಟುಮಾಡಿದ ಪರಿಣಾಮಗಳನ್ನು ವಿವರಿಸಿ.

ಇ. ಜಪಾನಿನ ಅಂತಿಮ ಶರಣಾಗತಿಗೆ ಕಾರಣವಾದ ಆಗ್ನೇಯ ಏಷ್ಯಾದಲ್ಲಿನ ಅದರ ಆಕ್ರಮಣಗಳ ಹಂತದ ಸ್ವರೂಪವನ್ನು ವಿವರಿಸಿ.

## 159.9 ಹೆಚ್ಚಿನ ಓದಿಗೆ ಗ್ರಂಥಗಳು


1. ಡೆವಿಡ್ ಎಚ್.ಜೇಮ್ಸ್ : ದಿ ರೈಸ್ ಅಂಡ್ ಫಾಲ್ ಆಫ್ ಜಪಾನೀಸ್ ಎಂಫೈರ್

2. ಕೆ.ಎಸ್.ಲಟ್‌ರೆಟಿ : ಡೆವಲಪ್‌ಮೆಂಟ್ ಆಫ್ ಜಪಾನ್

3. ಸ್ಟೋರ್ಟಿನಿ : ಹಿಸ್ಟರಿ ಆಫ್ ಮಾರ್ಡನ್ ಜಪಾನ್

4. ವಿಲಯಮ್ ಬೇರ್ರಿ : ಮಾರ್ಡನ್ ಜಪಾನ್

# ಘಟಕ - 160

## ಮಿತ್ರ ಪಕ್ಷಗಳ ಆಳ್ವಿಕೆಯಲ್ಲಿ ಜಪಾನ್

*ರಚನೆ*


160.0 ಉದ್ದೇಶಗಳು

160.1 ಪ್ರಸ್ತಾವನೆ

160.2 ಜಪಾನಿನ ಸ್ವಾಧೀನ

160.3 ಜಪಾನಿನ ಸಾಮ್ರಾಜ್ಯಶಾಹಿಯ ನಾಶ

160.4 ಪ್ರಜಾಪ್ರಭುತ್ವೀಕರಣ ಪ್ರಕ್ರಿಯೆ

160.5 ಮಿತ್ರಪಕ್ಷಗಳ ಆಳ್ವಿಕೆಯಲ್ಲಿ ಸುಧಾರಣೆಗಳು

160.5.1 ಆರ್ಥಿಕ ಸುಧಾರಣೆಗಳು

160.5.2 ಶೈಕ್ಷಣಿಕ ಸುಧಾರಣೆಗಳು

160.5.3 ಶೈಕ್ಷಣಿಕ ಸುಧಾರಣೆಗಳು

160.5.4 ಸ್ವಾಧೀನ ಸರ್ಕಾರದಲ್ಲಿ ರಾಜಕಾರಣ

160.6 ಜಾಯಬಟ್ಸುಗಳ ವಿಸರ್ಜನೆ

160.7 ಸ್ಯಾನ್ ಪ್ರಾನ್ಸಿಸ್ಕೊ ಒಪ್ಪಂದ

160.8 ಸಾರಾಂಶ

160.9 ಸ್ವಯಂ ಪ್ರಗತಿ ಪರೀಕ್ಷೆ

160.10 ಹೆಚ್ಚಿನ ಓದಿನ ಗ್ರಂಥಗಳು

## 160.0 ಉದ್ದೇಶಗಳು

ಈ ಭಾಗದಲ್ಲಿ 1945ರಿಂದ 1952ರವರೆಗೆ ಜಪಾನಿನಲ್ಲಿನ ಸ್ವಾಧೀನ ಸರ್ಕಾರದ ಕಾರ್ಯವನ್ನು ಕುರಿತಂತೆ ಚರ್ಚಿಸುತ್ತೇವೆ. ಈ ಭಾಗದ ಅಧ್ಯಯನದಿಂದ ಕೆಳಕಂಡ ಸಂಗತಿಗಳು ನಿಮಗೆ ತಿಳಿಯುತ್ತವೆ.

ಮಿತ್ರಪಕ್ಷಗಳ ಪಡೆಗಳಿಗೆ ಆಗಸ್ಟ್ 14, 1945 ರಲ್ಲಿ ಜಪಾನಿನ ಬೇಷರತ್ ಶರಣಾಗತಿ.

ಅಮೇರಿಕೆಯ ಡಗ್ಲಾಸ್ ಮೆಕಾರ್ಥರ್‌ನನ್ನು ಮಿತ್ರ ಪಡೆಗಳ ಮಹಾದಂಡಾಧಿಕಾರಿಯಾಗಿ ನೇಮಿಸಿದ್ದು.

ಸ್ವಾಧೀನದ ಉದ್ದೇಶಗಳು

ಆಕ್ರಮಿತಿ ಪ್ರದೇಶಗಳ ಬಿಡುಗಡೆ ಮತ್ತು ಜಪಾನಿನ ಡೀಮಿಲಿಟರೀಕರಣ

ಮೀಜಿ ಸಂವಿಧಾನದ (1889) ಸ್ಥಳದಲ್ಲಿ ಹೊಸ ಸಂವಿಧಾನವನ್ನು (1947) ಜಾರಿಗೊಳಿಸಿದ್ದು. ಎಸ್.ಸಿ.ಎ.ಪಿ. ಯಿಂದ ಸುಧಾರಣೆಗಳನ್ನು ಅನುಷ್ಠಾನಗೊಳಿಸಿದ್ದು.

ಏಪ್ರಿಲ್ 28, 1952 ರಲ್ಲಿ ಸ್ವಾದೀನ ಆಳ್ವಿಕೆಯ ಅಂತ್ಯ ಮತ್ತು ಜಪಾನು ಮತ್ತೊಮ್ಮೆ ಸ್ವಾತಂತ್ರ ರಾಷ್ಟ್ರವಾದದ್ದು.

## 160.1 ಪ್ರಸ್ತಾವನೆ

ಪೊಟ್ಸ್‌ಡಾಮ್ ಘೋಷಣೆಯಲ್ಲಿ ವಿಧಿಸಿದ್ದ ನಿಯಮ -ನಿಬಂಧನೆಗಳನ್ನೆಲ್ಲ ಒಪ್ಪಿಕೊಂಡು ಜಪಾನು ಆಗಸ್ಟ್ 14, 1945ರಂದು ಮಿತ್ರ ಪಕ್ಷಗಳ ಪಡೆಗಳಿಗೆ ಶರಣಾಯಿತು. ಜಪಾನಿನ ವೈಭವದ ಕನಸು ಅಂತಿಮವಾಗಿ ಶರಣಾಗತಿಯಲ್ಲಿ ಕೊನೆಗೊಂಡಿತು. ಜಪಾನಿನ 1945ರ ಸೋಲು ಅದು ಮೂರನೆಯ ದರ್ಜೆಯ ಶಕ್ತಿಯನ್ನಾಗಿ ಮಾಡಿತು. ವಿಸ್ತೀರ್ಣದ ದೃಷ್ಟಿಯಿಂದ ಅದು ಆಕ್ರಮಿಸಿಕೊಂಡಿದ್ದ ಎಲ್ಲ ಪ್ರದೇಶಗಳನ್ನು ಬಿಟ್ಟುಕೊಡಬೇಕಾಯಿತು. ಹೊನ್ಶು, ಶಿಕೊವು, ಕೈಶು ಮತ್ತು ಹೊಕ್ಕೈಡೊ ಎಂಬ ನಾಲ್ಕು ದ್ವೀಪಗಳು ಮಾತ್ರ ಉಳಿದುಕೊಂಡವು. ಕೆಲವು ಸಣ್ಣಪುಟ್ಟ ದ್ವೀಪಗಳು ಉಳಿದುಕೊಂಡವು. ಈ ದ್ವೀಪಗಳಲ್ಲಿ 1867ರಲ್ಲಿ 30ದಶಲಕ್ಷ ಜನ ವಾಸಿಸುತ್ತಿದ್ದರೆ ಈಗ ಅದೇ ಪ್ರದೇಶದಲ್ಲಿ 80 ದಶಲಕ್ಷ ಜನ ವಾಸ ಮಾಡಬೇಕಾಯಿತು.

ಜಪಾನಿನ ಸ್ವಾಧೀನವು ಸಂಪೂರ್ಣವಾಗಿ ಅಮೆರಿಕೆಯ ಕೈಯಲ್ಲಿತ್ತು. ಸ್ವಾಧೀನ ನೀತಿಯನ್ನು ಅಮೆರಿಕೆಯು 'ಜಪಾನಿನಲ್ಲಿ ಶರಣಾಗತಿ ನಂತರ ಅಮೆರಿಕೆಯ ಆರಂಭದ ನೀತಿ' ಎಂಬ ಪ್ರಬಂಧದಲ್ಲಿ ಮಂಡಿಸಿತು. ಅಮೆರಿಕೆಯ ಡಗ್ಲಾಸ್ ಮೆಕಾರ್ಥರನನ್ನು ಸರ್ವಾನುಮತದಿಂದ ಆಗಸ್ಟ್ 12, 1945ರಲ್ಲಿ ಮಿತ್ರಪಡೆಗಳ ಮಹಾದಂಡಾಧಿಕಾರಿಯಾಗಿ ನೇಮಕ ಮಾಡಲಾಯಿತು. ಜಪಾನಿನ ಸ್ವಾಧೀನವನ್ನು ಮಿತ್ರಪಕ್ಷಗಳ ಸ್ವಾಧೀನವೆಂದು ಕರೆಯಲಾಗಿದೆ ಮತ್ತು ಅದು 1952ರವರೆಗೆ ಮುಂದುವರಿಯಿತು.

ಸ್ವಾಧೀನ ಪಡೆಗಳು ತಮ್ಮ ಸ್ವಾಧೀನದ ಉದ್ದೇಶವನ್ನು ಆರಂಭದಲ್ಲೇ ಸ್ಪಷ್ಟಪಡಿಸಿದವು. ವಿಶ್ವದಲ್ಲಿ ಶಾಂತಿ ಮತ್ತು ಸುಭದ್ರತೆಯನ್ನು ಮತ್ತೊಮ್ಮೆ ಜಪಾನು ನಾಶ ಮಾಡಲು ಸಾಧ್ಯವಾಗದಂತಹ ವಾತಾವರಣವನ್ನು ಜಪಾನಿನಲ್ಲಿ ಸೃಷ್ಟಿ ಮಾಡುವುದು ಸ್ವಾಧೀನ ಪಡೆಗಳ ಪ್ರಮುಖ ಉದ್ದೇಶವಾಗಿತ್ತು. ಇದರ ಜೊತೆಗೆ ಜಪಾನು ಶಾಂತಿಯನ್ನು ಕಾಪಾಡುವ ದೇಶಗಳ ಪರಿವಾರವನ್ನು ಸೇರುವಂತೆ ಮಾಡುವುದು ಇನ್ನೊಂದು ಉದ್ದೇಶವಾಗಿತ್ತು.

ಜಪಾನು ಆಕ್ರಮಣ ಮಾಡಿ ತನ್ನ ವಶಮಾಡಿಕೊಂಡಿದ್ದ ಆಗ್ನೇಯ ಏಷ್ಯಾದ ದೇಶಗಳಲ್ಲೆ ಅಮೆರಿಕೆಯು ಯಾವುದೇ ಮರುಕ ತೋರದೆ ಜಪಾನಿಗೆ ಪಾಠ ಕಲಿಸಬೇಕು ಎಂದು ಬಯಸಿದ್ದವು. ಆದರೆ ಅಮೆರಿಕೆಯು ಜಪಾನಿನ ಪುನರ್ ನಿರ್ಮಾಣಕ್ಕೆ ಬೇಕಾದ ಸಹಾಯ ನೀಡಿತು. ಜಪಾನು 1952ರಲ್ಲಿ ತನ್ನ ಕಾಲ ಮೇಲೆ ತಾನು ನಿಲ್ಲುವಂತಾದ ಮೇಲೆ ಅಮೆರಿಕೆಯು ಜಪಾನಿನಿಂದ ವಾಪಸ್ಸಾಯಿತು.

## 160.2. ಜಪಾನಿನ ಸ್ವಾಧೀನ

ಅಂತಿಮವಾಗಿ 1945ರಲ್ಲಿ ಜಪಾನಿನ ಸೋಲು ಮತ್ತು ಶರಣಾಗತಿಯು ಒಂದು ಅವಮಾನಕರ ಸಂಗತಿಯಾಗಿತ್ತು. ಆರ್ಥಿಕ ದಾರಿದ್ರ್ಯಕ್ಕೆ ಕಾರಣವಾಯಿತು. ಅದರ ಸಾಮ್ರಾಜ್ಯವು ಅಸ್ತಂಗತವಾಯಿತು. ಇದು ಮಾತ್ರವಲ್ಲದೆ ಜಪಾನಿನ ಭೂಪ್ರದೇಶದಲ್ಲಿ ವಿದೇಶ ಪಡೆಗಳು ನೆಲೆಗೊಂಡವು. ಜಪಾನು ಸೋಲುವಂತೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಅಮೆರಿಕೆಗೆ ಸ್ವಾಧೀನದ ಮತ್ತು ನಿಶಸ್ತ್ರೀಕರಣದ ಹಾಗೂ ಸುಧಾರಣೆ ತರುವ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. ಅಮೆರಿಕೆಯ ಜನರಲ್ ಡಗ್ಲಾಸ್ ಮೆಕಾರ್ಥರನು ಮಿತ್ರ ಪಡೆಗಳ ಮಹಾದಂಡಾಧಿಕಾರಿಯಾಗಿದ್ದನು. ಈತನ ಜಪಾನು ಶರಣಾಗುವಂತೆ ಮಾಡಿದನು ಮತ್ತು ಸ್ವಾಧೀನ ಆಳ್ವಿಕೆ ನಡೆಸಿದನು. ಜನರಲ್ ಮೆಕಾರ್ಥರನು ಜಪಾನಿಗೆ ಆಗಮಿಸಿದಾಗ ಆತನನ್ನು 'ಸಂಯುಕ್ತ ಚಕ್ರವರ್ತಿ'ಯಂತೆ ಬಹಮಾಡಿಕೊಳ್ಳಲಾಯಿತು. ಮಹಾದಂಡಾಧಿಕಾರಿಯಾಗಿದ್ದ ಅವನು 1951ರ ಕೊನೆಯವರೆಗೆ ಜಪಾನನ್ನು ಆಳಿದನು.

ಮಿತ್ರಪಕ್ಷಗಳ ಪಡೆಗಳು ಒಂದು ಸಂಗತಿಯನ್ನು ಸೃಷ್ಟಿಪಡಿಸಿದವು. ಜಪಾನು ಮತ್ತೊಮ್ಮೆ ವಿಶ್ವಶಾಂತಿಯನ್ನು ಸುಭದ್ರತೆಯನ್ನು ಕದಡದಂತೆ ಮಾಡುವ ವಾತಾವರಣವನ್ನು ಸೃಷ್ಟಿಸುವುದು ಸ್ವಾಧೀನ ಪಡೆಗಳ ಉದ್ದೇಶವಾಗಿತ್ತು. ವಿಶ್ವದ ಶಾಂತಿಪೂರ್ಣದೇಶಗಳ ಪರಿವಾರದಲ್ಲಿ ಜಪಾನು ಒಂದಾಗ ಬೇಕು ಎಂಬುದು ಸ್ವಾಧೀನ ಪಡೆಗಳು ಇನ್ನೊಂದು ಉದ್ದೇಶವಾಗಿತ್ತು.

ಈ ಗುರಿಯನ್ನು ಸಾಧಿಸುವುದಕ್ಕಾಗಿ ಕೆಳಕಂಡ ಕ್ರಮಗಳನ್ನು ಜಾರಿಗೊಳಿಸಲು ನಿರ್ಣಯಿಸಲಾಯಿತು.

1. ಜಪಾನಿನ ಸಾರ್ವಭೌಮತ್ವವನ್ನು ಅದರ ಭೂಪ್ರದೇಶಕ್ಕೆ ಮತ್ತು ಕೆಲವು ಸನಿಹದ ದ್ವೀಪಗಳಿಗೆ ಮಾತ್ರ ಸೀಮಿತಗೊಳಿಸಲು ತೀರ್ಮಾನಿಸಲಾಯಿತು.
2. ಜಪಾನಿನ ಮಿಲಿಟರಿ ಯಂತ್ರವನ್ನು ಮತ್ತು ಅದನ್ನು ಬೆಂಬಲಿಸುತ್ತಿದ್ದ ಆರ್ಥಿಕ ಮೂಲವನ್ನು ನಿರ್ನಾಮ ಮಾಡುವುದು.
3. ಯುದ್ಧ ಖೈದಿಗಳನ್ನು ಮತ್ತು ಅಪರಾಧಿಗಳನ್ನು ಶಿಕ್ಷಿಸುವುದು.
4. ಜನರ ಆಸೆ -ಅಭಿಲಾಷೆಗಳು ಪ್ರಜಾಪ್ರಭುತ್ವ ನಿಯಮಗಳಿಗೆ ಅನುಗುಣವಾಗಿ ಅಭಿವ್ಯಕ್ತಗೊಳ್ಳಲು ಅಗತ್ಯವಾದ ಸಂಘಟನೆಗಳನ್ನು ಕಾರ್ಮಿಕ, ಕೈಗಾರಿಕೆ ಮತ್ತು ಕೃಷಿ ವಲಯಗಳಲ್ಲಿ ಬೆಳೆಸಲು ಬೆಂಬಲ ನೀಡುವುದು.
5. ಉತ್ಪಾದನಾ ಸಂಪನ್ಮೂಲಗಳು ಹಾಗೂ ಸಂಪತ್ತು ಎಲ್ಲರಿಗೂ ದೊರೆಯುವಂತೆ ಹಂಚುವ ಹಾಗೂ ವರಮಾನದ ಅಸಮಾನತೆಗಳನ್ನು ತಗ್ಗಿಸುವ ನೀತಿಗಳನ್ನು ಜಾರಿಗೊಳಿಸುವುದು.
6. ಕೌಟುಂಬಿಕ ಮತ್ತು ಅಂತರಿಕ ಮೌಲ್ಯಗಳನ್ನು ಜನರು ಒಪ್ಪಿಕೊಳ್ಳುವಂತೆ ಮಾಡಲು ಪೂರಕವಾಗುವಂತೆ ಶೈಕ್ಷಣಿಕ ಪುನಾರಚಿಸುವುದು.

ಸ್ವಾಧೀನ ನೀತಿಯನ್ನು ಅನುಷ್ಠಾನಗೊಳಿಸುವ ಅಧಿಕಾರವನ್ನು ಮೆಕಾರ್ಥರ್‌ಗೆ ನೀಡಲಾಯಿತು. ಸ್ವಾಧೀನದ ಅವಧಿಯಲ್ಲಿ ಅವನು ಮಿಲಿಟರಿ ಪರಂಪರೆಗೆ ಅನುಗುಣಾವಾಗಿ ಆಡಳಿತ ನಡೆಸಿದನು. ಆಕ್ರಮಣಕಾರನಾಗಿ ಜಪಾನನ್ನು ಪ್ರವೇಶಿಸದ ಮೇಲೆ ಯುದ್ಧದಿಂದ ವಿಧ್ವಂಸವಾಗಿದ್ದ ದೇಶದಲ್ಲಿ ದೃಢತೆಯನ್ನು ಮರುಸ್ಥಾಪಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಚಕ್ರವರ್ತಿಯ ಅನುಮೋದನೆಯೊಂದಿಗೆ ಅವನು ಮಹಾಚಕ್ರವರ್ತಿ ಪದವಿಯನ್ನು ಪಡೆದುಕೊಂಡನು. ಸಂಕ್ಷಿಪ್ತವಾಗಿ ಹೇಳುವುದಾದರೆ ಅವನೊಬ್ಬ ರಾಷ್ಟ್ರೀಯ ವೀರನೆಂಬ ಬಿರುದಿಗೆ ಪಾತ್ರನಾದನು ಮತ್ತು ಸ್ವಾಧೀನ ಆಳ್ವಿಕೆಯ ಮೂಲ ಉದ್ದೇಶಗಳ ಪ್ರತೀಕವಾಗಿದ್ದ ಅವನು ಹೊಸ ಜಪಾನನ್ನು ಕಟ್ಟುವ ಭರವಸೆ ನೀಡಿದನು.

ಡಿಸೆಂಬರ್ 1945ರಲ್ಲಿ ವಿದೇಶಾಂಗ ಮಂತ್ರಿಗಳ ಮಾಸ್ಕೊ ಸಮಾವೇಶ ನಡೆಯಿತು. ಅಲ್ಲಿ ಹನ್ನೊಂದು ದೇಶಗಳ ದೂರ ಪ್ರಾಚ್ಯ ಮತ್ತು ಏಷ್ಯಾ ಆಯೋಗವನ್ನು ಹಾಗೂ ಜಪಾನಿನ ನಾಲ್ಕು ಮಿತ್ರ ಪಕ್ಷಗಳ ಮಂಡಳಿಯನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ದೂರ ಪ್ರಾಚ್ಯ ಆಯೋಗದಲ್ಲಿ ರಷ್ಯಾ, ಗ್ರೇಟ್ ಬ್ರಿಟನ್, ಅಮೆರಿಕಾ, ಚೀನಾ, ಫ್ರಾನ್ಸ್, ನೆದರ್‌ಲ್ಯಾಂಡ್ಸ್, ಕೆನಡ, ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್, ಇಂಡಿಯಾ ಮತ್ತು ಫಿಲಿಫೈನ್ಸ್‌ಗಳು ಸದಸ್ಯ ರಾಷ್ಟ್ರಗಳಾಗಿದ್ದವು. ನವೆಂಬರ್ 17, 1949ರಲ್ಲಿ ಬರ್ಮಾ ಮತ್ತು ಪಾಕಿಸ್ತಾನಗಳು ಅದರಲ್ಲಿ ಸದಸ್ಯ ರಾಷ್ಟ್ರಗಳಾಗಿ ಸೇರಿಕೊಂಡವು. ಮಿತ್ರ ಪಕ್ಷಗಳ ಪಡೆಗಳ ಮಹಾದಂಡಾಧಿಕಾರಿಯ ಮೇಲೆ ಆಯೋಗಕ್ಕೆ ಸಂಪೂರ್ಣ ನಿಯಂತ್ರಣವಿರಬೇಕೆಂದು ಮತ್ತು ಆಯೋಗದ ನಿರ್ದೇಶನಕ್ಕೆ ಅನುಗುಣವಾಗಿ ಮೆಕಾರ್ಥರ್ ನಡೆದುಕೊಳ್ಳಬೇಕೆಂದು ನಿರ್ಧರಿಸಲಾಗಿತ್ತು. ಈ ಆಯೋಗದ ಕಛೇರಿ ವಾಷಿಂಗ್‌ಟನ್‌ನಲ್ಲಿತ್ತು. ಜಪಾನಿನ ಮಿತ್ರಪಕ್ಷಗಳ ಮಂಡಳಿಯಲ್ಲಿ ಅಮೆರಿಕಾ, ಸೋವಿಯತ್ ರಷ್ಯಾ, ಚೀನಾ, ಗ್ರೇಟ್ ಬ್ರಿಟನ್ ಸದಸ್ಯರಾಷ್ಟ್ರಗಳಾಗಿದ್ದವು. ಇದರ ಕೇಂದ್ರ ಸ್ಥಾನ ಟೋಕಿಯೋದಲ್ಲಿತ್ತು ಮತ್ತು ಮೆಕಾರ್ಥರ್ ಇದರ ಅಧ್ಯಕ್ಷ ನಾಗಿದ್ದನು.

ಆರಂಭದಲ್ಲಿ ಪ್ರಜಾಪ್ರಭುತ್ವವಾದಿ ಸ್ವಯಂಮಾಡಳಿತ ನಿಯಮಗಳಿಂದ ಕೂಡಿದ ಸರ್ಕಾರವನ್ನು ಜಪಾನಿನಲ್ಲಿ ರಚಿಸಬೇಕೆಂದು ಅಪೇಕ್ಷಿಸಲಾಗಿತ್ತು. ಆದರೆ ಜಪಾನಿನ ಜನಾಭಿಪ್ರಾಯಕ್ಕೆ ವಿರುದ್ಧವಾದ ರಾಜಕೀಯ ವ್ಯವಸ್ಥೆಯನ್ನು ಜಪಾನಿನ ಮೇಲೆ ಸ್ವಾಧೀನ ಆಡಳಿತವು ಹೇರಬಾರದು ಎಂದೂ ತೀರ್ಮಾನಿಸಲಾಯಿತು. ಚಕ್ರವರ್ತಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಜಪಾನಿಗೆ ಅನುಮತಿ ನೀಡಲಾಯಿತು. ಅನೂಚನವಾಗಿ ಹರಿದುಕೊಂಡು ಬಂದ ವ್ಯವಸ್ಥೆಯನ್ನು ಉಳಿಸಿಕೊಳ್ಳಲಾಯಿತು. ಮಿತ್ರಪಕ್ಷಗಳ ಪಡೆಗಳ ಮಹಾದಂಡಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಜಪಾನಿನ ಸರ್ಕಾರ ಕೆಲಸ ಮಾಡಬೇಕಾಗಿತ್ತು. ಮಹಾದಂಡಾಧಿಕಾರಿಯ ನಿರ್ದೇಶನಗಳನ್ನು ಗೌರವಿಸಬೇಕಾಗಿತ್ತು. ವಾರಕ್ಕೊಮ್ಮೆ ಚಕ್ರವರ್ತಿಯ ಮೆಕಾರ್ಥರನನ್ನು ಭೇಟಿ ಮಾಡಬೇಕಾಗಿತ್ತು. ಆದರೆ ಮೆಕಾರ್ಥರ್ ಚಕ್ರವರ್ತಿಯ ಭೇಟಿಗೆ ಹೋಗುತ್ತಿರಲಿಲ್ಲ. ಮಿತ್ರಪಕ್ಷಗಳ ಮಹಾದಂಡಾಧಿಕಾರಿಯು ಜಪಾನಿನ ಸರ್ಕಾರದ ಮೂಲಕ ಕೆಲಸ ಮಾಡಬೇಕಾಗಿತ್ತು. ಆದರೆ ಮಹಾದಂಡಾಧಿಕಾರಿಯ ಆಡಳಿತದಲ್ಲಿ ಅಮೆರಿಕೆಯ ಪ್ರಭಾವ ವ್ಯಾಪಕವಾಗಿತ್ತು.

## 160.3 ಜಪಾನಿನ ಸಾಮ್ರಾಜ್ಯಶಾಹಿಯ ನೆಲಸಮವಾದದ್ದು

ಜಪಾನಿನ ಸಾರ್ವಭೌಮತ್ವವು ಅದರ ನಾಲ್ಕು ಮುಖ್ಯ ದ್ವೀಪಗಳಾದ ಹೊಕೈಡೊ, ಹೊನ್ಷ, ಶಿಕೋಡು ಮತ್ತು ಯುಷುಗಳಿಗೆ ಮಾತ್ರ ಸೀಮಿತವಾಗಿತ್ತು. ಮೀಜಿ ಆಡಳಿತ ಕಾಲದಿಂದಲೂ ಜಪಾನು ಆಕ್ರಮಿಸಿಕೊಂಡಿದ್ದ ಭೂಪ್ರದೇಶವನ್ನೆಲ್ಲ ಅದರಿಂದ ಕಿತ್ತುಕೊಳ್ಳಲಾಯಿತು. ಕುರಿಲೆಸ್ ಮತ್ತು ದಕ್ಷಿಣ ಸಕಲಿನ್ ಸೊವಿಯಟ್ ರಷ್ಯಾದ ಪಾಲಾಯಿತು. ಮೊದಲನೆಯ ಮಹಾಯುದ್ಧದಲ್ಲಿ ಜರ್ಮನಿಯ ವಶದಲ್ಲಿದ್ದ ಫೆಸಿಫಿಕ್ ಸಾಗರದ ದ್ವೀಪಗಳನ್ನು ವಿಶ್ವಸಂಸ್ಥೆಯ ವ್ಯಾಪ್ತಿಯಲ್ಲಿರುವಂತೆ ಅಮೆರಿಕೆಗೆ ಹಸ್ತಾಂತರಿಸಲಾಯಿತು. ಮಂಚೂರಿಯಾ ಮತ್ತು ಚೀನಾಗಳಿಂದ ಜಪಾನು ಕಾಲ್ತೆಗೆಯಬೇಕಾಯಿತು. ಫಾರ್‌ಮೋಸ ಮತ್ತು ಪರ್ಕಡೋರಿಸ್‌ಗಳನ್ನು ಚೀನಾಕ್ಕೆ ಹಿಂತುರುಗಿಸಲಾಯಿತು. ಕೊರಿಯಾವನ್ನು ಎರಡು ಭಾಗಗಳನ್ನಾಗಿ ವಿಭಜಿಸಿ ತಾತ್ಕಾಲಿಕವಾಗಿ ಒಂದು ಭಾಗವನ್ನು ಅಮೆರಿಕೆಯ ವಶಕ್ಕೆ ಮತ್ತೊಂದು ಭಾಗವನ್ನು ಸೊವಿಯಟ್ ರಷ್ಯಾದ ವಶಕ್ಕೆ ಒಪ್ಪಿಸಲಾಯಿತು. ಸಾಮ್ರಾಜ್ಯಶಾಹಿ ನೀತಿಯ ಮೂಲಕ ಆಕ್ರಮಿಸಿಕೊಂಡಿದ್ದ ಭಾಗಗಳನ್ನೆಲ್ಲಾ ಜಪಾನಿನಿಂದ ಬೇರೆ ಬೇರೆ ಹಕ್ಕುದಾರರಿಗೆ ಹಿಂತಿರುಗಿಸಲಾಯಿತು. ಈಗ ಜಪಾನು ಕೇವಲ ನಾಲ್ಕು ದ್ವೀಪಗಳ ರಾಷ್ಟ್ರವಾಗಿ ಬಿಟ್ಟಿತು.

ಯುದ್ಧ ಪಡೆಗಳಲ್ಲಿನ ಸೈನಿಕರನ್ನೆಲ್ಲ ನಿವೃತ್ತಿಗೊಳಿಸಲಾಯಿತು ಮತ್ತು ಅನೇಕರನ್ನು ಸ್ವದೇಶಕ್ಕೆ ಕಳುಹಿಸಿಕೊಡಲಾಯಿತು. ಹೀಗೆ ಡೀಮಿಲಿಟರೀಕರಣ ಪ್ರಕ್ರಿಯೆ ಜಪಾನಿನಲ್ಲಿ ನಡೆಯಿತು. ಸಾಮ್ರಾಜ್ಯಶಾಹಿ ದಂಡಾಧಿಕಾರಿ ಕೇಂದ್ರ ಸ್ಥಾನವನ್ನು, ಯುದ್ಧ ಸಚಿವಾಲಯವನ್ನು, ನೌಕಾದಳವನ್ನು, ಮಿಲಿಟರಿ ಮತ್ತು ಅರೆ ಮಿಲಿಟರಿ ಸಂಘಟನೆಗಳನ್ನು ವಿಸರ್ಜಿಸಲಾಯಿತು. ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವ ಘಟಕಗಳನ್ನೆಲ್ಲ ಮುಚ್ಚಲಾಯಿತು ಮತ್ತು ಯುದ್ಧಕ್ಕೆ ಸಂಬಂಧಿಸಿದ ಎಲ್ಲ ಭೌತಿಕ ಸರಕು - ಸಾಮಗ್ರಿಗಳನ್ನೆಲ್ಲ

ನಾಶಪಡಿಸಲಾಯಿತು. ಶಸ್ತ್ರಾಸ್ತ್ರಗಳ ಹಾಗೂ ಮದ್ದು -ಗುಂಡುಗಳ ಉತ್ಪಾದನೆಯನ್ನು ನಿಷೇಧಿಸಲಾಯಿತು. ಅಂತರಿಕ್ಷ ವಿಜ್ಞಾನ ಮತ್ತು ಪರಮಾಣು ಭೌತಶಾಸ್ತ್ರಗಳಿಗೆ ಸಂಬಂಧಿಸಿದ ಸಂಶೋಧನಾ ಚಟುವಟಿಕೆಗಳನ್ನೆಲ್ಲ ಬಹಿಷ್ಕರಿಸಲಾಯಿತು. ಜಪಾನಿನ ಮಿಲಿಟರಿಯನ್ನು ಸಂಪೂರ್ಣವಾಗಿ ಧೂಳಿಪಟ ಮಾಡಲಾಯಿತು. ಹೊಸದಾಗಿ ರಚಿಸಲಾದ ಸಂವಿಧಾನದಲ್ಲಿ ಮಿಲಿಟರಿಸಮ್‌ಗೆ ಯಾವುದೇ ಅವಕಾಶವಿಲ್ಲದಂತೆ ನಿಬಂಧನೆಗಳನ್ನು ವಿಧಿಸಲಾಯಿತು. ಅಂತಾರಾಷ್ಟ್ರೀಯ ವಿವಾಧಗಳ ಪರಿಹಾರಕ್ಕೆ ಯುದ್ಧವೊಂದೆ ಮಾರ್ಗವಲ್ಲವೆಂಬುದನ್ನು ಸಂವಿಧಾನದಲ್ಲಿ ಪ್ರತಿಪಾದಿಸಲಾಯಿತು.

## 160.4 ಪ್ರಜಾಪ್ರಭುತ್ವೀಕರಣದ ಪ್ರಕ್ರಿಯೆ

ಜಪಾನನ್ನು ಪ್ರಜಾಪ್ರಭುತ್ವೀಕರಿಸಲೋಸುಗ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಅಲ್ಲಿನ ಸಂಸ್ಥೆಗಳಲ್ಲವನ್ನೂ ಪ್ರಜಾಪ್ರಭುತ್ವೀಕರಿಸಲು ಪ್ರಯತ್ನಿಸಲಾಯಿತು. ಈ ದಿಶೆಯಲ್ಲಿ ಮಹತ್ವದ ಕ್ರಮವೆಂದರೆ ಹೊಸ ಸಂವಿಧಾನದ ರಚನೆ. ಮೀಜಿ ಸಂವಿಧಾನದ ಸ್ಥಳದಲ್ಲಿ ಹೊಸ ಸಂವಿಧಾನವನ್ನು ಪ್ರತಿಷ್ಠಾಪಿಸಲಾಯಿತು. ಊಳಿಗಮಾನ್ಯ ಮತ್ತು ಸರ್ವಾಧಿಕಾರಿ ಮನೋಭಾವ ಮತ್ತು ವಿಧಾನಗಳ ಸ್ಥಳದಲ್ಲಿ ಉದಾರವಾದಿ ಮತ್ತು ಪ್ರಜಾಪ್ರಭುತ್ವವಾದಿ ದೃಷ್ಟಿಕೋನ ಮತ್ತು ವಿಧಾನಗಳನ್ನು ರೂಪಿಸಲು ಪ್ರಯತ್ನಿಸಲಾಯಿತು. ಸರ್ವಾಧಿಕಾರಿಯಾಗಿದ್ದ 124ನೇಯ ಮಿಕಾಡೋ ವ್ಯವಸ್ಥೆಯನ್ನು ಸಂವಿಧಾನಾತ್ಮಕವಾಗಿ ರದ್ದುಪಡಿಸಲಾಯಿತು. ಈ ಕ್ರಮವನ್ನು ಮೇ 3, 1947ರಂದು ಜನರು ಸರ್ವಾನುಮತದಿಂದ ಅನುಮೋದಿಸಿದರು.

ರಾಜಕೀಯ ಖೈದಿಗಳನ್ನು ಬಿಡುಗಡೆಗೊಳಿಸುವ ಕ್ರಮಗಳನ್ನು ಕೈಗೊಳ್ಳಲಾಯಿತು. ಜಪಾನಿನ ನಾಗರಿಕರಿಗೆ ಮಾತನಾಡುವ ಹಕ್ಕುಗಳನ್ನು ನೀಡಲಾಯಿತು. ಸುದ್ದಿ ಮಾಧ್ಯಮಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಯಿತು. ಉಗ್ರ ರಾಷ್ಟ್ರೀಯವಾದಿ, ಅರೆ ಮಿಲಿಟರಿವಾದಿ, ವಿದೇಶಿಯರ ವಿರೋಧಿ ಮತ್ತು ಉಗ್ರವಾದಿ ಸಂಘಟನೆಗಳನ್ನೆಲ್ಲ ಹತ್ತಿಕ್ಕಲಾಯಿತು. ಕೆಲವು ಆಯ್ದ ವ್ಯಕ್ತಿಗಳಿಗೆ ಸಾರ್ವಜನಿಕ ಚಟುವಟಿಗಳಲ್ಲಿ ಭಾಗವಹಿಸದಂತೆ ಬಹಿಷ್ಕರಿಸಲಾಯಿತು. ಸುಮಾರು 1,86,000 ಜನರನ್ನು ಅಪರಾಧ ಮುಕ್ತರನ್ನಾಗಿ ಮಾಡಲಾಯಿತು. ಮಹಿಳೆಯರಿಗೆ ಮತದಾನದ ಹಕ್ಕು ನೀಡಲಾಯಿತು. ಮತದಾನದ ವಯಸ್ಸನ್ನು 25ರಿಂದ 20ವರ್ಷಗಳಿಗೆ ಇಳಿಸಲಾಯಿತು. ಜಪಾನಿನ ಸಂಸತ್ತು ಡಯಟ್‌ಗೆ ಏಪ್ರಿಲ್ 10, 1946 ರಂದು ಚುನಾವಣೆ ನಡೆಸಲಾಯಿತು. ಚುನಾಯಿತ ಸಂಸ್ಥೆಗಳು ಅಧಿಕಾರಕ್ಕೆ ಬಂದವು. ಸ್ಥಳೀಯ ಸರ್ಕಾರಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಲಾಯಿತು.

ಚಕ್ರವರ್ತಿಯ ಸರ್ಕಾರದ ಪ್ರತೀಕವೆಂದು ಘೋಷಿಸಲಾಯಿತು. ಅವನು ಜನರ ಏಕತೆಯ ಪ್ರತೀಕವಾಗಿದ್ದನು. ಸಾರ್ವಭೌಮ ಅಧಿಕಾರಗಳನ್ನು ಹೊಂದಿದ್ದ ಜನರ ಒಪ್ಪಿಗೆಯ ಮೇಲೆ ಚಕ್ರವರ್ತಿಗೆ ಅಧಿಕಾರ ಪ್ರಾಪ್ತವಾಗುತ್ತಿತ್ತು. ಜಪಾನಿನ ಸಂಸತ್ತು ಡಯಟ್ ಅಲ್ಲಿನ ಸರ್ಕಾರದ ಸರ್ವೋಚ್ಚ ಸಂಸ್ಥೆಯಾಗಿತ್ತು ಮತ್ತು ಅದು ಸರ್ವೋಚ್ಚ ನೀತಿ ನಿರ್ಣಯ ರೂಪಿಸುವ ಅಧಿಕಾರ ಹೊಂದಿತ್ತು. ಡಯಟ್ ಎರಡು ಸಂಸ್ಥೆಗಳು ಒಂದು ಘಟಕವಾಗಿತ್ತು. ಮೊದಲನೆಯದು ಜನ ಪ್ರತಿನಿಧಿಗಳ ಘಟಕ ಮತ್ತು ಎರಡನೆಯ ಹಿರಿಯರ ಘಟಕ. ಇವೆರಡೂ ಚುನಾಯಿತ ಘಟಕಗಳಾಗಿವೆ. ಇವೆರಡರಲ್ಲಿ ಜನ ಪ್ರತಿನಿಧಿಗಳ ಘಟಕವೇ ಸರ್ವೋಚ್ಚವಾದುದು. ಸಚಿವ ಸಂಪುಟವು ಡಯಟ್‌ಗೆ ಉತ್ತರಧಾಯಿತ್ವವಾಗಿತ್ತು. ಸಚಿವ ಸಂಪುಟದ ನಾಯಕನನ್ನು ಮತ್ತು ಅದರ ಸದಸ್ಯರನ್ನು ಡಯಟ್‌ನ ಸದಸ್ಯರಿಂದ ಚುನಾಯಿಸಲಾಗುತ್ತಿತ್ತು. ಪುನಾರಚಿತಗೊಂಡ ನ್ಯಾಯಾಂಗ ವ್ಯವಸ್ಥೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಅತ್ಯುನ್ನತ ನ್ಯಾಯಾಸ್ಥಾವಾಗಿತ್ತು. ಸರ್ಕಾರದ ಕಾನೂನು, ಆದೇಶ ಮತ್ತು ಕ್ರಮಗಳ ಸಂವಿಧಾನಾತ್ಮಕ ಸ್ವರೂಪವನ್ನು ನಿರ್ಧರಿಸುವ ಅಧಿಕಾರವನ್ನು ಮುಖ್ಯ ನ್ಯಾಯಾಧೀಶ ಹಾಗೂ ಸದಸ್ಯ ಮಹಾನ್ಯಾಯಾಧೀಶರುಗಳಿಂದ ಕೂಡಿದ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಲಾಗಿತ್ತು. ನ್ಯಾಯಾಲಯಗಳ ಆಡಳಿತ ಹಾಗೂ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವ ಅಧಿಕಾರ ಸರ್ವೋಚ್ಚ ನ್ಯಾಯಾಲಯಕ್ಕಿತ್ತು. ಸಂವಿಧಾನದ ತಿದ್ದುಪಡಿಗೆ ಸಂಸತ್ತಿನ ಎರಡನೆ ಮೂರು ಪಾಲು ಸದಸ್ಯರ ಅನುಮತಿ ಹಾಗೂ ಅದಕ್ಕೆ ಜನಮತ ಬೆಂಬಲ ಅಗತ್ಯವಾಗಿತ್ತು.

ಸ್ವಾಧೀನ ಆಡಳಿತ ಅಸ್ತಿತ್ವಕ್ಕೆ ಬಂದ ಮೇಲೆ ನಡೆದ ಮೊದಲನೆಯ ರಾಷ್ಟ್ರೀಯ ಚುನಾವಣೆಯಲ್ಲಿ 60 ಲಕ್ಷ ಜಪಾನಿಯರು ತಮ್ಮ ಮತ ಚಲಾಯಿಸಿದರು ಮತ್ತು ಡಯಟ್‌ನ ಪ್ರತಿನಿಧಿಗಳನ್ನು ಆಯ್ಕೆ ಮಾಡಿದರು. ಹೀಗೆ ಆಯ್ಕೆಗೊಂಡ ಸದಸ್ಯರಲ್ಲಿ ಬಹುಪಾಲು ಸಂಪ್ರದಾಯವಾದಿಗಳು ಇಲ್ಲವೆ ಮಂದಗಾಮಿ ಮನೋಭಾವದವರಾಗಿದ್ದರು. ಯುದ್ಧಕ್ಕೆ ಪೂರ್ವದ ರಾಜಕೀಯ ಪಕ್ಷಗಳೆಲ್ಲ ತಮ್ಮ ಅಸ್ತಿತ್ವ ಕಳೆದುಕೊಂಡಿದ್ದವು.

## 160.5 ಸ್ವಾಧೀನ ಆಡಳಿತದಲ್ಲಿ ಸುಧಾರಣೆಗಳು

### *160.5.1 ಆರ್ಥಿಕ ಸುಧಾರಣೆಗಳು*

ಎರಡನೆಯ ಮಹಾಯುದ್ಧದ ನಂತರ ಜಪಾನು ಆರ್ಥಿಕ ಕುಸಿತದ ಅಂಚಿಗೆ ದೂರಲ್ಪಟ್ಟಿತ್ತು. ಈ ಹಂತದಲ್ಲಿ ಜಪಾನನ್ನು ಅಭಿವೃದ್ಧಿ ಪಥಕ್ಕೆ ಒಯ್ಯುವ ಜವಾಬ್ದಾರಿ ಹೊತ್ತು ಅಮೇರಿಕೆಯು ಪ್ರವೇಶ ಮಾಡಿತು. ದಿನವಹಿ ಅದು ಒಂದು ದಶಲಕ್ಷ ಡಾಲರ್‌ನಷ್ಟು ಬಂಡವಾಳವನ್ನು ಅಲ್ಲಿ ಸುರಿಯತೊಡಗಿತು. ಈ ಕ್ರಮಗಳ ಹಿನ್ನೆಲೆಯಲ್ಲಿ ಕೆಲವು ಆರ್ಥಿಕ ಸುಧಾರಣೆಗಳನ್ನು ಜಾರಿಗೊಳಿಸಲಾಯಿತು. ಪ್ರಾಚೀನ ಕುಟುಂಬಗಳಾದ ಮಿಟ್ಸು, ಮಿಟ್ಸುಬಿಶಿ, ಸುಮಿಟೊಮೊ ಮತ್ತು ಯಶೋಡಗಳು ಅರ್ಥಿಕ ಕ್ಷೇತ್ರದಲ್ಲಿ ಸಮಾನ ಹಕ್ಕುಗಳನ್ನು ಅನುಭವಿಸುತ್ತಿದ್ದವು. ಆರ್ಥಿಕ ಕ್ಷೇತ್ರದ ಮೇಲಿನ ಅವುಗಳ ಹಿಡಿತದ ಮೇಲೆ ಕತ್ತರಿ ಹಾಕಲಾಯಿತು. ಭೂ ಕಾಯಿದೆಯನ್ನು 1946ರಲ್ಲಿ ಜಾರಿಗೊಳಿಸಲಾಯಿತು. ಅದರ ಪ್ರಕಾರ ಭೂಮಾಲಿಕತ್ವದ ಮೇಲೆ ಮಿತಿ ಹೇರಲಾಯಿತು. ಒಂಬತ್ತು ಎಕರೆಗಿಂತ ಅಧಿಕ ಭೂಮಿಯನ್ನು ಹೊಂದಲು ಯಾರಿಗೂ ಅಧಿಕಾರವಿರಲಿಲ್ಲ. ಒಂಭತ್ತು ಎಕರೆಗಿಂತ ಅಧಿಕ ಭೂಮಿಯನ್ನು ಹೊಂದಿದ್ದವರು ಅಧಿಕ ಭೂಮಿಯನ್ನು ಭೂ ನ್ಯಾಯಮಂಡಳಿಗೆ ಒಪ್ಪಿಸಬೇಕಾಗಿತ್ತು. ಭೂನ್ಯಾಯ ಮಂಡಳಿಯಲ್ಲಿ ಚುನಾಯಿತ ಸದಸ್ಯರಿದ್ದರು. ಅದು ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ಹಂಚಿತು. ಕಂತುಗಳಲ್ಲಿ ಅವರು ಭೂಮಿಯ ಮೌಲ್ಯವನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿತ್ತು. ಇದರಿಂದಾಗಿ ಅನೇಕರು ಭೂಮಾಲಿಕರಾದರು. ಈ ಕ್ರಮದಿಂದಾಗಿ ಗೇಣಿಗಾರರ ಪ್ರಮಾಣವು ಶೇ 46ರಿಂದ ಶೇ 12ಕ್ಕೆ ಇಳಿಯಿತು. ಭೂಮಿಯ ಇಳುವರಿ ಅಧಿಕಗೊಂಡಿತು.

ಅಮೇರಿಕೆಯ ಸ್ವಾಧೀನ ಆಡಳಿತದ ಯೋಜನಾ ತಜ್ಞರು ದುಡಿಮೆಯ ಕ್ಷೇತ್ರದ ಬೆನ್ನೆಲುಬಾಗಿದ್ದ ಕಾರ್ಮಿಕರ ಹಿತ ಕಾಪಾಡುವ ದೃಷ್ಟಿಯಿಂದ ಕಾರ್ಮಿಕ ಸಂಘಗಳ ಅಗತ್ಯವನ್ನು ಮನಗಂಡರು ಅದೇ ರೀತಿ ಡಿಸೆಂಬರ್ 1945ರಲ್ಲಿ ಕಾರ್ಮಿಕ ಸಂಘಗಳ ಕಾನೂನನ್ನು ಜಾರಿಗೊಳಿಸಲಾಯಿತು. ಕೂಲಿ-ಸಂಬಳ ನಿರ್ಧಾರವನ್ನು ಸಂಧಾನದ ಮೂಲಕ ನಡೆಸುವ ಕ್ರಮ ಅಸ್ತಿತ್ವಕ್ಕೆ ಬಂದಿತು. ಕಾರ್ಮಿಕರಿಗೆ ಮುಷ್ಕರ ನಡೆಸುವ ಹಕ್ಕನ್ನು ನೀಡಲಾಯಿತು. ಕಾರ್ಮಿಕ ಸಂಘಗಳ ಸಂಖ್ಯೆ ಅಪಾರವಾಗಿ ಬೆಳೆಯಿತು. ಸಂಘಗಳ ಸದಸ್ಯರ ಸಂಖ್ಯೆಯ ಅನೇಕ ಪಟ್ಟು ಅಧಿಕಗೊಂಡಿತು. ಕೆಲವು ಕಾರ್ಮಿಕ ಸಂಘಗಳ ಚಟುವಟಿಕೆಗಳು ಅತ್ಯಂತ ಉಗ್ರಸ್ವರೂಪ ತಳೆದವು. ಆದರೆ ಸರ್ಕಾರಿ ನೌಕರರು ಮುಷ್ಕರ ಹೂಡದಂತೆ ಸ್ವಾಧೀನ ಸರ್ಕಾರವು ನಿಷೇಧ ವಿಧಿಸಿತು.

### *160.5.2 ಶೈಕಣಿಕ ಸುಧಾರಣೆಗಳು*

ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಾಗಿ ಸುಧಾರಣೆಗಳನ್ನು ಜಾರಿಗೊಳಿಸಲಾಯಿತು. ಶಿಕ್ಷಣವನ್ನು ವಿಕೇಂದ್ರೀಕರಿಸಲಾಯಿತು. ಅದರ ಗುರಿ ಅಭಿವೃದ್ಧಿಯೇ ವಿನಾ ಸರ್ಕಾರದ ಆರಾಧನೆ ಅಥವಾ ಸರ್ಕಾರವನ್ನು ಬಲಪಡಿಸುವುದಾಗಿರಲಿಲ್ಲ. ಹಳೆಯ ರಾಷ್ಟ್ರೀಯತೆಯ ಉದ್ದೇಶವನ್ನು ಬದಲಾಯಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಹೊಸ ವಿಷಯಗಳನ್ನು ಮತ್ತು ಹೊಸ ಪಠ್ಯಕ್ರಮಗಳನ್ನು ಜಾರಿಗೊಳಿಸಲಾಯಿತು. ಹೊಸ ಉದ್ದೇಶವನ್ನು ಸಾಧಿಸಿಕೊಳ್ಳುವುದಕೊಸ್ಕರ ಉಪಾಧ್ಯಾಯರುಗಳಿಗೆ ತರಬೇತಿ ನೀಡಲಾಯಿತು. ಈ ಸುಧಾರಣಾ ಕಾರ್ಯಕ್ರಮದಲ್ಲಿ ಕಡ್ಡಾಯ ಶಿಕ್ಷಣವನ್ನು ಆರು ವರ್ಷಗಳಿಂದ ಒಂಬತ್ತು ವರ್ಷಗಳಿಗೆ ವಿಸ್ತರಿಸಲಾಯಿತು. ಶಿಕ್ಷಣ ಕ್ಷೇತ್ರದ ನಿರ್ವಹಣೆಯ ಜವಾಬ್ದಾರಿಯನ್ನು ಚುನಾಯಿತ ಸ್ಥಳೀಯ ಶಾಲಾ ಮಂಡಳಿಗಳಿಗೆ ವಹಿಸಿಕೊಡಲಾಯಿತು.

ಉಗ್ರರಾಷ್ಟ್ರೀಯವಾದಿ ಹಿನ್ನೆಲೆಯಲ್ಲಿ ಬರೆದ ಪಠ್ಯಪುಸ್ತಕಗಳನ್ನು ರದ್ದುಪಡಿಸಿ ಹೊಸ ಪಠ್ಯಗಳನ್ನು ಸಿದ್ಧಪಡಿಸಲಾಯಿತು. ಡಿಸೆಂಬರ್ 15, 1945ರಲ್ಲಿ ಒಂದು ವಿಶೇಷ ಆದೇಶವನ್ನು ಹೊರಡಿಸಿ ಶಿಂಟೊ ದೇವಾಲಯಗಳಿಗೆ ನೀಡಲಾಗುತ್ತಿದ್ದ ಸರ್ಕಾರದ ನೆರವನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು ಮತ್ತು ಶಾಲೆಗಳಲ್ಲಿ ಶಿಂಟೋ ಧರ್ಮದ ಭೋಧನೆಯನ್ನು ನಿಷೇಧಿಸಲಾಯಿತು. ವಿಶ್ವದಲ್ಲಿ ಜಪಾನಿಯರು ಮಾತ್ರ ಶ್ರೇಷ್ಠರು ಎಂಬ ವಿಚಾರದ ಪ್ರಚಾರವನ್ನು ಕಟ್ಟುನಿಟ್ಟಾಗಿ ರದ್ದುಪಡಿಸಲಾಯಿತು ಮತ್ತು ಅದಕ್ಕೆ ಪ್ರೋತ್ಸಾಹ ದೊರೆಯದಂತೆ ನೋಡಿಕೊಳ್ಳಲಾಯಿತು.

### 160.5.3 ಪೋಲಿಸು ಸುಧಾರಣೆಗಳು

ಕೇಂದ್ರೀಕೃತ ಪೋಲಿಸು ಪಡೆಯನ್ನು ವಿಸರ್ಜಿಸಲಾಯಿತು. ಸ್ಥಳೀಯ ಶಾಸನ ಸಭೆಗಳಿಗೆ ಉತ್ತರಧಾಯಿತ್ವವಿರುವ ಸ್ವತಂತ್ರ ಘಟಕಗಳನ್ನು ಸ್ಥಾಪಿಸಲಾಯಿತು. ಅಮೆರಿಕೆಯನ್ನು ಮಾದರಿಯಾಗಿಟ್ಟುಕೊಂಡು ಸುಧಾರಣೆ ತರಲಾಯಿತು. ಪೋಲಿಸು ಮುಖ್ಯಸ್ಥರ ನೇಮಕ ಮತ್ತು ಪೋಲಿಸು ವ್ಯವಸ್ಥೆಯ ನಿರ್ವಹಣೆ ಜವಾಬ್ದಾರಿಯನ್ನು ಸಾರ್ವಜನಿಕ ಭದ್ರತಾ ಆಯೋಗಕ್ಕೆ ವಹಿಸಿಕೊಡಲಾಯಿತು.

### 160.5.4 ಸ್ವಾಧೀನ ಕಾಲದಲ್ಲಿ ರಾಜಕಾರಣ

ಸ್ವಾಧೀನ ಆಡಳಿತದಿಂದಾಗಿ ಜಪಾನಿನ ರಾಜಕೀಯ ಸ್ಥಿತಿಗತಿಯಲ್ಲಿ ತೀವ್ರ ಬದಲಾವಣೆಗಳಾದವು. ಪ್ರತಿಯೊಬ್ಬ ನಾಗರಿಕನಿಗೂ ಹಕ್ಕುಗಳನ್ನು ನೀಡುವ ಹಕ್ಕುಗಳ ಮಸೂದೆ, ರಾಜಕೀಯ ಖೈದಿಗಳ ಬಿಡುಗಡೆ, ಪೋಲಿಸು ವ್ಯವಸ್ಥೆಯ ವಿಕೇಂದ್ರೀಕರಣ ಮುಂತಾದವುಗಳು ರಾಜಕೀಯ ಪಕ್ಷಗಳಲ್ಲಿ ಅನೇಕ ಬದಲಾವಣೆ ಉಂಟು ಮಾಡಿದವು. ಕಮ್ಯುನಿಷ್ಟರನ್ನು ಹೊರತು ಪಡಿಸಿ ವಾಮಾವಾದಿಗಳೆಲ್ಲ ಸಾಮಾಜಿಕ ಪ್ರಜಾಪ್ರಭುತ್ವ ಪಕ್ಷವನ್ನು ಕಟ್ಟಿದರು. ಸಂಪ್ರದಾಯವಾದಿಗಳು ಉದಾರವಾದಿ-ಪ್ರಗತಿಪರ ಪಕ್ಷಗಳನ್ನು ಸಂಘಟಿಸಿದರು. ಮಿತ್ರಪಕ್ಷಗಳ ಆಡಳಿತವು ಏಪ್ರಿಲ್ 1946ರಲ್ಲಿ ಚುನಾವಣೆ ನಡೆಸಲು ನಿರ್ದೇಶನ ನೀಡಿತು. ಈ ಚುನಾವಣೆಯಲ್ಲಿ ಉದಾರವಾದಿಗಳು ಅಧಿಕಾರಕ್ಕೆ ಬಂದರು. ಅದರ ನಾಯಕನಾಗಿದ್ದ ಯೋಶಿದಾಶಿಗೇರುವಿಗೆ ಮಿತ್ರ ಪಕ್ಷಗಳ ಆಡಳಿತವು ಏಪ್ರಿಲ್ 1946ರಲ್ಲಿ ಚುನಾವಣೆ ನಡೆಸಲು ನಿರ್ದೇಶನ ನೀಡಿತು. ಈ ಚುನಾವಣೆಯಲ್ಲಿ ಉದಾರವಾದಿಗಳು ಆಧಿಕಾರಕ್ಕೆ ಬಂದರು. ಅದರ ನಾಯಕನಾಗಿದ್ದ ಯೋಶಿದಾಶಿಗೇರುವಿಗೆ ಮಿತ್ರಪಕ್ಷಗಳ ಮಹಾದಂಡಾಧಿಕಾರಿಯ ಪೂರ್ಣ ಬೆಂಬಲವಿತ್ತು. ಅವನು ಪ್ರಧಾನ ಮಂತ್ರಿಯಾದನು. ಆದರೆ ಅವನು ಮುಂದೆ ಜನಪ್ರಿಯತೆಯನ್ನು ಕಳೆದುಕೊಂಡನು. ಸಾಮಾಜಿಕ ಪ್ರಜಾಪ್ರಭುತ್ವದ ಅನೇಕ ಸದಸ್ಯರ ಪ್ರಧಾನ ಮಂತ್ರಿಗೆ ನೀಡಿದ್ದ ಬೆಂಬಲವನ್ನು ವಾಪಸ್ಸು ತೆಗೆದುಕೊಂಡರು. ಹೀಗೆ ಬೆಂಬಲ ವಾಪಸ್ಸು ತೆಗೆದುಕೊಂಡರು. ಹೀಗೆ ಬೆಂಬಲ ವಾಪಸ್ಸು ತೆಗೆದುಕೊಂಡ ಸದಸ್ಯರು ಪ್ರಗತಿಪರ ಪಕ್ಷಕ್ಕೆ ಬೆಂಬಲ ನೀಡತೊಡಗಿದರು. ಆರ್ಥಿಕ ಸಂಕಷ್ಟದಿಂದಾಗಿ ಫೆಬ್ರವರಿ 1947ರಲ್ಲಿ ಸಾರ್ವಜನಿಕ ಮುಷ್ಕರವನ್ನು ಘೋಷಿಸಲಾಯಿತು. ಸ್ವಾಧೀನ ಆಡಳಿತವು 1947ರಲ್ಲಿ ಹೊಸ ಚುನಾವಣೆಗೆ ಆದೇಶ ನೀಡಿತು. ಹೊಸ ಚುನಾವಣೆ ಮೂಲಕ ಆರ್ಥಿಕ ಬಿಕ್ಕಟ್ಟನ್ನು ನಿಯಂತ್ರಿಸುವುದು ಸ್ವಾಧೀನ ಆಳ್ವಿಕೆಯ ಉದ್ದೇಶವಾಗಿತ್ತು. ಸಮಾಜವಾದಿ ನಾಯಕ ಕಟಯಾವು ಟೆಟ್ಸುರವರು ಮೇ 24, 1947ರಂದು ಡೆಮೊಕ್ರಾಟ್ಸ್ ಮತ್ತು ಕೊ -ಆಪರೇಟಿವ್‌ಗಳ ಬೆಂಬಲದೊಂದಿಗೆ ಸಮ್ಮಿಶ್ರ ಸರ್ಕಾರ ರಚಿಸಿದರು. ಹೊಸ ಸರ್ಕಾರವು ಫೆಬ್ರವರಿ 1948ರವರೆಗೆ ನಡೆಯಿತು. ಈ ಕಾಲಾವಧಿಯಲ್ಲಿ ಸೊಶಿಯಲ್ ಡೆಮೊಕ್ರಾಟ್ಸ್ ಪಕ್ಷದಲ್ಲಿದ್ದ ವಾಮವಾದಿಗಳು ಮತ್ತು ಬಲಪಂಥೀಯರ ನಡುವೆ ತೀವ್ರ ಭಿನ್ನಾಭಿಪ್ರಾಯಗಳುಂಟಾದವು. ಕಟಿಯಾಮ ತನ್ನ ರಾಜೀನಾಮೆ ನೀಡಿದನು. ಅವನ ನಂತರ ಅಶಿಡ ಹಿಟೋಶಿ ಅಧಿಕಾರಕ್ಕೆ ಬಂದನು. ಅವನು ಡೆಮೊಕ್ರಾಟಿಕ್ಸ್ ಪಕ್ಷದ ಅಧ್ಯಕ್ಷನಾಗಿದ್ದನು. ಇವನ ಮಂತ್ರಿ ಮಂಡಲವೂ ತುಂಬಾ ದಿನ ನಡೆಯಲ್ಲಿಲ್ಲ. ಇವನ ಸಚಿವ ಸಂಪುಟವು ಭ್ರಷ್ಟಾಚಾರ ಆರೋಪಕ್ಕೆ ಒಳಗಾಗಿ ರಾಜೀನಾಮೆ ನೀಡಬೇಕಾಯಿತು. ಅಶಿಡೆಗೆ ಮತ್ತೊಮ್ಮೆ ಸರ್ಕಾರ ರಚಿಸಲು ಪ್ರಯತ್ನಿಸುವಂತೆ ಕೇಳಿಕೊಳ್ಳಲಾಯಿತು. ಜನವರಿ 1949ರಲ್ಲಿ ಸಾರ್ವತ್ರಿಕ ಚುನಾವಣೆ ನಡೆದವು. ಲಿಬರಲ್ ಪಕ್ಷವು ಸುಲಭವಾಗಿ ಬಹುಮತಗಳಿಸಿಕೊಂಡಿತು. ಇದರಿಂದಾಗಿ ಅಶಿಡ ಆರು ವರ್ಷಗಳ ಕಾಲ, ಅಂದರೆ 1948ರಿಂದ 1954ರವರೆಗೆ ಪ್ರಧಾನ ಮಂತ್ರಿಯಾಗಿ ಮುಂದುವರಿದನು. ಅತ್ಯಂತ ಯಶಸ್ವಿಯಾಗಿ ಸರ್ಕಾರ ನಡೆಸಿದನು.

## 160.6 ಜಾಯಿ ಬಟ್ಸುಗಳ ವಿಸರ್ಜನೆ

ಜಾಯಿಬಟ್ಸುಗಳ ವಿಸರ್ಜನೆಯು ಒಂದು ವ್ಯವಸ್ಥಿತವಾಗಿ ಜಾರಿಗೊಳಿಸಿದ ಕ್ರಮವಾಗಿತ್ತು ಮತ್ತು ಅದೊಂದು ಕಾಯ್ದೆ ಸುಧಾರಣೆಯಾಗಿತ್ತು. ಜಾಯಿಬಟ್ಸುಗಳಲ್ಲಿ ನಾಲ್ಕು ಪ್ರಮುಖ ಕುಟುಂಬಗಳಿದ್ದವು. ಅವು ಹೀಗಿವೆ. ಮಿಟ್ಸುಯಿ, ಮಿಟ್ಸುಬಿಶಿ, ಯಸುಡ ಮತ್ತು ಸುಮಿಟೋಮೋ. ಈ ಕುಟುಂಬವಾದಿ ವ್ಯಾಪಾರಿ ಸಂಸ್ಥೆಗಳು ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್ ಮತ್ತು ವಿಮಾ ಉದ್ದಿಮೆಗಳನ್ನು ನಡೆಸುತ್ತಿದ್ದವು. ಇವುಗಳೆಲ್ಲವೂ ಪರಸ್ಪರ ಸಹಕಾರದೊಂದಿಗೆ ಮತ್ತು ಅಂತರಿಕವಾಗಿ ವ್ಯಾಪಾರ-ವ್ಯವಹಾರ ನಡೆಸುತ್ತಿದ್ದವು. ತಮ್ಮ ಖರೀದಿ ಮತ್ತು ಮಾರಾಟ ಮಾಡುವ, ತಮ್ಮ ತಮ್ಮ ವ್ಯವಹಾರಕ್ಕೆ ವಿಮೆ ಸೌಲಭ್ಯ, ಸಾಲ ಸೌಲಭ್ಯ ಒದಗಿಸುವ ಕೆಲಸ ಮಾಡುತ್ತಿದ್ದವು. ಅಗಾಧ ಪ್ರಮಾಣದ ಸಂಪತ್ತನ್ನು ಅವು ಶೇಖರಿಸಿದ್ದವು. ಇದರಿಂದಾಗಿ ಅವುಗಳಿಗೆ ಅಪಾರ ಆರ್ಥಿಕ ಮತ್ತು ರಾಜಕೀಯ ಶಕ್ತಿ ಪ್ರಾಪ್ತವಾಗಿತ್ತು. ಅವು ಯುದ್ಧ ಕಾಲದ ಆರ್ಥಿಕ ವ್ಯವಹಾರದಲ್ಲಿ ಪೂರ್ಣವಾಗಿ ತೊಡಗಿಕೊಂಡಿದ್ದವು.

ಮಿತ್ರ ಪಕ್ಷಗಳ ಪಡೆಗಳ ಮಹಾದಂಡಾಧಿಕಾರಿಯು ಜಾಯಿಬಿಟ್ಸು ಕುಟುಂಬಗಳ ಮಾಲಿಕತ್ವ ನಿಯಂತ್ರಣವನ್ನು ರದ್ದು ಪಡಿಸಿದನು. ಈ ಕುಟುಂಬಗಳ ಸಿಂಡಿಕೇಟ್‌ವಾದಿ ನಿಯಂತ್ರಣವನ್ನು ವಿಸರ್ಜಿಸಲಾಯಿತು. ಇವುಗಳ ನಿಯಂತ್ರಣದಲ್ಲಿದ್ದ ಕಂಪನಿಗಳನ್ನು ಮುಚ್ಚಲಾಯಿತು. ಜಾಯಿ ಬಟ್ಸು ಕುಟುಂಬಗಳ ವಶದಲ್ಲಿದ್ದ ಶೇರು ಬಂಡವಾಳವನ್ನು ಸರ್ಕಾರವು ತನ್ನ ವಶಪಡಿಸಿಕೊಂಡಿತು. ಹೀಗೆ ವಶಪಡಿಸಿಕೊಂಡ ಶೇರು ಬಂಡವಾಳವನ್ನು ಕಂಪನಿಗಳ ಕಾರ್ಮಿಕರಿಗೆ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಮಾರಾಟ ಮಾಡಲಾಯಿತು. ಇವುಗಳಿಗೆ ಪರಿಹಾರವಾಗಿ ಜಾಯಿಬಿಟ್ಸು ಕುಟುಂಬಗಳಿಗೆ ಬಡ್ಡಿರಹಿತ ಬಾಂಡುಗಳನ್ನು ನೀಡಲಾಯಿತು. ಈ ಬಾಂಡುಗಳನ್ನು ಹತ್ತು ವರ್ಷಗಳ ಕಾಲ ಮಾರುವಂತಿರಲಿಲ್ಲ. ಅಥವಾ ವರ್ಗಾಯಿಸುವಂತಿರಲಿಲ್ಲ ಈ ಕುಟುಂಬಗಳ ಮಾಲೀಕತ್ವದಲ್ಲಿದ್ದ ಕಂಪನಿಗಳಲ್ಲಿ ಜಾಯಿಬಟ್ಸು ಕುಟುಂಬಗಳ ಸದಸ್ಯರು ನೌಕರರಾಗಿ ಸೇರುವಂತಿರಲಿಲ್ಲ. ಈ ಕ್ರಮಗಳನ್ನು ಎಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಯಿತೆಂದರೆ, ಜಾಯಿಬಟ್ಸುಗಳು ಜನರ ಗಮನದಿಂದ ಮರೆಯಾಗಿಬಿಟ್ಟವು. ಅವುಗಳ ಸಾಮಾಜಿಕ ಸ್ಥಾನಮಾನ ಅರ್ಥರಹಿತವಾಗಿ ಬಿಟ್ಟಿತು. ಆದರೆ ಮುಂದೆ ಜಪಾನು ವಿಶ್ವದ ಒಂದು ಸರ್ವಶಕ್ತಿ ಆರ್ಥಿಕತೆಯಾಗಿ ಒಡಮೂಡಿದಾಗ ಜಾಯಿಬಟ್ಸು ಕುಟುಂಬಗಳು ಮತ್ತೊಮ್ಮೆ 1952ರ ನಂತರ ರಾಜಕೀಯ, ಸಾಮಾಜಿಕ, ಅರ್ಥಿಕ ಕ್ಷೇತ್ರಗಳಲ್ಲಿ ಸರ್ವೂಚ್ಛ ಶಕ್ತಿಗಳಾಗಿ ಸ್ಥಾನ ಪಡೆದುಕೊಂಡವು.

## 160.6 ಸ್ಯಾನ್ ಫ್ರಾನ್ಸಿಸ್ಕೊನ ಶಾಂತಿ ಒಪ್ಪಂದ

ಜಪಾನಿನ ಪುನರ್ ನಿರ್ಮಾಣದ ಹೊಣೆ ಹೊತ್ತ ಮಿತ್ರ ಪಕ್ಷಗಳ ಮಹಾದಂಡಾಧಿಕಾರಿ ಹಾಗೂ ಅಮೆರಿಕೆಯ ಉದ್ದೇಶವು ಜಾಗತಿಕ ಪರಿಸ್ಥಿತಿಯನ್ನು ಅವಲಂಬಿಸಿತ್ತು. ಈ ಜಾಗತಿಕ ಸನ್ನಿವೇಶ ಬದಲಾಗ ತೊಡಗಿತು. ಶೀತಲ ಸಮರವು 1948ರ ನಂತರ ವಿಶ್ವವನ್ನು ಎರಡು ಬಣಗಳಾಗಿ ವಿಭಜಿಸಿ ಬಿಟ್ಟಿತು. ಜಪಾನು ಇಡೀ ಏಷ್ಯಾ ಖಂಡದಲ್ಲಿ ಒಂದು ಪ್ರಬಲಶಕ್ತಿಯಾಗಿ, ಸದೃಢ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಮತ್ತು ಸುಭದ್ರ ಆರ್ಥಿಕತೆಯಾಗಿ ಹಾಗೂ ಪಾಶ್ಚಿಮಾತ್ಯ ದೇಶಗಳ ಸಹವರ್ತಿಯಾಗಿ ರೂಪುಗೊಂಡು ಬಿಟ್ಟಿತು. ಈ ಸನ್ನಿವೇಶದಿಂದಾಗಿ ಜಪಾನನ್ನು ಶಿಕ್ಷಿಸಬೇಕೆಂಬ ಅಮೆರಿಕೆಯ ಧೋರಣೆಯು ಬದಲಾಯಿತು. ಅದನ್ನು ಅತ್ಯಂತ ದುರ್ಬಲ ಸ್ಥಿತಿಯಲ್ಲಿಟ್ಟಿರಬೇಕೆಂಬ ಗುರಿ ಬದಲಾಯಿತು. ಇಲ್ಲಿ ಮುಖ್ಯವಾಗಿಬಿಟ್ಟಿತು. ಮಿತ್ರಪಕ್ಷಗಳ ಮಹಾದಂಡಾಧಿಕಾರಿ ಆಡಳಿತವು ಸ್ವಾಧೀನವನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿತು.

ಕಮ್ಯುನಿಷ್ಟ ಪರವಾಗಿದ್ದ ಉತ್ತರಕೊರಿಯಾ ಮತ್ತು ಅಮೆರಿಕೆಯ ಪರವಾಗಿ ದಕ್ಷಿಣ ಕೊರಿಯಗಳ ನಡುವೆ 1950ರಲ್ಲಿ ಯುದ್ಧ ಪ್ರಾರಂಭವಾದಾಗ ಜಪಾನಿನ ಬಗೆಗಿದ್ದ ಅಮೆರಿಕೆಯ ಧೋರಣೆ ತೀವ್ರ ಬದಲಾಯಿತು. ಕಮ್ಯುನಿಸಮ್‌ನ ಪ್ರಸಾರ ಹಾಗೂ ಪ್ರಚಾರದಿಂದ ಆತಂಕಗೊಂಡ ಅಮೆರಿಕೆಯು ಪೂರ್ವ ಏಷ್ಯಾದಲ್ಲಿ ಕಮ್ಯುನಿಸಮ್‌ನ ಪ್ರಭಾವವನ್ನು ತಡೆಯಲು ಸಶಕ್ತವಾದ ರಾಷ್ಟ್ರವೆಂದರೆ ಜಪಾನು ಎಂದು ತೀರ್ಮಾನಿಸಿತು. ಜಪಾನನ್ನು ತನ್ನ ಶತ್ರುವೆಂದು ಪರಿಗಣಿಸುವ ಅಮೆರಿಕೆಯ ಮನೋಭಾವ ಬದಲಾಯಿತು. ಜಪಾನನ್ನು ತನ್ನ

ಮಿತ್ರನನ್ನಾಗಿ ಪರಿಭಾವಿಸತೊಡಗಿತು. ಪೂರ್ವ ಏಷ್ಯಾದಲ್ಲಿ ಕಮ್ಯುನಿಸಮ್‌ನ್ನು ಹತ್ತಿಕ್ಕಲು ಜಪಾನು ನೆರವಾಗುತ್ತದೆಯೆಂದು ಅಮೆರಿಕಾ ಭಾವಿಸಿತು. ಜಪಾನಿನ ಜೊತೆ ಶಾಂತಿ ಒಪ್ಪಂದ ಮಾಡಿಕೊಂಡು ಸ್ವಾಧೀನ ಆಡಳಿತವನ್ನು ಕೊನೆಗಾಣಿಸಲು ಅಮೆರಿಕಾ ನಿರ್ಧರಿಸಿತು. ಜಪಾನನ್ನು ತನ್ನ ಮಿತ್ರ ದೇಶಗಳ ಪರಿವಾರದ ಸದಸ್ಯ ದೇಶವನ್ನಾಗಿ ಅಮೆರಿಕಾ ಘೋಷಿಸಿತು. ಶಾಂತಿ ಒಪ್ಪಂದಕ್ಕೆ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಸೆಪ್ಟೆಂಬರ್ 8, 1951 ರಲ್ಲಿ ಹಾಕಲಾಯಿತು. ಅದು ಏಪ್ರಿಲ್ 2, 1952ರಲ್ಲಿ ಜಾರಿಗೆ ಬಂದ ಮೇಲೆ ಜಪಾನನ್ನು ಆಳುತ್ತಿದ್ದ ಸ್ವಾಧೀನ ಆಡಳಿತವು ಕೊನೆಗೊಂಡಿತು. ಜಪಾನು ಈಗ ಒಂದು ಸ್ವತಂತ್ರ ರಾಷ್ಟ್ರವಾಯಿತು. ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು ಚೀನಾ ಮತ್ತು ರಷ್ಯಾ ನಿರಾಕರಿಸಿದವು. ಉಳಿದ ಏಷ್ಯಾ ದೇಶಗಳು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದವು. ಆದರೆ ಬರ್ಮಾ, ಇಂಡೋನೇಶಿಯಾ ಮತ್ತು ಫಿಲಿಫೈನ್ಸ್ ದೇಶಗಳು ತಮ್ಮ ಯುದ್ಧ ಪರಿಹಾರದ ಹಕ್ಕುಗಳನ್ನು ಬಿಟ್ಟುಕೊಡಬೇಕೆಂಬ ಒಪ್ಪಂದದ ನಿಬಂಧನೆಯನ್ನು ವಿರೋಧಿಸಿ ಸಹಿ ಹಾಕಲಿಲ್ಲ. ಏಷ್ಯಾದಲ್ಲಿ ಜಪಾನು 1950ರಿಂದ ಅನುಸರಿಸಿಕೊಂಡು ಬಂದ ವಿದೇಶಿ ನೀತಿಯ ಪ್ರಮುಖ ಲಕ್ಷಣವೆಂದರೆ ಯುದ್ಧ ಪರಿಹಾರದ ಹಕ್ಕುಗಳನ್ನು ಬಿಟ್ಟುಕೊಡಬೇಕಂಬ ಒಪ್ಪಂದದ ನಿಬಂಧನೆಯನ್ನು ವಿರೋಧಿಸಿ ಸಹಿ ಹಾಕಲಿಲ್ಲ. ಏಷ್ಯಾದಲ್ಲಿ ಜಪಾನು 1950ರಿಂದ ಅನುಸರಿಸಿಕೊಂಡು ಬಂದ ವಿದೇಶಿ ನೀತಿಯ ಪ್ರಮುಖ ಲಕ್ಷಣವೆಂದರೆ ಯುದ್ಧ ಪರಿಹಾರದ ಬಗ್ಗೆ ಸಂಧಾನ ನಡೆಸುವುದು ಮತ್ತು ಅದನ್ನು ಬಗೆಹರಿಸಿಕೊಂಡು ಒಪ್ಪಂದ ಮಾಡಿಕೊಳ್ಳುವುದು. ಅದರಂತೆ ಅದು ಎಲ್ಲ ದೇಶಗಳೊಂದಿಗೆ ಒಪ್ಪಂದ ಮಾಡಿಕೊಂಡು ಯುದ್ಧ ಪರಿಹಾರದ ವಿವಾದವನ್ನು ಕೊನೆಗೊಳಿಸಿಕೊಂಡಿತು. ಶಾಂತಿ ಒಪ್ಪಂದದ ಪ್ರಕಾರ ಒಕಿನಾವ ಕೈಯಕುದ್ವೀಪ, ಐವೊವ ಹಾಗೂ ಐಸೆನ್‌ಹೊಹರ್‌ನ ಆಡಳಿತ ಕಾಲದಲ್ಲಿ ಜಪಾನಿನ ಉಳಿದ ಸಾರ್ವಭಾಮತ್ವವನ್ನು ಒಪ್ಪಿಕೊಳ್ಳಲಾಯಿತು. ಅಮೆರಿಕಾ ಮತ್ತು ಜಪಾನುಗಳು ಅದೇ ದಿನ ಮತ್ತೊಂದು ಒಪ್ಪಂದಕ್ಕೆ ಸಹಿ ಹಾಕಿದವು. ಅದೊಂದು ಭದ್ರತಾ ಒಪ್ಪಂದವಾಗಿತ್ತು. ಅದರ ಪ್ರಕಾರ ಅಮೆರಿಕೆಯು ಜಪಾನಿನಲ್ಲಿ ಕಾಯಂ ರಕ್ಷಣಾ ಪಡೆಗಳನ್ನು ನೆಲೆಗೊಳಿಸಿತು. ಇದರ ಫಲವಾಗಿ ಜಪಾನನ್ನು ರಕ್ಷಿಸುವ ಜವಾಬ್ದಾರಿ ಶಾಶ್ವತವಾಗಿ ಅಮೆರಿಕೆಯಾದಿತು.

ಜಪಾನಿನ ಸ್ವಂತ ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಅದರ ಮಿತ್ರ ದೇಶಗಳು ಮತ್ತು ಅಮೆರಿಕಾ ಬೃಹತ್ ಪ್ರಮಾಣದಲ್ಲಿ ನೆರವನ್ನು ನೀಡಿದವು. ಜಪಾನು ವಿಶ್ವಸಂಸ್ಥೆಯನ್ನು 1956ರಲ್ಲಿ ಸದಸ್ಯ ರಾಷ್ಟ್ರವಾಗಿ ಪ್ರವೇಶಿಸಲು ಅಮೇರಿಕಾ ಎಲ್ಲ ಬೆಂಬಲ ನೀಡಿತು. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವಬ್ಯಾಂಕು ಮತ್ತು ಅಭಿವೃದ್ಧಿ ಮತ್ತು ಆರ್ಥಿಕ ಸಹಕಾರಕ್ಕಾಗಿದ್ದ ಎಲ್ಲ ಜಾಗತಿಕ ಸಂಸ್ಥೆಗಳನ್ನು ಸದಸ್ಯ ರಾಷ್ಟ್ರವಾಗಿ ಜಪಾನು ಪ್ರವೇಶಿಸಲು ಅಮೇರಿಕಾ ನೆರವು ನೀಡಿತು. ಈ ಬಗೆಯ ಪ್ರಾಯೋಜನೆಯಿಂದಾಗಿ ಮತ್ತು ತನ್ನ ಸ್ವಂತ ಕ್ರಮಗಳಿಂದಾಗಿ ಎಲ್ಲ ಬಗೆಯ ವಿರೋಧವನ್ನು ಮತ್ತು ತಾರತಮ್ಯವಾದಿ ಕ್ರಮಗಳನ್ನು ಜಪಾನು ರಾಷ್ಟ್ರವನ್ನಾಗಿ ಎಲ್ಲ ದೇಶಗಳೂ ಒಪ್ಪಿಕೊಳ್ಳುವಂತಾಯಿತು.

## 160.8 ಸಾರಾಂಶ

ಜಪಾನು 1945ರಲ್ಲಿ ಮಿತ್ರ ಪಕ್ಷಗಳ ಪಡೆಗಳಿಗೆ ಶರಣಾಯಿತು. ಹೀಗೆ ಅದು ತನ್ನ ಸ್ವಾತಂತ್ರ್ಯ ಕಳೆದುಕೊಂಡಿತು. ಜನರಲ್ ಮೆಕಾರ್ಥರನು ಮಿತ್ರ ಪಕ್ಷಗಳ ಪಡೆಗಳ ಮಹಾದಂಡಾಧಿಕಾರಿಯಾಗಿ ಜಪಾನಿನಲ್ಲಿ ಅಧಿಕಾರ ವಹಿಸಿಕೊಂಡಿತು. ಮೀಜಿ ಸಂವಿಧಾನಕ್ಕಿಂತ ಎರಡು ಪಟ್ಟು ದೊಡ್ಡದಾದ ಹೊಸ ಸಂವಿಧಾನವನ್ನು ಜಪಾನು ಜಾರಿಗೆ ತಂದಿತು. ಸ್ವಾಧೀನ ಆಡಳಿತ ಕಾಲದಲ್ಲಿ ಜಪಾನು ಸ್ವಲ್ಪ ಪ್ರಗತಿ ಸಾಧಿಸಿಕೊಂಡಿತು. ಜಪಾನು ಮತ್ತೊಮ್ಮೆ ವಿಶ್ವಶಾಂತಿ ಮತ್ತು ಭದ್ರತೆಗೆ ಕಂಟಕವಾಗಿ ಬಿಡದಂತೆ ಮಾಡುವ ವಾತಾವರಣ ಉಂಟು ಮಾಡುವುದು ಮತ್ತು ಅಂತಹ ಭರವಸೆ ನೀಡುವುದು ಸ್ವಾಧೀನ ಆಡಳಿತದ ಏಕೈಕ ಉದ್ದೇಶವಾಗಿತ್ತು. ಇದನ್ನು ಮತ್ತೆ ಮತ್ತೆ ಮನವರಿಕೆ ಮಾಡಿಕೊಡಲಾಯಿತು.

ಜಪಾನಿ ಸರ್ಕಾರದ ಜೊತೆಯಲ್ಲಿ ಸ್ವಾಧೀನ ಆಡಳಿತ ನಡೆಯಿತು. ಜಪಾನನ್ನು ಡಿಮಿಲಿಟರೀಕರಣಕ್ಕೆ ಒಳಪಡಿಸುವ ಕ್ರಮವನ್ನು ಸ್ವಾಧೀನ ಆಡಳಿತ ಕೈಗೊಂಡಿತು. ಕಳಂಕ ಹೊತ್ತುಕೊಂಡಿದ್ದ ಅಪರಾಧಿಗಳಿಗೆ ಶಿಕ್ಷೆ ನೀಡಲಾಯಿತು. ಮಾತನಾಡುವ ಸ್ವಾತಂತ್ರ್ಯ ಮತ್ತು

ಪತ್ರಿಕಾ ಸ್ವಾತಂತ್ರ್ಯಗಳನ್ನು ನೀಡಲಾಯಿತು. ಹೊಸ ಸಂವಿಧಾನವನ್ನು ರೂಪಿಸಲಾಯಿತು. ಪ್ರಾಥಮಿಕ ಶಿಕ್ಷಣವನ್ನು ಕೇಂದ್ರೀಯಗೊಳಿಸಲಾಯಿತು. ಪಠ್ಯ ಪುಸ್ತಕಗಳನ್ನು ಪರಿಸ್ಕರಿಸಲಾಯಿತು. ಶಿಂಟೋನ ಬೋಧನೆಯನ್ನು ಶಾಲೆಗಳಲ್ಲಿ ನಿಷೇಧಿಸಲಾಯಿತು.

ಭೂಮಾಲಿಕತ್ವದ ಮೇಲೆ ಮಿತಿ ಹೇರಲಾಯಿತು. ಕಾರ್ಮಿಕ ಸಂಘಗಳನ್ನು ಸೇರುವ ಹಕ್ಕುಗಳನ್ನು ಕಾರ್ಮಿಕರಿಗೆ ನೀಡಲಾಯಿತು. ಜಾಯಿಬಟ್ಸುಗಳ ಆಸ್ತಿಪಾಸ್ತಿಗಳನ್ನೆಲ್ಲ ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡಿತು. ವಶಪಡಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಗೇಣಿದಾರರಿಗೆ ಮರು ಹಂಚಲಾಯಿತು. ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಲಾಯಿತು. ರಾಜಕೀಯ ಪಕ್ಷಗಳಿಗೆ ಅವಕಾಶ ಮಾಡಿಕೊಡಲಾಯಿತು. ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಸೆಪ್ಟೆಂಬರ್ 1951ರಲ್ಲಿ ಜಪಾನು ಮತ್ತು 50ರಾಷ್ಟ್ರಗಳು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದವು. ಹೀಗೆ ಏಪ್ರಿಲ್ 2, 1952 ರಂದು ಸ್ವಾಧೀನ ಆಳ್ವಿಕೆ ಕೊನೆಗೊಂಡಿತು. ಜಪಾನು ಮತ್ತೊಮ್ಮೆ ಸ್ವತಂತ್ರ ರಾಷ್ಟ್ರವಾಗಿ ವಿಶ್ವದಲ್ಲಿ ಅಸ್ತಿತ್ವ ಪಡೆದುಕೊಂಡಿತು.

## 160.9 ಸ್ವಯಂ ಪ್ರಗತಿ ಪರೀಕ್ಷೆ

***1. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 6ರಿಂದ 8 ಸಾಲು ಉತ್ತರ ಬರೆಯಿರಿ.***

ಅ. ಮೆಕಾರ್ಥರ್

ಆ. ಹಿರೋಹಿಟೊ

ಇ. ಜಾಯಿಬಟ್ಸು

ಈ. ಯೊಶಿಡಾಗೇರು

***2. ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೂ 15 ರಿಂದ 20 ಸಾಲು ಉತ್ತರ ಬರೆಯಿರಿ.***

ಅ. ಜಪಾನಿನಲ್ಲಿ 1945ರಿಂದ 1952ರ ಅವಧಿಯಲ್ಲಿ ಜಾರಿಗೊಳಿಸಿದ ಸುಧಾರಣೆಯ ವಿವರ ನೀಡಿ.

ಆ. "ಮಿತ್ರ ಪಕ್ಷಗಳ ಸ್ವಾಧೀನವು ಜಪಾನಿಗೆ ಲಾಭ ತಂದಿತು" ವಿವರಿಸಿ.

ಇ. ಎರಡನೆಯ ಮಹಾಯುದ್ಧದ ನಂತರ ಜಪಾನಿನ ಮೇಲೆ ಅಮೆರಿಕೆಯ ಸ್ವಾಧೀನ ಆಡಳಿತ ಉಂಟು ಮಾಡಿದ ಪರಿಣಾಮಗಳನ್ನು ಕುರಿತು ಬರೆಯಿರಿ.

ಈ. ಸ್ಯಾನ್ ಫ್ರಾನ್ಸಿಸ್ಕೊ ಶಾಂತಿ ಒಪ್ಪಂದದ ನಿಯಮ ಮತ್ತು ನಿಬಂಧನೆಗಳನ್ನು ವಿವರಿಸಿ.

## 160.10 ಹೆಚ್ಚಿನ ಓದಿಗಾಗಿ ಗ್ರಂಥಗಳು


1. ಬೇಸಿಲಿ ಡಬ್ಲ್ಯು. ಜಿ : ದಿ ಮಾರ್ಡ್ರ್ನ್ ಹಿಸ್ಟರಿ ಆಫ್ ಜಪಾನ್

2. ಲಟೋರೇಟ್ಟಿ ಕೆ.ಎಸ್ : ದಿ ಹಿಸ್ಟರಿ ಆಫ್ ಜಪಾನ್

3. ಮಾರ್ಟಿನ್ ಈ.ಎಮ್ : ದಿ ಅಲೈಡ್ ಆಕ್ಯುಪೇಶನ್ ಆಫ್ ಜಪಾನ್

4. ರಿಚರ್ಡ್ ಸ್ಟೋರಿ : ಎ ಹಿಸ್ಟರಿ ಆಫ್ ಮಾರ್ಡ್ರ್ನ್ ಜಪಾನ್

## ಘಟಕ - 161

# 1952 ರ ನಂತರ ಜಪಾನ್‌ನಲ್ಲಿ ಆಂತರಿಕ ಬದಲಾವಣೆಗಳು ಮತ್ತು ಬೆಳವಣಿಗೆಗಳು

*ರಚನೆ*

161.0 ಉದ್ದೇಶಗಳು

161.1 ಪ್ರಸ್ತಾವನೆ

161.2 ಸ್ವಾಧೀನ ಆಡಳಿತದ ನಂತರದ ಬೆಳವಣಿಗೆ ಮತ್ತು ರಾಜಕೀಯ ಪರಿಸ್ಥಿತಿ

161.3 ಆರ್ಥಿಕ ಬೆಳವಣಿಗೆ

161.4 ಕೃಷಿಯ ಯಾಂತ್ರೀಕರಣ

161.5 ಸ್ವಾಧೀನ ಆಡಳಿತದ ನಂತರ ಕೈಗಾರಿಕ ಬೆಳವಣಿಗೆ

161.6 ಸಾರಿಗೆ ಮತ್ತು ವ್ಯಾಪಾರ

- 161.6.1 ವಾಯುಸಾರಿಗೆ
- 161.6.2 ವ್ಯಾಪಾರ

161.7 ಸಾಮಾಜಿಕ ಬದಲಾವಣೆ

161.8 ಸಾರಾಂಶ

161.9 ಸ್ವಯಂ ಪ್ರಗತಿ ಪರೀಕ್ಷೆ

161.10 ಹೆಚ್ಚಿನ ಓದಿಗೆ ಗ್ರಂಥಗಳು

## 161.0 ಉದ್ದೇಶಗಳು

ಈ ವಿಭಾಗದಲ್ಲಿ 1952ರ ನಂತರ ಆಂತರಿಕವಾಗಿ ಜಪಾನಿನಲ್ಲಿ ಉಂಟಾದ ಬೆಳವಣಿಗೆಗಳ ಕೆಲವು ಸಂಗತಿಗಳನ್ನು ಕುರಿತು ಚರ್ಚಿಸಲಾಗಿದೆ. ಈ ವಿಭಾಗದ ಅಧ್ಯಯನದ ನಂತರ ತಾವು ಕೆಳಕಂಡ ಸಂಗತಿಗಳ ಬಗ್ಗೆ ತಿಳಿದುಕೊಂಡಿರುತ್ತೀರಿ.

ಸ್ಯಾನ್‌ಫ್ರಾನ್ಸಿಸ್ಕೊದ 1952ರ ಶಾಂತಿ ಒಪ್ಪಂದ

ಮಿತ್ರಪಕ್ಷಗಳ ಪಡೆಗಳ ಮಹಾದಂಡಾಧಿಕಾರಿ ಆಡಳಿತ ಹಾಗೂ ಅಮೆರಿಕಾಗಳು ಜಪಾನಿನ ಪುನರ್ ನಿರ್ಮಾಣಕ್ಕೆ ನಡೆಸಿದ ಪ್ರಯತ್ನಗಳು

ಜಪಾನು ಏಷ್ಯಾದ ಉತ್ಪಾದನಾ ಕರ್ಮಶಾಲೆಯಾದುದು.

ಜಪಾನಿನಲ್ಲಿ ಆಂತರಿಕ ಬೆಳವಣಿಗೆಗಳು

ಏಷ್ಯಾದ ದೇಶಗಳಿಗೆ ಜಪಾನು ಸ್ಫೂರ್ತಿಯ ಆದರ್ಶವಾಯಿತು.

## 161.1 ಪ್ರಸ್ತಾವನೆ

ಸ್ವಾಧೀನ ಆಡಳಿತವು 1952ರಲ್ಲಿ ಕೊನೆಗೊಂಡಿತು. ಜಪಾನು ನಿಶಸ್ತ್ರೀಕರಣಕ್ಕೆ ಒಳಗಾಯಿತು ಮತ್ತು ಅದು ಅನೇಕ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿತ್ತು. ಆದರೆ ನಿಧಾನವಾಗಿ ಅದು ಪುನಶ್ಚೇತನ ಪಡೆದುಕೊಳ್ಳತೊಡಗಿತು. ಅದು ಇನ್ನೂ ಅಮೆರಿಕೆಯನ್ನು ಅವಲಂಬಿಸಿಕೊಂಡಿತ್ತು. ಆದರೆ ಅಮೆರಿಕಾ ಮತ್ತು ಸೊವಿಯತ್ ರಷ್ಯಾಗಳ ನಡುವಣ ಶೀತಲ ಸಮರದಲ್ಲಿ ಅದು ತಟಸ್ಥವಾಗಿರಲು ನಿರ್ಧರಿಸಿತು. ರಾಷ್ಟ್ರೀಯತೆಯ ಭಾವನೆಯು ಮತ್ತೊಮ್ಮೆ ತಲೆಯೆತ್ತ ತೊಡಗಿತು. ತಾನು ಹಿಂದೆ ಕಳೆದುಕೊಂಡಿದ್ದ ಕುರ್ಲೀಸ್, ಬೊನಿನ್ ಮತ್ತು ರೈಯರು ದ್ವೀಪಗಳನ್ನು ಹಿಂತಿರುಗಿಸುವಂತೆ ಅದು ಒತ್ತಾಯ ಮಾಡತೊಡಗಿತು.

ನೆರೆಹೊರೆ ರಾಷ್ಟ್ರಗಳ ಒತ್ತಡದಿಂದಾಗಿ ಮತ್ತು ಅಮೆರಿಕೆಯ ನೆರವಿನಿಂದ ಜಪಾನು ತನ್ನ ಸ್ವರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಕೂಡಿಡಲು ತೊಡಗಿತು. ಈ ನೀತಿಗೆ ಎರಡೂ ದೇಶಗಳ ನಡುವಣ 1954ರ ಪರಸ್ಪರ ರಕ್ಷಣಾ ನಿರವು ಒಪ್ಪಂದದಿಂದಾಗಿ ಅಧಿಕೃತ ಮನ್ನಣೆ ಪ್ರಾಪ್ತವಾಯಿತು. ಈ ಒಪ್ಪಂದದ ಪ್ರಕಾರ ಎರಡೂ ದೇಶಗಳು ಚೀನಾದೊಂದಿಗೆ ವ್ಯಾಪಾರ ಸಂಬಂಧ ಬೆಳೆಸದಿರಲು ತೀರ್ಮಾನಿಸಿದವು ಮತ್ತು ಅಮೆರಿಕೆಯು ಜಪಾನಿಗೆ ಸರಕುಗಳು, ಉಪಕರಣಗಳು ಮತ್ತು ಸೇವೆಯ ರೂಪದಲ್ಲಿ ಮಿಲಿಟರಿ ನೆರವು ನೀಡಬೇಕಾಯಿತು.

ಚೀನಾ ವಿಷಯದಲ್ಲಿ ಉಂಟಾದ ಬದಲಾವಣೆಗಳಿಂದಾಗಿ ಮಹಾದಂಡಾಧಿಕಾರಿ ಆಡಳಿತವು ರೂಪಿಸಿದ್ದ ವ್ಯವಸ್ಥೆಯನ್ನು ಬದಲಾಯಿಸಬೇಕಾಯಿತು. ಶಿಂಟೋ ದೇವಾಲಯಗಳು ಮತ್ತೊಮ್ಮೆ ತಲೆಯೆತ್ತಿದವು. ಜಪಾನಿನ ಸಾಮ್ರಾಜ್ಯದ ಪೂರ್ವಿಕರ ನೆಲೆನೀಡಾಗಿದ್ದ ಐಸಿ ಎಂಬಲ್ಲಿಗೆ ಪ್ರಧಾನ ಮಂತ್ರಿ ಅಧಿಕೃತ ಭೇಟಿ ನೀಡಿದನು.

ಪ್ರಜಾಪ್ರಭುತ್ವವು ಸದೃಢಗೊಂಡಿತು. ಲಿಂಗ ಸಂಬಂಧಿ ಸಮಾನತೆಯನ್ನು ಒಪ್ಪಿಕೊಂಡಿದ್ದರ ಪರಿಣಾಮವಾಗಿ ಮಹಿಳೆಯರಿಗೆ ಉನ್ನತ ಸ್ಥಾನಮಾನ ಪ್ರಾಪ್ತವಾಯಿತು. ರೈತರಿಗೆ ಭೂಮಿಯನ್ನು ಹಂಚಲಾಗಿತ್ತು. ಮಿತ್ರಪಕ್ಷಗಳ ಮಹಾದಂಡಾಧಿಕಾರಿ ಆಡಳಿತ ಜಾರಿಗೆ ತಂದ ಸುಧಾರಣೆಯಿಂದಾಗಿ ರೈತರ ಸ್ಥಾನಮಾನ ಉತ್ತಮಗೊಂಡಿತು. ಸಾಂಪ್ರದಾಯಿಕತೆಯ ಕತ್ತಲು ಲೋಕದಿಂದ ಹೊಸ ಜಪಾನು ಉದಯವಾಗುತ್ತಿತ್ತು. ಪ್ರಪ್ರಥಮ ಭಾರಿಗೆ ಪ್ರಜಾಪ್ರಭುತ್ವವೆಂದರೇನು ಮತ್ತು ಹಕ್ಕು-ಸ್ವಾತಂತ್ರ್ಯಗಳೆಂದರೇನು ಎಂಬುದನ್ನು ಜನರು ಅನುಭವಿಸತೊಡಗಿದರು.

## 161.2 ಸ್ವಾಧೀನ ಆಡಳಿತದ ನಂತರದ ಬೆಳವಣಿಗೆ : ರಾಜಕೀಯ ಸ್ಥಿತಿಗತಿ

ಎರಡನೆಯ ಮಹಾಯುದ್ಧದ ನಂತರ ಸ್ಥಾನ ಭ್ರಷ್ಟನಾಗಿದ್ದ ಹಿರೋಹಿಟೋ ಚಕ್ರವರ್ತಿಯು ಮತ್ತೊಮ್ಮೆ ಚಕ್ರವರ್ತಿ ಪದವಿಗೇರಿದನು. ಜಪಾನಿನ ಸಂವಿಧಾನವು ಉತ್ತಮಗೊಳ್ಳುತ್ತಿತ್ತು. ಚಕ್ರವರ್ತಿಯು ರಾಷ್ಟ್ರದ ನಾಮ ಮಾತ್ರ ಮುಖ್ಯಸ್ಥನಾಗಿದ್ದ, ಅನೇಕ ರಾಜಕೀಯ ಪಕ್ಷಗಳು ಹುಟ್ಟಿಕೊಂಡವು. ಅವುಗಳಲ್ಲಿ ಲಿಬರಲ್ಸ್, ರ್‍ಯಾಡಿಕಲ್ಸ್, ಕಮ್ಯುನಿಸ್ಟರು ಮತ್ತು ಸಮಾಜವಾದಿಗಳು ಮುಖ್ಯರಾಗಿದ್ದರು. ಮಿತ್ರ ರಾಷ್ಟ್ರಗಳ ಕಪಿಮುಷ್ಠಿಯಿಂದ ಬಿಡುಗಡೆಗೊಂಡ ಜಪಾನಿನಲ್ಲಿ ಉದಾರವಾದಿ ನಾಯಕನೆನಿಸಿದ್ದ ಯೋಶಿಡಾ ಪ್ರಧಾನ ಮಂತ್ರಿಯಾದನು. ಜಪಾನು ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡುವಲ್ಲಿ ಅವನು ತುಂಬಾ ಶ್ರಮಪಟ್ಟನು. ಹಣದುಬ್ಬರವನ್ನು ತಡೆಗಟ್ಟಿದ್ದು, ಮಾನವ ಹಕ್ಕುಗಳ ರಕ್ಷಣೆ, ಕಮ್ಯುನಿಸ್ಟರ ಪ್ರಭಾವವನ್ನು ಹತ್ತಿಕ್ಕಿದ್ದು ಅವನ ಮುಖ್ಯ ಸಾಧನೆಗಳಾಗಿದ್ದವು. ಅಮೇರಿಕೆಯ ಕೈಗೊಂಬೆಯೆಂದು ವಿರೋಧಿಗಳು ಅವನನ್ನು ಟೀಕಿಸುತ್ತಿದ್ದರು. ಬಡತನ ಮತ್ತು ನಿರಾಶೆಯ ಕೂಪದಿಂದ ಜಪಾನು ಮೇಲೇಳಲು ಅವನ ನೀತಿಗಳು ತುಂಬಾ ಪ್ರಸ್ತುತವಾಗಿದ್ದವು. 1954ರಲ್ಲಿ ಲಿಬರಲ್ಸ್ ಮತ್ತು ಪ್ರಗತಿಪರರು ಕೂಡಿಕೊಂಡು ಪ್ರಜಾಪ್ರಭುತ್ವವಾದಿ ಪಕ್ಷವನ್ನು ಕಟ್ಟಿದರು. ಇದರ ಪರಿಣಾಮವಾಗಿ ಯೋಶಿಡಾ ರಾಜೀನಾಮೆ ನೀಡಬೇಕಾಯಿತು. ಅವನ ಸ್ಥಾನಕ್ಕೆ ಹಟೊಯಾಮ ಬಂದನು. ಅನಾರೋಗ್ಯದ ಕಾರಣ ಅವನು ರಾಜೀನಾಮೆ ಕೊಡಬೇಕಾಯಿತು. ಇದರಿಂದಾಗಿ 1954ರಲ್ಲಿ ಇಷಿಟಶಿ ಪ್ರಧಾನಿಯಾಗಿ ಅಧಿಕಾರವಹಿಸಿಕೊಂಡನು. ಮರುವರ್ಷವೇ ಅವನು ಅಧಿಕಾರ ಕಳೆದುಕೊಂಡನು. ಅವನ ಉತ್ತರಾಧಿಕಾರಿಯಾಗಿ ಕೆಶಿನೊಬುಸುಕಿ ಅಧಿಕಾರಕ್ಕೆ ಬಂದನು. ಅವನು 1960ರಲ್ಲಿ ರಾಜೀನಾಮೆ ನೀಡಿದನು. ಇಕೆಡಹಯೋಟು ಪ್ರಧಾನಮಂತ್ರಿಯಾದನು. ಆಂತರಿಕವಾಗಿ ಸೌಹಾರ್ದಯುತ ವಾತಾವರಣ ಕಾಯ್ದುಕೊಳ್ಳುವಲ್ಲಿ ಲಿಬರಲ್ ನೀತಿಯ ಮೂಲಕ ಅವನು ಯಶಸ್ವಿಯಾದನು. ಜಪಾನಿನ ರಾಷ್ಟ್ರೀಯ ವರಮಾನವನ್ನು ಹತ್ತು ವರ್ಷಗಳಲ್ಲಿ ಎರಡು ಪಟ್ಟು ಮಾಡುವ ಯೋಜನೆಯನ್ನು ರೂಪಿಸಿದನು. ಅಸ್ವಸ್ಥತೆಯ ಕಾರಣ ಅವನು 1946ರಲ್ಲಿ ರಾಜೀನಾಮೆ ನೀಡಿದನು. ಮುಂದೆ ಪ್ರಧಾನಿಯಾದ ಸಟೋಇಸಾಕು ಜಪಾನಿನ ಆರ್ಥಿಕತೆಯ ಸಮೃದ್ಧತೆಯನ್ನು ಮುಂದುವರಿಸುವಂತಹ ನೀತಿಗಳನ್ನು ಜಾರಿಗೊಳಿಸಿದನು. ವಿಶ್ವಸಮುದಾಯದ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸುವಂತಹ ನೀತಿಗಳನ್ನು ಅನುಸರಿಸಲಾಯಿತು.

## 161.3 ಆರ್ಥಿಕ ಬೆಳವಣಿಗೆ

ಎರಡನೆಯ ಮಹಾಯುದ್ಧದ ನಂತರ ಜಪಾನಿನ ಆರ್ಥಿಕತೆ ಮೂರಾಬಟ್ಟೆಯಾಗಿತ್ತು. ಆಹಾರದ ಅಭಾವವನ್ನು ಜಪಾನು ಎದುರಿಸುತ್ತಿತ್ತು. ಜನಸಂಖ್ಯೆಯು 80ದಶಲಕ್ಷವನ್ನು ಮುಟ್ಟಿತ್ತು. ವಸಾಹತುಗಳಿಂದ 60 ಲಕ್ಷ ಜಪಾನೀಯರು ವಾಪಸ್ಸಾಗಿದ್ದರು. ಉತ್ಪಾದನೆಯು ನೆಲಕಚ್ಚಿತ್ತು. ಜೀವನಾವಶ್ಯಕತೆಗಳ ಬೆಲೆಗಳು ಗಗನ ಮುಟ್ಟಿದ್ದವು. ಹಣದುಬ್ಬರ ಬೀಕರವಾಗಿತ್ತು. ಆರ್ಥಿಕತೆಯ ಪುನಶ್ಚೇತನವು ಸರ್ಕಾರದ ಮುಂದಿದ್ದ ಏಕೈಕ ಗುರಿಯಾಗಿತ್ತು. ಈ ಬಗೆಯ ಸವಾಲುಗಳನ್ನು ಮಿತ್ರಪಕ್ಷಗಳ ಮಹಾದಂಡಾಧಿಕಾರಿ ಆಡಳಿತವು ಸಮರ್ಥವಾಗಿ ಎದುರಿಸಿತು. ಅಮೆರಿಕೆಯಿಂದ ಹರಿದು ಬಂದ ಆಹಾರವು ಜನರನ್ನು ಉಪವಾಸದಿಂದ ಸಾಯದಂತೆ ನೋಡಿಕೊಂಡಿತು. ಜಪಾನಿನ ಕೈಗಾರಿಕೆಯ ಪುನರ್ವಸತಿಗೆ ಅಗತ್ಯವಾದ ಅಪಾರ ನೆರವನ್ನು ಅಮೇರಿಕೆಯು ನೀಡಿತು. ಇದರಿಂದಾಗಿ ಜಪಾನು ತನ್ನ ವಿದೇಶಿ ವ್ಯಾಪಾರ ಪಾವತಿಯಲ್ಲಿ ಸಮತೋಲನ ಕಾಯ್ದುಕೊಂಡಿತು. ಅಪಾರ ವಿದೇಶಿ ವಿನಿಮಯ ನಿಧಿಯನ್ನು ಕೂಡಿಹಾಕಿತು. ಸ್ವಾಧೀನ ಆಡಳಿತದಿಂದಾಗಿ ತಂತ್ರಜ್ಞಾನವನ್ನು ಜಪಾನು ಆಮದು ಮಾಡಿಕೊಂಡಿತು. ಹಡಗು ನಿರ್ಮಾಣದಂತಹ ಕೈಗಾರಿಕೆಗಳಿಂದ ವಿದ್ಯುನ್ಮಾನ ಉದ್ದಿಮೆಗಳವರೆಗೆ ಎಲ್ಲ ಬಗೆಯ ಕೈಗಾರಿಕೆಗಳ ನಿರ್ಮಾಣಕ್ಕೆ ಅಮೆರಿಕಾ ಜಪಾನಿಗೆ ನೆರವು ನೀಡಿತು.

ಸ್ವಾಧೀನ ಆಡಳಿತದ ನಂತರದ ಜಪಾನಿನ ಅತಿ ದೊಡ್ಡ ಸಾಧನೆಯೆಂದರೆ ಆರ್ಥಿಕ ಸಮೃದ್ಧತೆ. ಅದರ ತಲಾವರಮಾನವು 1953ರಿಂದ 1961ರ ಅವಧಿಯಲ್ಲಿ ಮೂರು ಪಟ್ಟು ಅಧಿಕಗೊಂಡಿತು. ಕೌಟುಂಬಿಕ ಸರಕರಣೆಗಳಾದ ವಾಕ್ಯೂಮ್ ಕ್ಲೀನರ್ಸ್, ವಾಷಿಂಗ್ ಮೆಷಿನ್, ಎಲೆಕ್ಟ್ರಿಕ್ಸ್ ರೆಫ್ರಿಜಿರೇಟರ್ಸ್, ಅಟೋಮೋಬೈಲ್ಸ್, ಟೆಲಿವಿಷನ್ ಮುಂತಾದವು ದ್ವಿಗುಣಗೊಂಡವು. ಈ ಬಗೆಯ

ವಸ್ತುಗಳು ಮಧ್ಯಮ ವರ್ಗದ ಮನೆಗಳಲ್ಲದೆ ಕೆಳವರಮಾನ ವರ್ಗದ ಮನೆಗಳನ್ನು ತುಂಬಿಕೊಂಡವು. ಜಪಾನು ಅಮೆರಿಕೆಗೆ ರಫ್ತು ಅಧಿಕಗೊಂಡಿತು. ವಿದೇಶಿ ವಿನಿಮಯದ ದಾಸ್ತಾನು ಪರ್ವತ ಸದೃಶವಾಯಿತು. ಯುದ್ಧದ ಸಂದರ್ಭದಲ್ಲಿ ವಿಧ್ವಂಸವಾಗಿದ್ದ ಕೈಗಾರಿಕೆಗಳನ್ನು ಪುನರ್ ನಿರ್ಮಾಣ ಮಾಡಲಾಯಿತು. ಆಧುನಿಕ ಉತ್ಪಾದನಾ ವಿಧಾನ ಮತ್ತು ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಲಾಯಿತು. ಅಮೆರಿಕೆಯು ಆಹಾರ ಮತ್ತು ಕಚ್ಚಾ ಸಾಮಾಗ್ರಿಗಳನ್ನು ಒದಗಿಸಿತು. ಶೀತಲ ಸಮರವು ಗಂಭೀರವಾಗತೊಡಗಿದಂತೆ ಜಾಯಿಬಿಟ್ಸುಗಳ ಮೇಲಿದ್ದ ನಿರ್ಭಂಧ ಸಡಿಲಗೊಳಿಸಲಾಯಿತು. ನಿಸ್ತೇಜಗೊಂಡಿದ್ದ ಜಪಾನಿನ ವಿದೇಶಿ ವ್ಯವಹಾರ ಅಮೆರಿಕೆಯ ನೆರವಿನಿಂದ ಬೆಳೆಯತೊಡಗಿತು. ಕೊರಿಯಾ ಯುದ್ಧವು ಪ್ರಾರಂಭವಾದ ಜಪಾನಿನ ವಿದೇಶಿ ವ್ಯಪಾರದ ಗತಿ ತೀವ್ರಗೊಂಡಿತು. ಕೊರಿಯಾ ಯುದ್ಧ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಮೂಲಕ ಅಮೆರಿಕಾ ನಡಿಸಿದ ಮಿಲಿಟರಿ ಕಾರ್ಯಾಚರಣೆಯು ಜಪಾನಿಗೆ ಹೆಚ್ಚಿನ ಅವಕಾಶವನ್ನು ಒದಗಿಸಿತು. ಆಹಾರ, ಸಾಮಾನು-ಸರಂಜಾಮುಗಳನ್ನು ಒದಗಿಸುವ ಸಲುವಾಗಿ ಅಮೆರಿಕಾ ಸಾಲವನ್ನು ಜಪಾನು ಡಾಲರುಗಳ ರೂಪದಲ್ಲಿ ಹಿಂತಿರುಗಿಸಿತು. ಜಪಾನು ರಫ್ತು ಮಾಡುವ ಮೂಲಕ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಬೇಕಾಗಿತ್ತು. ಅಮೆರಿಕೆಯ ಸಾಲವನ್ನು ಪೂರ್ತಿ ಹಿಂತಿರುಗಿಸಿದ ಮೇಲೆ ಜಪಾನು ತನ್ನ ನೀತಿಯಲ್ಲಿ ಬದಲಾವಣೆಯನ್ನು ತಂದಿತು. ಜಾಯಿಬಟ್ಸುಗಳ ಮೇಲಿದ್ದ ನಿರ್ಭಂಧವನ್ನು ತೆಗೆದುಹಾಕಲಾಯಿತು. ಸಣ್ಣ ಕೈಗಾರಿಕಾ ಉದ್ಯಮಿಗಳಾಗಿದ್ದ ಮಿಟ್ಸು, ಮಿಟ್ಸುಬಿಷಿ, ಸುಮಿಟೊಮೊ ಮುಂತಾದವುಗಳಿಗೆ ಕೈಗಾರಿಕೆಗಳ ಮೇಲೆ ಬಂಡವಾಳ ಹೂಡಲು ಅನುಮತಿ ನೀಡಲಾಯಿತು. ಇದರಿಂದಾಗಿ ಅನೇಕ ಬಗೆಯ ಕೈಗಾರಿಕೆಗಳು ತಲೆಯೆತ್ತಿದ್ದವು. ಎಲೆಕ್ಟ್ರಾನಿಕ್ಸ್, ಪೆಟ್ರೋಲಿಯಂ, ಕೆಮಿಕಲ್ಸ್, ರಬ್ಬರ್, ಕಾಟನ್, ಶಿಪ್ಪಿಂಗ್, ಕಮ್ಯುನಿಕೇಶನ್, ರೈಲ್ವೆ, ಸ್ಟೀಲ್, ಕಂಪ್ಯೂಟರ್, ರೇಡಿಯಾ, ಟೆಲಿವಿಷನ್, ಮಿಶಿನರಿ ಮುಂತಾದ ಉದ್ದಿಮೆಗಳು ಅಸ್ತಿತ್ವಕ್ಕೆ ಬಂದವು. ಈ ಉದ್ದಿಮೆಗಳ ಉತ್ಪಾದನೆಗಳೇ ಜಪಾನಿನ ಪ್ರಮುಖ ರಫ್ತು ಸರಕುಗಳಾಗಿದ್ದವು. ಅದರ ಆಮದುಗಳೆಂದರೆ ಮರಮುಟ್ಟು, ಖನಿಜಗಳು, ಗೋಧಿ, ಉಣ್ಣೆ ಮುಂತಾದವು. ಜಪಾನು ತನ್ನ ವ್ಯಾಪಾರಿ ಸಂಬಂಧಗಳನ್ನು ಬರ್ಮಾ, ಫಿಲಪೈನ್ಸ್, ಅರ್ಜೆಟೈನಾ, ಬ್ರಿಟನ್, ಅಮೆರಿಕಾ, ಜರ್ಮನಿ, ಈಶಾನ್ಯ ಏಷ್ಯಾ, ಭಾರತ, ಫಾರ್ಮೋಸಾ, ಪಾಕಿಸ್ಥಾನ ಮತ್ತು ಅನೇಕ ಯುರೋಪಿಯನ್ ದೇಶಗಳೊಂದಿಗೆ ಇಟ್ಟುಕೊಂಡಿತ್ತು.

ಅದು ವಿದ್ಯುತ್ತಿನ ಉತ್ಪಾದನೆಯಲ್ಲಿ 1960ರಲ್ಲಿ ವಿಶ್ವದಲ್ಲಿ 6ನೇಯ ಸ್ಥಾನದಲ್ಲಿತ್ತು. ಜಪಾನಿನ ಮೋಟಾರು ಸೈಕಲ್ಲುಗಳು ಯುರೋಪಿನ ಸ್ಪರ್ಧೆಗಳಲ್ಲಿ ಗೆಲ್ಲತೊಡಗಿದ್ದವು. ಜಪಾನಿನ ಕ್ಯಾಮರಗಳು, ಆಪ್ಟೀಕಲ್ ಸರಕುಗಳು ಜರ್ಮನಿಯನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಓಡಿಸತೊಡಗಿದವು. ಜಪಾನಿನ ಹೊಲಿಗೆ ಯಂತ್ರಗಳು, ಟ್ರಾನ್ಸಿಸ್ಟರ್‌ಗಳು, ರೇಡಿಯೋಗಳು ವಿಶ್ವದ ಮೂಲೆ ಮೂಲೆಗಳಲ್ಲಿ ಕಾಣತೊಡಗಿದವು. ಹಿಂದೆಂದೂ ಕಾಣದಷ್ಟು ವಿಶಾಲವಾದ ಮಾರುಕಟ್ಟೆಯನ್ನು ಜಪಾನಿನ ಉದ್ಯಮಿಗಳು ವಿಶ್ವದಲ್ಲಿ ಆಕ್ರಮಿಸಿಕೊಂಡು ಬಿಟ್ಟರು. ಇದು ಜಪಾನಿನ ಉತ್ತುಂಗ ಸಾಧನೆಯಾಗಿದೆ.

## 161.4 ಕೃಷಿ ಯಂತ್ರೀಕರಣ

ನಿಧಾನವಾಗಿ ಜಪಾನಿನಲ್ಲಿ ಮಾನವ ಶ್ರಮದ ಸ್ಥಳದಲ್ಲಿ ಯಂತ್ರಗಳು ವಿಜೃಂಭಿಸತೊಡಗಿದವು. ಪವರ್ ಟಿಲ್ಲರುಗಳು, ಟ್ರಾಕ್ಟರ್‌ಗಳು, ಪಾಲಿಶರ್ಸ್‌ಗಳು, ಯಾಂತ್ರಿಕ ನೀರೆತ್ತುವ ಪಂಪುಗಳು, ಸಣ್ಣ ಮೋಟಾರುಗಳು, ಪವರ್‌ಸ್ಪೇಯರ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಪಂಪುಗಳು ಜಪಾನಿನಲ್ಲಿ ವ್ಯಾಪಕವಾಗಿ ಬಳಕೆಯಾಗತೊಡಗಿದವು. ಭತ್ತದ ಕೃಷಿಯಲ್ಲಿ ಶೇ 96ರಷ್ಟು ಗದ್ದೆಗಳಲ್ಲಿ ಪವರ್ ಟಿಲ್ಲರ್‌ಗಳನ್ನು ಬಳಸಲಾಗುತ್ತಿತ್ತು. ಭತ್ತದ ಗದ್ದೆಗಳ ಪೈಕಿ ಶೇ . 96ರಷ್ಟನ್ನು ಯಂತ್ರಗಳಿಂದ ಉಳಮೆ ಮಾಡಲಾಗುತ್ತಿತ್ತು. ಕೃಷಿ ಯಂತ್ರೋಪಕರಣಗಳ ಕೈಗಾರಿಕೆ, ಪ್ರಾತ್ಯಕ್ಷಿಕೆಯ ಕ್ಷೇತ್ರಗಳು ಮತ್ತು ಕೃಷಿ ತಜ್ಞರುಗಳ ನಡುವೆ ಸಹಕಾರವಿತ್ತು. ಇದರಿಂದಾಗಿ ರೈತರಿಗೆ ಅಗತ್ಯವಾದ ಯಂತ್ರೋಪಕರಮಗಳನ್ನು ಉತ್ಪಾದಿಸುವುದು ಜಪಾನಿಗೆ ಸಾಧ್ಯವಾಯಿತು.

ಅನೇಕ ಬಗೆಯ ಅಂತಾರಾಷ್ಟ್ರೀಯ ಅರ್ಥಿಕ ಸಹಕಾರ ಒಪ್ಪಂದಗಳ ಆಶ್ರಯದಲ್ಲಿ ನೀರಾವರಿ ಉಪಯೋಗ, ಸಣ್ಣಯಂತ್ರಗಳ ಬಳಕೆ ಮತ್ತು ಭತ್ತದ ಆಧುನಿಕ ಸಾಗುವಳಿ ಕುರಿತಂತೆ ರೈತರಿಗೆ ತರಬೇತಿ ನೀಡಲು ತಿಳುವಳಿಕೆ ನೀಡಲು ಜಪಾನಿನ ತಜ್ಞರು ಶ್ರೀಲಂಕಾ,

ಪಾಕಿಸ್ಥಾನ, ಕಾಂಬೋಡಿಯಾ, ಮಿಯೆಟ್ನಾಂ ಮುಂತಾದ ದೇಶಗಳಲ್ಲಿ ಕೆಲಸ ಮಾಡತೊಡಗಿದರು. ಈ ದೇಶಗಳಲ್ಲಿ ಜಪಾನಿನ ತಜ್ಞರ ಸಲಹೆಯ ನೆರವಿನಿಂದಾಗಿ ಭತ್ತದ ಇಳಿವರಿ ಎರಡು ಪಟ್ಟು ಅಧಿಕಗೊಂಡಿತು. ಸಂಚಾರಿ ಪ್ರಯೋಗಾಲಯಗಳನ್ನು ವ್ಯವಸ್ಥೆಗೊಳಿಸಲಾಯಿತು. ಇದರಿಂದ ಜಪಾನಿ ಮಾದರಿಯನ್ನು ಪ್ರದರ್ಶಿಸುವುದು ಸುಲಭವಾಯಿತು.

ಜಪಾನಿನ ಒಟ್ಟು ಕೃಷಿಯಲ್ಲಿ ಭತ್ತದ ಸಾಗುವಳಿಯ ಪ್ರಧಾನವಾಗಿದೆ. ಅಲ್ಲಿನ ಕೃಷಿ ಉತ್ಪಾದನೆಯಲ್ಲಿ 1968 ರಲ್ಲಿ ಭತ್ತದ ಪ್ರಮಾಣವು ಶೇ 16.5ರಷ್ಟಿತ್ತು. ಜಪಾನಿನಲ್ಲಿ ಭತ್ತದ ಇಳುವರಿ ಇಂದಿಗೂ ಅಧಿಕಗೊಳ್ಳುತ್ತಲೇ ನಡೆದಿದೆ. ಜಪಾನಿನಲ್ಲಿ ಪಶುಗಳ ಮಾಂಸದ ಬಳಕೆ, ಸಕ್ಕರೆ, ಖಾದತೈಲ ಮುಂತಾದವುಗಳ ಬಳಕೆ ಅಧಿಕವಾಗಿರುವುದರಿಂದ ಅಲ್ಲಿ ಭತ್ತವು ಅಧಿಕ್ಯವಾಗಿದೆ. 1970ರಲ್ಲಿ ಸುಮಾರು 7 ದಶಲಕ್ಷ ಟನ್ ಭತ್ತ ಅಧಿಕವಾಗಿತ್ತು. ಅಲ್ಲಿ ಕೃಷಿಯನ್ನು ಅವಲಂಬಿಸಿಕೊಂಡ ಕುಟುಂಬಗಳ ವರಮಾನವು 1970ರಲ್ಲಿ 3880 ಡಾಲರುಗಳಷ್ಟಾಗಿತ್ತು. ಇದು ನಗರವಾಸಿ ದುಡಿಮೆಗಾರ ಕುಟುಂಬಗಳ ವರಮಾನಕ್ಕಿಂತ ಅಧಿಕವಾಗಿತ್ತು.

## 161.5 ಸ್ವಾಧೀನ ಆಡಳಿತ ನಂತರದ ಕೈಗಾರಿಕಾ ಬೆಳವಣಿಗೆ

ಒಂದು ಕಾಲದಲ್ಲಿ ಅಮೆರಿಕೆಯ ಬದ್ಧವೈರಿಯಾಗಿದ್ದ ಜಪಾನು ಈಗ ಅದರ ಅತಿ ನಂಬಿಕೆಯ ಮಿತ್ರ ಪ್ರದೇಶವಾಗಿ ಬಿಟ್ಟಿತು. ಜಪಾನಿನ ಕೈಗಾರಿಕಾರಂಗ ಮತ್ತು ವ್ಯಾಪಾರಿರಂಗದ ಪುನರ್ ನಿರ್ಮಾಣಕ್ಕೆ ಅಮೆರಿಕವು ಬಿಲಿಯನ್‌ಗಟ್ಟಲೇ ಡಾಲರುಗಳ ನೆರವನ್ನು ಹರಿಸಿಬಿಟ್ಟಿತು. ಈ ಎರಡೂ ದೇಶ ನಡುವಿನ ಆರ್ಥಿಕ ಮತ್ತು ತಾಂತ್ರಿಕ ಸಹಕಾರವೇ ಜಪಾನಿನ ಆರ್ಥಿಕ ಪುನಶ್ಚೇತನದ ಹಿಂದಿನ ಚಾಲಕ ಶಕ್ತಿಯಾಗಿತ್ತು. ಸುಮಾರು 1500 ವಿದೇಶಿ ತಾಂತ್ರಿಕ ನೆರವಿನ ಕಾಂಟ್ರಾಕ್ಟ್‌ಗಳನ್ನು 1961ರ ಹೊತ್ತಿಗೆ ಜಪಾನು ವಿವಿಧ ದೇಶಗಳ ಜೊತೆಗೆ ಮಾಡಿಕೊಂಡಿತ್ತು. ಅವುಗಳಲ್ಲಿ ಒಂದನೇ ಮೂರು ಭಾಗ ಅಮೆರಿಕೆಯ ಜೊತೆ ಮಾಡಿಕೊಂಡ ಕಾಂಟ್ರಾಕ್ಟ್‌ಗಳು ಹುಟ್ಟಿಕೊಂಡವು.

ಅನತಿ ಕಾಲದಲ್ಲಿ ಡಪಾನು ಇಡೀ ವಿಶ್ವದ ಅತಿದೊಡ್ಡ ಹಡಗು ನಿರ್ಮಾಣದ ದೇಶವಾಯಿತು. ಅಮೆರಿಕೆಯಿಂದ ಅದು ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲನ್ನು ಖರೀದಿಸುತ್ತಿತ್ತು. ಈ ಕಚ್ಚಾ ಸಾಮಗ್ರಿಗಳನ್ನು ಬಳಸಿ ಸಿದ್ಧಪಡಿಸಿದ ಕಬ್ಬಿಣ ಮತ್ತು ಉಕ್ಕನ್ನು ಅಮೆರಿಕೆಗೆ ರಫ್ತು ಮಾಡುತ್ತಿತ್ತು. ಕಚ್ಚಾ ಸಾಮಾಗ್ರಿಯನ್ನು ಪಕ್ಕಾ ಸಾಮಗ್ರಿಯನ್ನಾಗಿ ಪರಿವರ್ತಿಸುವ ಮತ್ತು ಪಕ್ಕಾ ಸಾಮಗ್ರಿಗಳನ್ನು ಮಾರಾಟ ಮಾಡುವ ದಿಶೆಯಲ್ಲಿನ ಜಪಾನಿನ ಸಾಮರ್ಥ್ಯವು ಅಸಮಾನ್ಯವಾಗಿತ್ತು. ಹೊಂಡಾ ಮತ್ತು ಸುಜುಕಿ ಮೋಟಾರು ಸೈಕಲ್ಲುಗಳು, ಟಯೋಟ ಮತ್ತು ಡಾಟ್ ಸನ್ ಕಾರುಗಳು ವಿಶ್ವದ ಎಲ್ಲ ಭಾಗಗಳಲ್ಲೂ ಮಾರಾಟವಾಗತೊಡಗಿದವು. ಎಲೆಕ್ಟ್ರಾನಿಕ್ಸ್ ಉತ್ಪನ್ನಗಳಾದ ಟೇಪ್ ರೆಕಾರ್ಡರ್ಸ್, ಟೆಲಿವಿಷನ್, ಬೈನಾಕುಲರ್ಸ್, ಕ್ಯಾಲುಕುಲೇಟರ್ಸ್, ಎಲೆಕ್ಟ್ರಾನಿಕ್ ಮೈಕ್ರೋಸ್ಕೋಪ್‌ಗಳು ಮುಂತಾದವುಗಳ ಉತ್ಪನ್ನಗಳಲ್ಲಿ ಜಪಾನಿನ ಸೋನಿ ಮತ್ತು ಮಾಟ್ಸ್ ಶಿಬಾ ಅದ್ವೀತಿಯ ಕಂಪನಿಗಳಾದವು. ಮಿಟ್ಸುಯಿ ಮತ್ತು ಮಿಟ್ಸುಬಿಷಿ ಕಂಪನಿಗಳು ಜಂಟಿಯಾಗಿ ವಿಶ್ವದ ಅನೇಕ ಭಾಗಗಳಲ್ಲಿ ವಿದ್ಯುತ್ ಸ್ಥಾವರ ನಿರ್ಮಿಸುವ, ರಾಸಾಯನಿಕ ಉದ್ದಿಮೆಗಳನ್ನು ಕಟ್ಟುವ, ಬಂದರುಗಳನ್ನು ಕಟ್ಟುವ ಕಾಂಟ್ರಾಕ್ಟ್‌ಗಳನ್ನು ವಹಿಸಿಕೊಂಡವು.

ಬೃಹತ್ ಪ್ರಮಾಣದಲ್ಲಿ ಅನುಭೋಗಿ ಸರಕುಗಳನ್ನು ಉತ್ಪಾದಿಸುತ್ತಿದ್ದುದರಿಂದ ಜಪಾನಿನಲ್ಲಿ ಉತ್ಪದನಾ ವೆಚ್ಚ ಅತ್ಯಂತ ಕಡಿಮೆಯಾಯಿತು. ಮಾಟ್ಸ್ ಶಿಬಾ, ತೊಶಿಬಾ ಮತ್ತು ಹಿಟಾಚಿ ಕಂಪನಿಗಳು ಜಪಾನಿಯರಿಗೆ ನವೀನ ರೀತಿಯ ಉತ್ಪಾದನೆ ಮತ್ತು ಅನುಭೋಗ ಮಾದರಿಗಳನ್ನು ಪರಿಚಯಿಸಿದವು. ಅದರ ಆಂತರಿಗ ಮಾರುಕಟ್ಟೆ ವಿಸ್ತೃತವಾಗಿದ್ದುದರಿಂದ, ಅಲ್ಲಿ ದೊಡ್ಡ ಪ್ರಮಾಣದ ಉತ್ಪಾದನೆ ಸಾಧ್ಯವಾಯಿತು ಮತ್ತು ಅದು ಅಂತಾರಾಷ್ಟ್ರೀಯವಾಗಿ ಸಮರ್ಥ ಪೈಪೋಟಿ ನೀಡುವ ದೇಶವಾಯಿತು. ಸ್ವಾಧೀನ ಆಡಳಿತದ ಅಂತ್ಯದ ನಂತರ ಜಪಾನು ಬೃಹತ್ ಪ್ರಮಾಣದ ಉತ್ಪಾದನೆಗೆ ತೊಡಗಿತು ಮತ್ತು ಸ್ವಯಂಚಲೀ ವ್ಯವಸ್ಥೆಯನ್ನು ಎಲ್ಲ ಕಡೆ ಅಳವಡಿಸಿಕೊಳ್ಳ ತೊಡಗಿತು. ಉಕ್ಕು, ಹಡಗು ನಿರ್ಮಾಣ, ಆಟೋಮೊಬೈಲ್ಸ್, ಮೋಟಾರು ಸೈಕಲ್ಲುಗಳು, ಟೆಲಿವಿಷನ್‌ಗಳು, ರೇಡಿಯೊ, ಟೇಪ್‌ರಿಕಾರ್ಡ್‌ರಗಳು, ಕ್ಯಾಮರಾ ಮುಂತಾದ ಕ್ಷೇತ್ರದಲ್ಲಿ ಅದು ದೊಡ್ಡ ಪ್ರಮಾಣದ ಉತ್ಪಾದನೆಯನ್ನು ಕೈಗೊಂಡಿತು ಮತ್ತು

ಸ್ವಯಂ ಚಲೀ ವ್ಯವಸ್ಥೆಯನ್ನು ಅಳವಡಿಸಿಕೊಂಡಿತು. ಸರ್ಕಾರದ ಆದ್ಯತಾ ನೆರವಿನಿಂದಾಗಿ ಸದರಿ ಕಾರ್ಪೊರೇಶನ್‌ಗಳಿಗೆ ಆಧುನೀಕರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಸುಲಭವಾಯಿತು. ವಿದೇಶಿ ತಜ್ಞರು ಅಲ್ಲಿ ಉತ್ಪಾದನೆಯ ಗುಣಮಟ್ಟಕ್ಕೆ ಮಾನದಂಡ ನಿರ್ಧರಿಸುವ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸುವ ದಿಶೆಯಲ್ಲಿ ವಿದೇಶಿ ತಜ್ಞರು ನೆರವು ನೀಡಿದರು.

ಮೌಲ್ಯವರ್ಧನಾ ಪದ್ಧತಿಯನ್ನು ಅಳವಡಿಸಿಕೊಂಡ ಪರಿಣಾಮವಾಗಿ ಜಪಾನಿನ ಉದ್ದಿಮೆಗಳು ಗುಣಮಟ್ಟದ ನಿಯಂತ್ರಣಕ್ಕೆ ಹೆಚ್ಚಿನ ಗಮನ ನೀಡಬೇಕಾಯಿತು. ಅದರಲ್ಲೂ ರಫ್ತು ಉದ್ದೇಶದ ವಸ್ತುಗಳಲ್ಲಿ ಗುಣಮಟ್ಟದ ನಿಯಂತ್ರಣ ಕಟ್ಟುನಿಟ್ಟಾಯಿತು. ಉತ್ಪನ್ನಗಳನ್ನು ರಫ್ತಿಗಾಗಿ ಹಡಗುಗಳಿಗೆ ತುಂಬುವ ಮೊದಲು ಕಟ್ಟುನಿಟ್ಟಾದ ಗುಣಮಟ್ಟ ನಿಯಂತ್ರಣ ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಇದರಿಂದ ಉನ್ನತ ಗುಣಮಟ್ಟ ಕಾಯ್ದುಕೊಳ್ಳುವುದು ಸಾಧ್ಯವಾಯಿತು. ಜಪಾನು ಭಾರಿ ಉದ್ದಿಮೆಗಳು, ಲೋಹದ ಉದ್ದಿಮೆಗಳು, ಯಂತ್ರೋಪಕರಣ ಉದ್ದಿಮೆ, ರಾಸಾಯನಿಕ ಉದ್ದಿಮೆ, ಆಟೋಮೊಬೈಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಲ್ಲಿ ಒಂದನೆಯ ದರ್ಜೆಯ ದೇಶವಾಗಿ ಬಿಟ್ಟಿತು.

ಚೀನಾ, ಭಾರತ ಮತ್ತು ಹಾಂಗ್‌ಕಾಂಗ್‌ಗಳಲ್ಲಿ ಕೈಗಾರಿಕೆಗಳು ಬೆಳೆಯತೊಡಗಿದಂತೆ ಜಪಾನಿಗೆ ಅವುಗಳ ಜೊತೆ ಸ್ಪರ್ಧಿಸುವುದು ಕಷ್ಟವಾಗ ತೊಡಗಿತು. ಏಕೆಂದರೆ ಜಪಾನಿನಲ್ಲಿದ್ದಂತೆ ಸದರಿ ದೇಶಗಳಲ್ಲಿ ಶ್ರಮಶಕ್ತಿಯು ಅತ್ಯಂತ ಕಡಿಮೆ ಕೂಲಿಗೆ ದೊರೆಯುತ್ತಿತ್ತು. ಇದರಿಂದಾಗಿ ಅದು ತನ್ನ ಉತ್ಪಾದನಾ ಮಾದರಿಯನ್ನು ಬದಲಾಯಿಸಿಕೊಳ್ಳಬೇಕಾಯಿತು. ಜವಳಿ ಮತ್ತು ಇತರೆ ಅನುಭೋಗಿ ಸರಕುಗಳಿಗೆ ಪ್ರತಿಯಾಗಿ ಅದು ತನ್ನ ಸಂಪನ್ಮೂಲಗಳನ್ನೆಲ್ಲ ಹಡಗುಗಳು, ಯಂತ್ರೋಪಕರಣಗಳು, ಕ್ಯಾಮರ ಮತ್ತು ಕಂಪ್ಯೂಟರ್‌ಗಳ ಉತ್ಪಾದನೆಯಲ್ಲಿ ಕೇಂದ್ರಿಕರಿಸತೊಡಗಿತು.

## 161.6 ಸಾರಿಗೆ ಮತ್ತು ವ್ಯಾಪಾರ

ಇತ್ತೀಚಿಗಿನ ದಿನಗಳಲ್ಲಿ ಸಾರಿಗೆಗೆ ಸಂಬಂಧಿಸಿದ ಉದ್ದಿಮೆ ಕ್ಷೇತ್ರದಲ್ಲಿ ಜಪಾನು ಅದ್ವಿತೀಯ ಪ್ರಗತಿ ಸಾಧಿಸಿಕೊಂಡಿತು. ವಿಶ್ವದಲ್ಲೇ ಅತಿ ವೇಗವಾಗಿ ಸಾಗುವ ರೈಲು ವ್ಯವಸ್ಥೆ ಜಪಾನಿನಲ್ಲಿದೆ. ವಿಶ್ವದಲ್ಲೇ ಅತಿ ದೊಡ್ಡದಾದ ತೈಲ ದಾಸ್ತಾನು ಟ್ಯಾಂಕರ್‌ಗಳನ್ನು ಅದು ನಿರ್ಮಿಸಿದೆ. ವಿಮಾನ ಸಾರಿಗೆಯಲ್ಲಿ ಅದು ತಯಾರಿಸುವ ವಿಮಾನಗಳು ವಿಶ್ವಮಾರುಕಟ್ಟೆಯಲ್ಲಿ ಸಾಕಷ್ಟು ಪಾಲು ಪಡೆದುಕೊಂಡಿದೆ. ಜಪಾನೀಸ್ ನ್ಯಾಷಿನಲ್ ರೈಲ್ವೇಸ್ (ಜೆ.ಎನ್.ಆರ್) ಎಂಬುದು ಜಪಾನಿನ ಸಾರ್ವಜನಿಕ ಉದ್ದಿಮೆಯಾಗಿದೆ. ಈ ಸಂಸ್ಥೆಯ ಅತಿದೊಡ್ಡ ಸಾಧನೆಯೆಂದರೆ ಅದು ಅಕ್ಟೋಬರ್ 1, 1964ರಂದು ನ್ಯೂಟಕೈಡೋ ಮಾರ್ಗದಲ್ಲಿ ವಿಶ್ವದಲ್ಲೇ ಅತಿ ವೇಗವಾಗಿ ಓಡುವ ರೈಲು ವ್ಯವಸ್ಥೆಯನ್ನು ಜಾರಿಗೆ ತಂದಿತು. ನ್ಯೂಟಕೈಡೋ ಮಾರ್ಗದಲ್ಲಿ ಓಡುವ ಸೂಪರ್ ಎಕ್ಸಪ್ರೆಸ್ ರೈಲುಗಳು ಉಕ್ಕು ಉತ್ಪನ್ನಗಳ ತಂತ್ರಜ್ಞಾನಕ್ಕೆ ಸಂಬಂಧಿಸಿದ ಅತ್ಯುನ್ನತ ಸಾಧನೆಯ ಸಂಕೇತಗಳಾಗಿವೆ. ಎರಡು ಪಥಗಳು ರೈಲು ಮಾರ್ಗವಿರುವ ಟೋಕಿಯೋ ಮತ್ತು ಒಸಾಕ ನಡುವಣ 515ಕಿಲೊ ಮೀಟರ್ ದೂರವನ್ನು ಮೂರು ಗಂಟೆಗೂ ಕಡಿಮೆ ಅವಧಿಯಲ್ಲಿ ಪೂರೈಸುತ್ತವೆ. ಹದಿನಾರು ಕೋಚ್‌ಗಳಿರುವ ಸೂಪರ್ ಎಕ್ಸ್‌ಪ್ರೆಸ್ ರೈಲು ಗಂಟೆಗೆ 250 ಕಿಲೋಮೀಟರ್ ವೇಗದಲ್ಲಿ ಓಡುತ್ತದೆ. ಸುರಕ್ಷತೆಯ ದೃಷ್ಟಿಯಿಂದ ಸದರಿ ರೈಲುಗಳ ನಿರ್ವಹಣೆಯಲ್ಲಿ ಸ್ವಯಂಚಲೀ ರೈಲು ನಿಯಂತ್ರಣ ವ್ಯವಸ್ಥೆಯನ್ನು ಮತ್ತು ಕೇಂದ್ರೀಯ ರೈಲು ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ರೈಲು ಸಾರಿಗೆಗೆ ಪೂರಕವಾಗಿ ರಸ್ತೆಸಾರಿಗೆಯನ್ನು ದೇಶಾದ್ಯಂತ ವ್ಯವಸ್ಥೆಗೊಳಿಸಲಾಗಿದೆ. ಪ್ರಯಾಣಿಕರ ಹಾಗೂ ಸರಕು ಸಾಗಾಣಿಕೆಯಲ್ಲಿ ರಸ್ತೆ ಸಾರಿಗೆಯ ಪಾಲು ಶೇ.42.1ರಷ್ಟಿದ್ದರೆ ರೈಲು ಸಾರಿಗೆಯ ಪಾಲು ಶೇ.62.9 ರಷ್ಟಿದೆ. ರಸ್ತೆ ಸಾರಿಗೆಯನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಜಪಾನು ಸರ್ಕಾರವು ರಾಷ್ಟ್ರೀಯ ಎಕ್ಸ್‌ಪ್ರೆಸ್ ಮಾರ್ಗಗಳ ಜಾಲವನ್ನು ನಿರ್ಮಿಸಲು ಯೋಜನೆಯನ್ನು ಹಾಕಿಕೊಂಡಿತು. 1985ರಲ್ಲಿ ಅದು 32ಅಂತಹ ಹೊಸಮಾರ್ಗಗಳನ್ನು ಪ್ರಾರಂಭಿಸಿತು. ಈ ಮಾರ್ಗಗಳು 4,720 ಕಿಲೋ ಮೀಟರ್‌ನಷ್ಟು ಉದ್ದವಾಗಿದ್ದವು.

### 161.6.1 ವಿಮಾನ ಸಾರಿಗೆ

ವಿಶ್ವದ ಅತಿದೊಡ್ಡ ವಿಮಾನ ನಿಲ್ದಾಣಗಳು ಟೋಕಿಯೋ ಮತ್ತು ಒಸಾಕಗಳಲ್ಲಿವೆ. ಟೋಕಿಯೊ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಒಸಾಕ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಅತ್ಯಂತ ದೊಡ್ಡದಾದ ಟರ್ಮಿನಲ್‌ಗಳಿವೆ.

ಜಪಾನಿ ಏರ್‌ಲೈನ್ಸ್ ಎಂಬ ವಿಮಾನಸಾರಿಗೆ ಸಂಸ್ಥೆಯನ್ನು 2000ದಶಲಕ್ಷ ಯೆನ್‌ಗಳ ಬಂಡವಾಳದೊಂದಿಗೆ 1953ರಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆ 1954ರಲ್ಲಿ ಟೋಕಿಯೋ ಮತ್ತು ಸಾನ್ ಫ್ರಾನ್ಸಿಸ್ಕೊ ನಡುವೆ ಪ್ರಥಮ ಅಂತಾರಾಷ್ಟ್ರೀಯ ವಿಮಾನ ಸಾರಿಗೆಯನ್ನು ಆರಂಭಿಸಿತು. ಈ ಸಂಸ್ಥೆಯು ಇಂದು ವಿಶ್ವದ ಖಂಡಗಳಲ್ಲಿ ವಿಮಾನ ಸಾರಿಗೆ ಒದಗಿಸುತ್ತಿದೆ. ಇದು 1967ರಲ್ಲಿ ನ್ಯೂಯಾರ್ಕ್ ಮೂಲಕ ವಿಶ್ವಸೇವೆಯನ್ನು ಆರಂಭಿಸಿತು. ಈ ಸಂಸ್ಥೆಯು ಟ್ರಾನ್ಸ್ ಸೈಬಿರಿಯನ್ ಸೇವೆಯನ್ನು ಸ್ವತಂತ್ರವಾಗಿ ಆರಂಭಿಸಿತು. ಇದು ಮಾಸ್ಕೊ ಮಾರ್ಗವಾಗಿ ಟೋಕಿಯೋ ಮತ್ತು ಪ್ಯಾರಿಸ್ ನಡುವೆ ಸುತ್ತು ಹಾಕುವ ಸೇವೆಯನ್ನು ಮಾರ್ಚ್ 28,1970ರಂದು ಆರಂಭಿಸಿತು. ಅದೇ ರೀತಿ ಮಾಸ್ಕೊ ಮಾರ್ಗವಾಗಿ ಟೋಕಿಯೋ ಮತ್ತು ಲಂಡನ್ ನಡುವೆ ಸುತ್ತು ಹಾಕುವ ಸೇವೆಯನ್ನು ಜೂನ್ 2, 1970ರಂದು ಪ್ರಾರಂಭಿಸಿತು. ಯುರೋಪು ಮತ್ತು ಪೂರ್ವ ಏಷ್ಯಾಗಳ ನಡುವೆ ಇದು ಅತ್ಯಂತ ಹತ್ತಿರದ ದಾರಿಯಾಗಿತ್ತು. ಜಪಾನ್ ಏರ್‌ಲೈನ್ಸ್ ಮತ್ತು ಇತರೆ ಮೂರು ವಿಮಾನ ಸಾರಿಗೆ ಸಂಸ್ಥೆಗಳು ಅಂತರಿಕವಾಗಿ ಜಪಾನಿನ ಪ್ರಧಾನ ನಗರಗಳ ನಡುವೆ ಸಂಪರ್ಕ ಕಲ್ಪಿಸುವ ಸೇವೆಯನ್ನು ಒದಗಿಸುತ್ತಿದೆ.

### 161.6.2 ವ್ಯಾಪಾರ

ಜಪಾನು ಇಂದು ವಿಶ್ವದಲ್ಲಿ ವ್ಯಾಪಾರ ಮಾಡುವ ಪ್ರಬಲ ರಾಷ್ಟ್ರಗಳಲ್ಲಿ ಪ್ರಥಮ ಸ್ಥಾನ ಪಡೆದಿದೆ. ಅದರ ಸರಕುಗಳು ಇಂದು ವಿಶ್ವದ ಎಲ್ಲ ಮಾರುಕಟ್ಟೆಗಳಲ್ಲಿ ಲಭ್ಯವಿದೆ. ಕೆನಡಾದಿಂದ ಆಸ್ಟ್ರೇಲಿಯಾ ನಡುವಿನ, ಸ್ಕ್ಯಾಂಡಿನೋವಿಯಾದಿಂದ ಮೆಡಿಟೆರೇನಿಯನ್ ನಡುವಣ, ಕೋರಿಯಾದಿಂದ ಮಧ್ಯಪ್ರಾಚ್ಯದ ನಡುವೆ, ಆಸ್ಟ್ರೇಲಿಯಾ - ನ್ಯೂಜಿಲ್ಯಾಂಡ್‌ಗಳ ನಡುವೆ ಇರುವ ದೇಶಗಳ ಜೊತೆ ಇದು ವ್ಯಾಪಾರ ಸಂಬಂಧ ಇಟ್ಟುಕೊಂಡಿದೆ. ಜಪಾನು ಅಮೆರಿಕಕ್ಕೆ ಟೆಲಿವಿಷನ್‌ಗಳನ್ನು, ಟ್ರಾನ್ಸಿಸ್ಟರ್‌ಗಳನ್ನು, ರೇಡಿಯೋಗಳನ್ನು, ಬಟ್ಟೆಯನ್ನು, ಪ್ಲೈವುಡ್ ವಸ್ತುಗಳನ್ನು ಮಾರಾಟ ಮಾಡುತ್ತಿದೆ. ಹೊಲಿಗೆ ಯಂತ್ರಗಳನ್ನು ಮತ್ತು ಪೌಂಟೆನ್ ಪೆನ್ನುಗಳನ್ನು ಪೆರು ದೇಶಕ್ಕೆ, ಆಟೋ ಮೊಬೈಲ್ಸ್ ಮತ್ತು ಯಂತ್ರೋಪಕರಣಗಳನ್ನು ಅಫಘಾನಿಸ್ಥಾನಕ್ಕೆ , ಸೂಡಾನಿಗೆ, ಸೌದಿ ಅರೆಬಿಯಾಕ್ಕೆ ಮತ್ತು ಕುವೈತ್‌ಗೆ ರಫ್ತು ಮಾಡುತ್ತಿದೆ. ಕ್ಯಾಮರಾ, ಬೈನಾಕುಲರ್ಸ್ ಆಟಿಕೆ ಸಾಮಾನುಗಳನ್ನು ಜರ್ಮನಿಗೆ ಮತ್ತು ಇಂಗ್ಲೆಂಡಿಗೆ ರವಾನಿಸುತ್ತಿದೆ. ವೈಜ್ಞಾನಿಕ ಮತ್ತು ಜವಳಿ ಸರಕುಗಳನ್ನು ರಷ್ಯಾಕ್ಕೆ, ಟ್ರಾಕ್ಟರ್ಸ್ ಮತ್ತು ಹಡಗುಗಳನ್ನು ಚೀನಾಕ್ಕೆ, ಉಕ್ಕು, ಯಂತ್ರೋಪಕರಣಗಳು, ಆಟೋಮೊಬೈಲ್ಸ್, ಸಾರಿಗೆ ವಾಹನಗಳು, ರಸಾಯನಿಕ ಗೊಬ್ಬರ ಮುಂತಾದವುಗಳನ್ನು ಆಗ್ನೇಯ ಏಷ್ಯಾಕ್ಕೆ ಜಪಾನು ಮಾರಾಟ ಮಾಡುತ್ತಿದೆ.

ಜಪಾನಿನ ಆರ್ಥಿಕ ಯಶಸ್ಸಿನ ಹಿಂದಿನ ರಹಸ್ಯವೆಂದರೆ ಅಲ್ಲಿನ ಜನರ ಕರ್ತೃತ್ವ ಶಕ್ತಿ. ಜಪಾನೀಯರು ಸಾಹಸ ಪ್ರಿಯರು, ಚೈತನ್ಯಶಾಲಿಗಳು, ವ್ಯವಹಾರ ಚತುರರು ಮತ್ತು ಅಂಸತೃಪ್ತರು. ಜಪಾನಿಯರು ಸದಾಕಾಲ ಹೊಸ ಅವಕಾಶಗಳಿಗಾಗಿ ಎದುರು ನೋಡುತ್ತಿರುತ್ತಾರೆ. ಆರ್ಥಿಕ ಸಮಸ್ಯೆಗಳ ಬಗ್ಗೆ ಅವರ ದೃಷ್ಟಿಕೋನವೆಂದರೆ ಅವುಗಳನ್ನು ಆರ್ಥಿಕ ಬೆಳವಣಿಗೆ ಮೂಲಕ ಪರಿಹರಿಸಿಕೊಳ್ಳಬಹುದು ಎಂಬುದಾಗಿದೆ. ಫಲದಿಂದ ಪಡೆಯುವ ಪಾಲಿಗಿಂತ ಜಪಾನಿಯರಿಗೆ ಫಲದ ಗಾತ್ರ ದೊಡ್ಡದಾಗುವುದು ಮುಖ್ಯ. ಜಪಾನಿಯರು ಕಷ್ಟಸಹಿಷ್ಣುಗಳು. ಆವಿಷ್ಕಾರ ಗುಣವುಳ್ಳವರು ಉಳಿತಾಯ ಮನೋಭಾವದವರು. ಹೊಸ ಉತ್ಪಾದನೆ ಮತ್ತು ಬಂಡವಾಳ ಹೂಡಿಕೆ ಸಂಬಂಧಿಸಿದ ಗಂಡಾಂತರಗಳನ್ನು ಎದುರಿಸುವ ಛಾತಿವುಳ್ಳ ಉದ್ಯಮ ಸಾಹಸಿಗಳು.

## 161.7 ಸಾಮಾಜಿಕ ಬದಲಾವಣೆ

ಸ್ವಾಧೀನ ಆಳ್ವಿಕೆ ಕಾಲಾವಧಿಯು ನಂತರ ಪಶ್ಚಿಮದ ವ್ಯಕ್ತಿವಾದ ಮತ್ತು ಪ್ರಜಾಪ್ರಭುತ್ವ ಗುಣಗಳನ್ನು ಜಪಾನಿನ ಪ್ರತಿಯೊಂದು ಕುಟುಂಬವೂ ರಕ್ತಗತ ಮಾಡಿಕೊಂಡಿತು. ಕೌಟುಂಬಿಕ ವ್ಯವಸ್ಥೆಯನ್ನು ಪ್ರಜಾಪ್ರಭುತ್ವಗೊಳಿಸುವ ಸರಣಿ ಕ್ರಮಗಳನ್ನು ಆರಂಭಿಸಲಾಯಿತು. ಜೀವನದ ಎಲ್ಲ ಕ್ಷೇತ್ರಗಳಲ್ಲೂ ಸಮಾನವಾದ ಸ್ಥಾನಮಾನ ಮಹಿಳೆಯರಿಗೆ ದೊರಕುವಂತೆ ನಾಗರಿಕ ಸಂಹಿತೆಯನ್ನು ಪರಿಷ್ಕರಿಸಲಾಯಿತು. ಕಾನೂನಿನ ಪ್ರಕಾರ ಗಂಡ ಮತ್ತು ಹೆಂಡತಿಗೆ ಸಮಾನ ಅಧಿಕಾರವಿತ್ತು. ವಿವಾಹ ಸಂಬಂಧ ಏರ್ಪಡಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇಬ್ಬರಿಗೂ ನೀಡಲಾಯಿತು. ಇಬ್ಬರೂ ಆಸ್ತಿಯ ಮಾಲಿಕರಾಗಬಹುದು. ವಿವಾಹ ವಿಚ್ಛೇದನವನ್ನು ಪಡೆದುಕೊಳ್ಳಬಹುದು. ಕುಟುಂಬ ಮಟ್ಟದಲ್ಲಿ ವ್ಯಕ್ತವಾದಿ ಗುಣಗಳಿಗೆ ಪ್ರೋತ್ಸಾಹ ನೀಡಲಾಗುತ್ತಿತ್ತು. ಸ್ವಾಧೀನ ಆಳ್ವಿಕೆಯ ನಂತರ ಜಪಾನಿನ ಮೇಲೆ ಪಶ್ಚಿಮವು ಸಾಧಿಸಿದ ಮೂಲಭೂತ ಪ್ರಭಾವವೆಂದರೆ ಕುಟುಂಬಕ್ಕೆ ಪ್ರತಿಯಾಗಿ ವ್ಯಕ್ತಿ ಸಮಾಜದ ಮೂಲ ಘಟಕವಾದುದಾಗಿದೆ. ಈ ಎಲ್ಲ ಕ್ರಮಗಳಿಂದಾಗಿ ಪ್ರಾಚೀನ ಪುರುಷ ಪ್ರಧಾನ ಕೌಟುಂಬಿಕ ವ್ಯವಸ್ಥೆ ಕಣ್ಮರೆಯಾಯಿತು.

ಈಗ ಹೆಂಡತಿಯ ಪಾತ್ರ ಗೃಹ ವಾರ್ತೆಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಆಕೆಯು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಳ್ಳಬಹುದಿತ್ತು. ಗೃಹವಾರ್ತೆಯ ಒತ್ತಡ ಕಡಿಮೆಯಾಯಿತು. ಬೇರೆ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ಮತ್ತು ಸಮಯ ದೊರೆಯಿತು. ಆಕೆಯು ನೌಕರಿ ಹಿಡಿಯಬಹುದಿತ್ತು. ಅಲ್ಲಿನ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿನ ಶೇ 47.7ರಷ್ಟು ಮಹಿಳೆಯರು, ಅಂದರೆ 220 ಲಕ್ಷ ಮಹಿಳೆಯರು 1981ರಲ್ಲಿ ದುಡಿಮೆಯಲ್ಲಿ ನಿರತರಾಗಿದ್ದರು. ಜಪಾನಿನ ಒಟ್ಟು ದುಡಿಮೆಗಾರರಲ್ಲಿ ಶೇ .38.7ರಷ್ಟು ಮಹಿಳೆಯರಿದ್ದರು. ಹೊಸ ರೀತಿಯ ಜೀವನ ಪದ್ಧತಿ ಜಪಾನಿಗೆ ಕಾಲಿಟ್ಟಿತು. ಹೊಸ ತಲೆಮಾರು ಹಳೆಯ ತಲೆಮಾರಿಗಿಂತ ಸಂಪೂರ್ಣವಾಗಿ ಭಿನ್ನವಾಗಿತ್ತು. ಈ ತಲೆಮಾರು ತುಂಬಾ ತೆರೆದ ಮನಸ್ಸಿನವರಾಗಿದ್ದರು. ಸರಳ ಜೀವನ ನಡೆಸುತ್ತಿದ್ದರು ಅವರು ಹೆಚ್ಚು ಸ್ವಾರ್ಥಿಗಳಾದರು. ಸೌಮ್ಯ ಪದ್ಧತಿ ಮರೆಯಾಯಿತು. ಯುದ್ಧ ಪೂರ್ವದ ಸಮಾಜವು ಸಂಪೂರ್ಣವಾಗಿ ಕಣ್ಮರೆಯಾದಂತೆ ಕಾಣುತ್ತಿತ್ತು.

ಸ್ವಾಧೀನ ಆಳ್ವಿಕೆಯ ತರುವಾಯು ಯಾರು ಸ್ವಂತ ಮನೆ ಕಟ್ಟಿಕೊಳ್ಳಲು ಬಯಸುತ್ತಾರೋ ಅವರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ದೀರ್ಘಾವಧಿಗೆ ನೀಡಲು ಗೃಹಸಾಲ ನೀಡುವ ಕಾರ್ಪೊರೇಶನ್ ಸ್ಥಾಪಿಸಲಾಯಿತು. ದೊಡ್ಡ ನಗರಗಳು ಮತ್ತು ಅವುಗಳ ಸುತ್ತಮುತ್ತ ಬಹುಮಹಡಿ ವಾಸದ ಮನೆಗಳನ್ನು ಕಟ್ಟುವ ಉದ್ದೇಶಕ್ಕಾಗಿ 1955ರಲ್ಲಿ ಗೃಹ ನಿರ್ಮಾಣ ಕಾರ್ಪೊರೇಶನ್ ಸ್ಥಾಪಿಸಲಾಯಿತು. ಸರ್ಕಾರವು 1966ರಲ್ಲಿ 2.7ದಶಲಕ್ಷ ವಾಸದ ಮನೆಗಳನ್ನು ಕಟ್ಟುವ ಗುರಿಯುಳ್ಳ ಐದು ವರ್ಷದ ಯೋಜನೆಯನ್ನು ರೂಪಿಸಿತು. ಅಲ್ಲಿ 1955ರಿಂದ 1975ರ ನಡುವೆ 13ದಶಲಕ್ಷ ಮನೆಗಳನ್ನು ನಿರ್ಮಿಸಲಾಯಿತು. ಇಷ್ಟಾದರೂ ನಗರಗಳಲ್ಲಿ ಮನೆಗಳ ಕೊರತೆಯ ಸಮಸ್ಯೆ ಬಗೆಹರಿಯಲಿಲ್ಲ. ನಗರ ಪ್ರದೇಶಗಳಲ್ಲಿ ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿದ್ದುದರಿಂದ ಹಾಗೂ ಕುಟುಂಬಗಳು ವಿಭಜನೆಗೆ ಒಳಗಾಗುತ್ತಿದ್ದುದರಿಂದ ನಿವೇಶನಗಳ ಬೆಲೆಗಳು ಗಗನ ಮುಟ್ಟಿದವು. ಇದು 1960ಮತ್ತು 1969ರ ನಡುವೆ ಭೂಮಿಯ ಬೆಲೆ ಶೇ.350ರಷ್ಟು ಅಧಿಕಗೊಂಡಿತು.

ಆರೋಗ್ಯವಿಮೆ, ನಿವೃತ್ತಿವಿಮೆ, ನಿರುದ್ಯೋಗ ವಿಮೆ ಮತ್ತು ಅಪಘಾತ ಪರಿಹಾರ ವಿಮೆಗಳನ್ನು ಒಳಗೊಂಡ ಸಾಮಾಜಿಕ ಭದ್ರತಾ ಕಾರ್ಯಕ್ರಮವೊಂದನ್ನು ಜಾರಿಗೊಳಿಸಲಾಯಿತು. ಹಳ್ಳಿಗಳ ಭೌಗೋಳಿಕ ಸ್ವರೂಪವು 1960ರ ನಂತರ ತೀವ್ರವಾಗಿ ಬದಲಾಗತೊಡಗಿತು. ಕಡಿಮೆ ಕೂಲಿಗೆ ಕಾರ್ಮಿಕರು ದೊರೆಯುತ್ತಿದ್ದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಸಲುವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಖಾನೆಗಳನ್ನು ಕಟ್ಟಲಾಯಿತು. ಕೈಗಾರಿಕೆ ಉದ್ಯೋಗಗಳು ವಿಸ್ತರಿಸಿದಂತೆ ಹಳೆಯ ಕಾಲದ ಸಾಮಾಜಿಕ ಸ್ವರೂಪವು ತೀವ್ರವಾಗಿ ಬದಲಾಗ ತೊಡಗಿತು. ಚಿಕ್ಕ ಮನೆಗಳಲ್ಲಿ ವಾಸಿಸುತ್ತಿದ್ದ ಗ್ರಾಮವಾಸಿಗಳು ತಮ್ಮ ಗ್ರಾಮಗಳ ಗಡಿರೇಖೆಗಳನ್ನು ಮೀರಿ ವಿಶಾಲ ನೆಲೆಯಲ್ಲಿ ಬದುಕನ್ನು ಅರಸತೊಡಗಿದರು. ಪ್ರತಿಯೊಂದು ಗೃಹದಲ್ಲಿದ್ದ ಟೆಲಿವಿಶನ್ ವಿಶ್ವವನ್ನು ಜನರೆದುರು ತೆರೆದಿಟ್ಟರು.

ಗ್ರಾಮಾಂತರ ಯುವಕ-ಯುವತಿಯರು ಪ್ರೌಢ ವಿದ್ಯಾಭ್ಯಾಸ ಮಾಡತೊಡಗಿದರು ಮತ್ತು ನಗರಗಳಲ್ಲಿ ನೌಕರಿ ಹುಡುಕತೊಡಗಿದರು. ಜಪಾನು ಮೂಲಭೂತವಾಗಿ ನಗರ ಸಂಸ್ಕೃತಿ ಸಮಾಜವಾಯಿತು.

## 161.8 ಸಾರಾಂಶ

ಜಪಾನಿನ ಚರಿತ್ರೆಯಲ್ಲಿ ಅಮೆರಿಕೆಯ ಸ್ವಾಧೀನ ಆಡಳಿತವು ಅದ್ಭುತವಾದ ಹೊಸ ಪುಟವೊಂದನ್ನು ತೆರೆಯಿತು. ಅದು ಜಾರಿಗೆ ಬಂದ ಸುಧಾರಣೆಗಳು ಅಸಾಧಾರಣವಾಗಿದ್ದವು. ಒದಗಿಬಂದ ಅದ್ಭುತ ಅವಕಾಶವನ್ನು ಜಪಾನೀಯರು ತಮ್ಮ ಕುಶಲತೆ, ಚೈತನ್ಯ, ವಿವೇಕ ಮತ್ತು ಕಷ್ಟಸಹಿಷ್ಣುತೆಗಳ ನೆರವಿನಿಂದ ಒಂದು ಮಹಾನ್ ಬದಲಾವಣೆಯ ಶಕ್ತಿಯನ್ನಾಗಿ ಪರಿವರ್ತಿಸಿಕೊಂಡು ಜಪಾನಿನ ಚರಿತ್ರೆಯಲ್ಲಿ ಮತ್ತು ವಿಶ್ವದ ಚರಿತ್ರೆಯಲ್ಲಿ ತಮ್ಮ ಛಾಪನ್ನು ಸ್ಥಾಪಿಸಿದರು.

ಸೋಲಿನ -ಅಪಜಯದ ಮೂಲ ಅರ್ಥವನ್ನು ಜಪಾನೀಯರು ಅಮೆರಿಕೆಯಿಂದ ಕಲಿತುಕೊಳ್ಳುವ ಅಗತ್ಯವಿರಲಿಲ್ಲ. ತನ್ನ ಸೀಮಿತ ಸಂಪನ್ಮೂಲಗಳ ನೆರವಿನಿಂದ ಒಂದು ಮಹಾನ್ ಮಿಲಿಟರಿ ಶಕ್ತಿಯಾಗಿ ಬೆಳೆಯುವ ಕನಸನ್ನು ಜಪಾನು ಕಾಣಲು ಸಾಧ್ಯವಿರಲಿಲ್ಲ. ಇದರಿಂದಾಗಿ ಅಲ್ಲಿನ ಮಿಲಿಟರಿ ದಂಡನಾಯಕರು ಆಕ್ರಮಣದ ಮೂಲಕ ಸಾಧಿಸಿಕೊಳ್ಳಬೇಕೆಂದು ಕನಸು ಕಂಡಿದ್ದ ಸಮೃದ್ಧತೆಯು ಕನಸಿನಂತೆಯೇ ಕರಗಿ ಹೋಯಿತು. ಒದಗಿಬಂದ ಅವಕಾಶಗಳನ್ನು ಜಪಾನೀಯರು ತಮ್ಮ ಚೈತನ್ಯ ಹಾಗೂ ಕುಶಲತೆಗಳಿಂದ ತಮ್ಮ ಲಾಭಕ್ಕೆ ಬಳಸಿಕೊಂಡರು. ಹಿಂದೆಂದೂ ಕಾಣದಂತಹ ಸಮೃದ್ಧತೆಯನ್ನು ನಿರ್ಮಿಸಲು ಅಗತ್ಯವಾದ ಅವಕಾಶಗಳು ಯುದ್ಧದ ನಂತರ ಒದಗಿಬಂದವು. ದೇಶದ ಚರಿತ್ರೆಯಲ್ಲಿ ಪವಾಡ ಸದೃಶವಾದ ಬದಲಾವಣೆಗಳನ್ನು ಅಮೆರಿಕೆಯ ನೆರವಿನಿಂದ ಸಾಧಿಸಿಕೊಳ್ಳುವುದು ಜಪಾನಿಗೆ ಸಾಧ್ಯವಾಯಿತು. ವಿಶ್ವದಲ್ಲಿ ಆರ್ಥಿಕ ವಿಷಯದಲ್ಲಿ ಜಪಾನು ಅತೀವ ಆಸಕ್ತಿ ತೋರಿತು. ಜಪಾನು ಅಭಿವೃದ್ಧಿ ಮತ್ತು ಸಮೃದ್ಧತೆಯನ್ನು ಸಾಧಿಸಿಕೊಳ್ಳಲು ಒದಗಿಬಂದ ಯಾವುದೇ ಅವಕಾಶಗಳನ್ನು ಬಿಟ್ಟುಕೊಡಲಿಲ್ಲ.

## 161.9 ಸ್ವಯಂ ಪ್ರಗತಿ ಪರೀಕ್ಷೆ

**I. ಲಘು ಟಿಪ್ಪಣಿ ಬರೆಯಿರಿ**

ಅ. ಯೋಶಿಡ

ಆ. ಜಪಾನೀಸ್ ನ್ಯಾಷನಲ್ ರೈಲ್ವೇಸ್

ಇ. ಮಿಟ್ಸುಬಿಷಿ

**II. ಪ್ರತಿಯೊಂದಕ್ಕು ಎರಡು ಪುಟಗಳಲ್ಲಿ ಉತ್ತರಿಸಿ**

ಅ. ಜಪಾನಿನಲ್ಲಿ 1952ರಿಂದ ಉಂಟಾದ ಆಂತರಿಕೆ ಬೆಳವಣಿಗೆಗಳನ್ನು ವಿವರಿಸಿ.

ಆ. ಜಪಾನಿನ 1952ರ ನಂತರದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ವಿವರಿಸಿ.

## 161.10 ಹೆಚ್ಚಿನ ಓದಿಗೆ ಗ್ರಂಥಗಳು


ಸ್ಟೋರ್ನಿ : ಹಿಸ್ಟರಿ ಆಫ್ ಮಾರ್ಡನ್ ಜಪಾನ್

ವಿಲಿಯಮ್ ಬೇರಿ : ಮಾರ್ಡನ್ ಜಪಾನ್

ರಿಚರ್ಡ್ ಸ್ಟೋರಿ : ಎ ಹಿಸ್ಟರಿ ಆಫ್ ಮಾರ್ಡನ್ ಜಪಾನ್

ಲಟೋರೆಟ್ಟೆ .ಕೆ.ಎನ್ : ದಿ ಹಿಸ್ಟರಿ ಆಫ್ ಜಪಾನ್.

# ಘಟಕ - 162

## 1952 ರ ನಂತರ ಜಪಾನಿನ ವಿದೇಶಾಂಗ ನೀತಿ

*ರಚನೆ*


162.0 ಉದ್ದೇಶಗಳು

162.1 ಪ್ರಸ್ತಾವನೆ

162.2 ಜಪಾನಿನ ವಿದೇಶಾಂಗ ನೀತಿಯ ಅಸಂದಿಗ್ಧತೆ

162.3 ಅಮೆರಿಕೆಯ ಜೊತೆ ಜಪಾನಿನ ಸಂಬಂಧ

162.4 ಸೊವಿಯಟ್ ರಷ್ಯಾ ಮತ್ತು ಕಮ್ಯುನಿಸ್ಟ್ ಚೀನಾಗಳಿಗೆ ಸಂಬಂಧಿಸಿದಂತೆ ಜಪಾನಿನ ಧೋರಣೆ.

162.5 ಏಷ್ಯಾ ದೇಶಗಳಿಗೆ ಸಂಬಂಧಿಸಿದಂತೆ ಜಪಾನಿನ ನೀತಿ.

162.6 ವಿಶ್ವ ಸಮುದಾಯದ ಅವಿಭಾಜ್ಯ ಅಂಗವಾಗಿ ಜಪಾನಿಗೆ ಸ್ಥಾನವು ಮರು ಪ್ರಾಪ್ತಿಯಾದುದು.

162.7 ಆರ್ಥಿಕ ವ್ಯವಹಾರದ ರಾಜಕಾರಣ

162.8 ಆಧುನಿಕ ಜಪಾನ್

162.9 ಸಾರಾಂಶ

162.10 ಸ್ವಯಂ ಪ್ರಗತಿ ಪರೀಕ್ಷೆ

162.11 ಹೆಚ್ಚಿನ ಓದಿಗೆ ಗ್ರಂಥಗಳು

## 162.0 ಉದ್ದೇಶಗಳು

ಸ್ಯಾನ್ ಫ್ರಾನ್ಸಿಸ್ಕೋನ 1951-52ರ ಶಾಂತಿ ಒಪ್ಪಂದದ ತರುವಾಯ ಜಪಾನು ಪಾಲಿಸಿಕೊಂಡು ಬಂದ ವಿದೇಶಾಂಗ ನೀತಿಯ ಮಹತ್ವವನ್ನು ಕುರಿತು ಪ್ರಸ್ತುತ ವಿಭಾಗದಲ್ಲಿ ಚರ್ಚೆ ಮಾಡಲಾಗುವುದು. ಈ ವಿಭಾಗದ ಅಧ್ಯಯನದ ನಂತರ ಕೆಳಕಂಡ ವಿಷಯದಲ್ಲಿ ತಮಗೆ ವಿವರ ತಿಳಿದಿರುತ್ತದೆ.

ಕಮ್ಯುನಿಷ್ಟ್ ವಿರೋಧಿ ಬಣವನ್ನು ಸೇರಬೇಕೋ ಅಥವಾ ತಟಸ್ಥವಾಗಿರಬೇಕೋ ಎಂಬ ಅಂಸದಿಗ್ಧತೆ. ಜಪಾನು ಮತ್ತು ಅಮೆರಿಕಾ ನಡುವಣ ಸಂಬಂಧ ವಿಶ್ವ ಸಮುದಾಯದಲ್ಲಿ ಅವಿಭಾಜ್ಯ ಅಂಗವಾಗಿ ಜಪಾನಿಗೆ ಸ್ಥಾನ ಲಭ್ಯವಾದದ್ದು. ಸೋವಿಯಟ್ ರಷ್ಯಾ ಮತ್ತು ಕಮ್ಯುನಿಷ್ಟ್ ಚೀನಾಗಳ ಜೊತೆ ಜಪಾನಿನ ಹೊಸ ಒಡಂಬಡಿಕೆ.

ಏಷ್ಯಾದಲ್ಲಿ ಪ್ರಬಲ ರಾಷ್ಟ್ರವಾಗಿ ಜಪಾನು ಒಡಮೂಡಿದ್ದು.

## 162.1 ಪ್ರಸ್ತಾವನೆ

1952ರ ನಂತರ ಅಮೆರಿಕೆಯ ಜೊತೆ ಸ್ನೇಹ ಹಾಗೂ ಸಹಕಾರಗಳು ಜಪಾನಿನ ವಿದೇಶಾಂಗ ನೀತಿಯ ಬುನಾದಿಯಾಯಿತು. 'ಅಮೆರಿಕಾ-ಜಪಾನು ಪರಸ್ಪರ ರಕ್ಷಣೆ' ಯೆಂಬ ಒಡಂಬಡಿಕೆ ಮೂಲಕ ಅವೆರಡೂ ದೇಶಗಳು ಮೈತ್ರಿ ಸಾಧಿಸಿಕೊಂಡವು. 'ಅಮೆರಿಕಾ ಜಪಾನು ಪರಸ್ಪರ ರಕ್ಷಣೆ' ಒಪ್ಪಂದವನ್ನು ಮೊದಲು 1951ರಲ್ಲಿ ಮಾಡಿಕೊಳ್ಳಲಾಯಿತು. ಅದನ್ನು 1960ರಲ್ಲಿ ನವೀಕರಿಸಲಾಯಿತು.

ಚೀನಾದಲ್ಲಿ ಅಕ್ಟೋಬರ್ 1949ರಲ್ಲಿ ಕಮ್ಯುನಿಸ್ಟ್ ಸರ್ಕಾರ ಅಧಿಕಾರಕ್ಕೆ ಬಂದದ್ದು, ಜಪಾನಿನಲ್ಲಿ ಕಮ್ಯುನಿಷ್ಟ್ ಪಾರ್ಟಿ ಅಸ್ತಿತ್ವಕ್ಕೆ ಬಂದುದು, ಚೀನಾ ಮತ್ತು ಸೊವಿಯಟ್ ರಷ್ಯಾ ನಡುವೆ ಮೈತ್ರಿ ಒಪ್ಪಂದ ಏರ್ಪಟ್ಟಿದ್ದು ಮತ್ತು 1950ರಲ್ಲಿ ಕೊರಿಯಾ ಯುದ್ಧ ಆರಂಭಗೊಂಡಿದ್ದು- ಮುಂತಾದವು ಜಪಾನೀಯರ ಮನಸ್ಸಿನಲ್ಲಿ ಅಸಂದಿಗ್ಧತೆಯನ್ನು, ಅಭದ್ರತೆ ಭಾವನೆಯನ್ನು ಮತ್ತು ಆತಂಕವನ್ನು ಮೂಡಿಸಿದವು. ಏಷ್ಯಾಖಂಡದಲ್ಲಿ ಜಪಾನು ಒಂಟಿಯಾದುದರಿಂದ ಅಭದ್ರತೆ ಭಾವನೆ ಉಲ್ಬಣಗೊಂಡಿತು. ರಾಷ್ಟ್ರೀಯ ಅಭದ್ರತೆ ಹಾಗೂ ಏಕಾಕಿತನಗಳು ಜಪಾನು ಅನಿವಾರ್ಯವಾಗಿ ಅಮೆರಿಕೆಯ ಜೊತೆ ಮೈತ್ರಿ ಸಂಧಾನ ನಡೆಸುವಂತೆ ಮಾಡಿದವು. ಅಮೆರಿಕೆಯ ಜೊತೆ ರಕ್ಷಣಾ ಒಪ್ಪಂದ ಮಾಡಿಕೊಂಡ ಮೇಲೆ ಜಪಾನು ವಿಶ್ವರಾಜಕಾರಣದಿಂದ ಹಿಂದೆ ಸರಿಯಿತು. ತನ್ನೆಲ್ಲ ಸಂಪನ್ಮೂಲ -ಶಕ್ತಿ-ಶ್ರಮಗಳನ್ನೆಲ್ಲ ಅದು ಆರ್ಥಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ಪುನರ್ ನಿರ್ಮಾಣಕ್ಕೆ ಮೀಸಲಿಟ್ಟಿತು. ತನ್ನ ಸ್ಥಾನಮಾನ ಹಾಗೂ ಸ್ಥಿತಿಗತಿಗಳು ದುರ್ಬಲವಾಗಿದ್ದುದರಿಂದ ಅದು ಅಮೆರಿಕೆಯನ್ನು ಅನುಸರಿಸುವುದರಲ್ಲಿ ತೃಪ್ತಿ ಕಂಡುಕೊಂಡಿತು. ರಾಷ್ಟ್ರೀಯ ಪುನರ್ ನಿರ್ಮಾಣದ ಪ್ರಕ್ರಿಯೆಯಲ್ಲಿ ಅದು ಆರ್ಥಿಕ ಸಂಪತ್ತನ್ನು, ಶಕ್ತಿಯನ್ನು, ತಾಂತ್ರಿಕ ಕುಶಲತೆಯನ್ನುಗಳಿಸಿಕೊಂಡಿತು. ಇವುಗಳೆಲ್ಲವೂ ಅದಕ್ಕೆ ಹೆಚ್ಚಿನ ರಾಷ್ಟ್ರೀಯ ಆತ್ಮ ಭರವಸೆ ನೀಡಿದವು. ಇವುಗಳೆಲ್ಲವೂ ಆರ್ಥಿಕ-ಅಭಿವೃದ್ಧಿಗೆ ಕಾಣಿಗೆ ನೀಡಿದವು. ಜಪಾನು ಒಂದು ಶಕ್ತಿಶಾಲಿ ರಾಷ್ಟ್ರವಾಗಿ ರೂಪುಗೊಂಡಿತು. ಚೀನಾ-ಸೊವಿಯಟ್ ರಷ್ಯಾ ಬಣದ ವಿರುದ್ಧ ಮೈತ್ರಿ ಮಾಡಿಕೊಂಡಿದ್ದ ಯುರೋಪಿನ ಪಾಶ್ಚಿಮಾತ್ಯ ದೇಶಗಳೆಲ್ಲವೂ ಈಗ ಜಪಾನನ್ನು ಅಮೆರಿಕೆಯ ಕೈಗೊಂಬೆಯೆಂದು ನೋಡುವ ಧೋರಣೆಯನ್ನು ಕೈಬಿಟ್ಟವು. ಜಪಾನನ್ನು ತಮ್ಮ ಸಮಾನ ನೆಲೆಯಲ್ಲಿ ಪರಿಭಾವಿಸತೊಡಗಿದವು. ಜಪಾನಿನ ಆರ್ಥಿಕ ಅಭಿವೃದ್ಧಿಯನ್ನು ಪರಿಗಣಿಸಿ ವಿಶ್ವದ ಶ್ರೀಮಂತ ರಾಷ್ಟ್ರಗಳ ಕೂಟವಾಗಿದ್ದ 'ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ' ಸಂಘಟನೆಯೊಳಗೆ ಜಪಾನಿಗೆ ಅಂತಿಮವಾಗಿ ಪ್ರವೇಶ ನೀಡಲಾಯಿತು.

## 162.2 ಜಪಾನಿನ ವಿದೇಶಾಂಗ ನೀತಿಯಲ್ಲಿನ ಅಸಂದಿಗ್ಧತೆ

ಜಪಾನಿನ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ 1952ರಿಂದ ಅನುಭವಿಸುತ್ತಿದ್ದ ಅಸಂದಿಗ್ಧಭವಿಸುತ್ತಿದ್ದ ಅಂಸದಿಗ್ಧತೆಯೆಂದರೆ ಕಮ್ಯುನಿಷ್ಟ್ ವಿರೋಧಿ ಬಣವನ್ನು ಸೇರಬೇಕೋ ಅಥವಾ ಸೇರಬಾರದೋ ಎಂಬುದಾಗಿತ್ತು. ವಿದೇಶಿ ವ್ಯಾಪಾರದ ಮೇಲಿನ ಜಪಾನಿನ

ವಿಪರೀತ ಅವಲಂಬನೆಯು ಅಸಂದಿಗ್ಧತೆಯನ್ನು ಮತ್ತುಷ್ಟು ಗಂಭೀರಗೊಳಿಸಿತು. ಅದು ಕಮ್ಯುನಿಷ್ಟ್ ಚೀನಾ ಮತ್ತು ಸೊವಿಯಟ್ ರಷ್ಯಾಗಳಿಗೆ ಅತ್ಯಂತ ಸನಿಹದಲ್ಲಿ ನೆಲೆಗೊಂಡಿತ್ತು. ಇದೂ ಅಸಂದಿಗ್ಧತೆಯ ತೀವ್ರತೆಗೆ ಮತ್ತೊಂದು ಕಾರಣವಾಗಿತ್ತು. ಸೊವಿಯಟ್ ರಷ್ಯಾ ಮತ್ತು ಕಮ್ಯುನಿಷ್ಟ್ ಚೀನಾಗಳ ಬೆದರಿಕೆಯಿದ್ದರೂ ಜಪಾನೀ ಸರ್ಕಾರವು 1952ರಿಂದ ತನ್ನ ಬೆಂಬಲವನ್ನು ಕಮ್ಯುನಿಷ್ಟ್ ವಿರೋಧಿ ಬಣಕ್ಕೆ ಮುಂದುವರಿಸಿತು. ಚೀನಾ ಮತ್ತು ಜಪಾನುಗಳ ನಡುವಣ ಯುದ್ಧದ ಕಹಿ ನೆನಪುಗಳನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಆರಂಭದಲ್ಲಿ ಶೀತಲ ಸಮರದ ಹಿನ್ನೆಲೆಯಲ್ಲಿ ರಷ್ಯಾ ಸಹ ಜಪಾನಿಗೆ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಇಷ್ಟಾದರೂ ಜಪಾನು ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ತಟಸ್ಥ ನೀತಿಯನ್ನು ಪಾಲಿಸುವ ಅಲಿಪ್ತ ರಾಷ್ಟ್ರಗಳ ಕೂಟ ಸೇರಲಿಲ್ಲ. ಅಮೆರಿಕೆಯ ಕೂಟದಲ್ಲಿ ಮುಂದುವರಿಯುವುದರಿಂದ ತನ್ನ ರಾಷ್ಟ್ರೀಯ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುವುದು ಸುಲಭವೆಂದು ಜಪಾನು ಭಾವಿಸಿತು. ಹೀಗೆ 1952ರ ನಂತರ ಜಪಾನು ಅಮೆರಿಕೆಯ ಮಿತ್ರ ರಾಷ್ಟ್ರವಾಗಿ ಮುಂದುವರಿಯಿತು.

ಜಪಾನಿನಲ್ಲಿ ಅದರ ವಿದೇಶಾಂಗ ನೀತಿಯ ಬಗ್ಗೆ ಭಿನ್ನವಿಚಾರಗಳು ವ್ಯಕ್ತವಾಗುತ್ತಿದ್ದವು. ಒಕಿನಾವದಲ್ಲಿನ ಅಮೆರಿಕೆಯ ಪಡೆಗಳ ನೆಲೆಗಳಿಂದ ಜಪಾನಿಗೆ ರಕ್ಷಣೆ ದೊರೆಯುವುದಕ್ಕೆ ಪ್ರತಿಯಾಗಿ ಮುಂದೆ ಸಂಭವಿಸಬಹುದಾದ ಯುದ್ಧದಲ್ಲಿ ಜಪಾನಿನ ಭಾಗವಹಿಸುವಿಕೆಯನ್ನು ಅದು ದೃಢ ಪಡಿಸುತ್ತಿದೆ ಎಂದು ಅನೇಕರು ಭಾವಿಸಿದ್ದರು. ಜಾಗತಿಕ ಮಟ್ಟದಲ್ಲಿ ಮಿಲಿಟರಿಗೆ ಸಂಬಂಧಿಸಿದಂತೆ ಸಮಾನತೆಯು ಅಸಾಧ್ಯವಾಗಿತ್ತು.- ಅಂತಹ ಮಿಲಿಟರಿ ಸಮಾನತೆಯ ಪ್ರಯತ್ನಗಳು ಕೇವಲ ಅದರ ಮೇಲೆ ಆಕ್ರಮಣಕ್ಕೆ ದಾರಿ ಮಾಡಿಕೊಡಬಹುದಿತ್ತು. ಇದರಿಂದಾಗಿ ಜಪಾನು ತಟಸ್ಥವಾಗಿದ್ದರೆ ಶಾಂತಿಯನ್ನು ಕಾಪಾಡಬಹುದೆಂದು ತಿಳಿದಿತ್ತು. ಅತ್ಯಂತ ಎಚ್ಚರಿಕೆಯಿಂದ ಅದು ಕಮ್ಯುನಿಸ್ಟ್ ಪರವಾದ ಕೂಟದಲ್ಲಿ ಸೇರಬೇಕೆಂಬ ವಿಚಾರವೂ ಪ್ರಚುರದಲ್ಲಿತ್ತು. ಯುದ್ಧಾ ನಂತರ ಸೌಮ್ಯವಾದಿ ವಿಚಾರಗಳ ನೆಲೆಯಿಂದ ಬಂದ ಇಂತಹ ಭಾವನೆಗಳು ಕಮ್ಯುನಿಸ್ಟ್ ಕೂಟದ ಪರವಾಗಿದ್ದವು.

ಇಷ್ಟಾದರೂ ಜಪಾನು ನ್ಯಾಟೊ ಕೂಟವನ್ನು ಸೇರಲಿಲ್ಲ (ಎನ್‌ಎಟಿಒ) ಕಮ್ಯುನಿಸ್ಟ್‌ರ ಅಪಾಯದಿಂದ ಜನರು ಆತಂಕಿತರಾಗಿದ್ದರು. ಇದರಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಎರಡು ಗುಂಪುಗಳಾಗಿದ್ದವು. ಜಪಾನಿನ ವಿದೇಶಾಂಗ ನೀತಿಯು ಕಮ್ಯುನಿಸ್ಟ್ ಪರವಾಗಿದೆಯೆಂದು ತಾಟಸ್ಥ ನೀತಿ ತಳೆದ ದೇಶಗಳೂ ಭಾವಿಸಿದರೆ ಕಮ್ಯುನಿಸ್ಟ್ ವಿರೋಧಿಗಳು ಅದು ತಾಟಸ್ಥ ನೀತಿ ಅನುಸರಿಸುತ್ತಿದೆಯೆಂದು ಭಾವಿಸಿದರು. ಎರಡೂ ಗುಂಪುಗಳು ಜಪಾನಿನ ಪ್ರಾಮಾಣಿಕತೆಯನ್ನು ಮತ್ತು ತಾತ್ಪೂರ್ತಿಕತೆಯನ್ನು ಅನುಮಾನದಿಂದ ನೋಡುತ್ತಿದ್ದವು.

## 162.3 ಅಮೆರಿಕೆಯ ಜೊತೆ ಜಪಾನಿನ ಸಂಬಂಧಗಳು

ಜಪಾನಿನ ರಾಜಕಾರಣದಲ್ಲಿ ಸ್ವಾಧೀನ ಆಡಳಿತದ ಅಂತ್ಯದ ನಂತರ ತುಂಬಾ ಕಾಡುತ್ತಿದ್ದ ವಿಚಾರವೆಂದರೆ ಅಮೆರಿಕೆಯ ಜೊತೆಗಿನ ಅದರ ಸಂಬಂಧ. ಜಪಾನಿನ ಸೈನ್ಯದ ಗಾತ್ರವನ್ನು ಕಡಿತಗೊಳಿಸಲಾಯಿತು. ಕೃಷಿಯ ಅಭಿವೃದ್ಧಿಗೆ, ವಿದ್ಯುತ್ ಶಕ್ತಿಯ ಉತ್ಪಾದನೆಗೆ ಮತ್ತು ಕೈಗಾರಿಕಾ ಘಟಕಗಳ ನಿರ್ಮಾಣಕ್ಕೆ ಹಾಗೂ ಅವುಗಳ ಆಧುನೀಕರಣಕ್ಕೆ ಅಮೆರಿಕೆಯ ನೆರವು ಹರಿದು ಬರುತ್ತಿತ್ತು. ಮಿತ್ರಪಡೆಗಳ ಮಹಾದಂಡಾಧಿಕಾರಿ ಆಡಳಿತ ಕೊನೆಗೊಂಡ ಮೇಲೆ ಪ್ರಗತಿಯು ಕ್ಷಿಪ್ರ ಗತಿಯಲ್ಲಿ ಮುಂದುವರಿಯಿತು. ಉತ್ತಮವಾದ ಮೀನುಗಾರಿಕೆ ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಯಿತು. ಅಮೆರಿಕೆಯ ಪ್ರಯತ್ನದಿಂದಾಗಿ ಜಪಾನು 1956ರಲ್ಲಿ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಯಿತು. ಮುಂದೆ 1958ರಲ್ಲಿ ಅದಕ್ಕೆ ಭದ್ರತಾ ಸಮಿತಿಯಲ್ಲಿ ಸ್ಥಾನ ನೀಡಲಾಯಿತು. ಈ ಬಗ್ಗೆ ಬೀಸಿಲೆ, ಡಬ್ಲ್ಯು.ಜಿ ಅವರು ಹೀಗೆ ಬರೆಯುತ್ತಾರೆ.

"ಅಮೆರಿಕೆಯ ಜೊತೆಗಿನ ಮೈತ್ರಿಯು ಅತ್ಯಗತ್ಯವೆಂದೂ ಮತ್ತು ಅದರಿಂದ ಜಪಾನಿಗೆ ಲಾಭವಿದೆಯೆಂದು ಬಹುಸಂಖ್ಯಾತರು ಭಾವಿಸಿದ್ದರು. ಸ್ವಾಧೀನ ಆಡಳಿತದ ಮಾನವೀಯ ಕ್ರಮ ಹಾಗೂ ಪುನರ್ ನಿರ್ಮಾಣಕ್ಕೆ ನೀಡುತ್ತಿದ್ದ ರಚನಾತ್ಮಕ ನೆರವಿನಿಂದ ಅವರ ಇಂತಹ ಭಾವನೆ ಮತ್ತಷ್ಟು ಗಟ್ಟಿಯಾಯಿತು."

ಮುಂದೆ ಜಪಾನು ಮತ್ತು ಅಮೇರಿಕಾ ನಡುವಣ ಸಂಬಂಧ ಹದಗೆಟ್ಟಿತು. ಅದು ಕೆಲವೊಮ್ಮೆ ಗಂಭೀರ ಸ್ಥಿತಿಯನ್ನು ತಲುಪಿತು. ಒಕಿನಾವದ ಮೇಲಿನ ಅಮೇರಿಕೆಯ ನಿಯಂತ್ರಣ, ಜಪಾನಿನಲ್ಲಿ ಅಮೇರಿಕೆಯ ಸೇನೆಯ ನೆಲೆ, 1960ರಲ್ಲಿನ ರಕ್ಷಣಾ ಒಪ್ಪಂಧದ ಮುಂದುವರಿಕೆಗೆ ಸಹಿ, ಅಮೇರಿಕೆಯ ಅಣುಬಾಂಬಿನ ಪರೀಕ್ಷಾ ಸ್ಫೋಟ ಮುಂತಾದವು ಜಪಾನಿಗೆ ಆತಂಕ ಉಂಟು ಮಾಡಿದ್ದವು. ಇವೆರಡೂ ದೇಶಗಳ ನಡುವಿನ ಶೀತಲ ಸಮರದ ಸೂಚನೆಗಳು ನಿಧಾನವಾಗಿ ಕಾಣತೊಡಗಿದವು. ಇಷ್ಟಾದರೂ ಜಪಾನು 1970 ರಲ್ಲಿ ಅಮೇರಿಕೆಯ ಜೊತೆಗಿನ ರಕ್ಷಣಾ ಒಪ್ಪಂದಕ್ಕೆ ಮತ್ತೊಮ್ಮೆ ಸಹಿ ಹಾಕಿತು ಮತ್ತು ಏಷ್ಯಾ ಮತ್ತು ಯುರೋಪಿನ ದೇಶಗಳೊಂದಿಗೆ ತನ್ನ ಸೌಹಾರ್ದಯುತ ಸಂಬಂಧಗಳನ್ನು ಮುಂದುವರಿಸಿತು.

## 162.4 ಕಮ್ಯುನಿಸ್ಟ್ ಚೀನಾ ಮತ್ತು ಸೋವಿಯಟ್ ರಷ್ಯಾಗಳ ಜೊತೆ ಜಪಾನಿನ ಸಂಬಂಧ

ಆರಂಭದಿಂದಲೂ ಜಪಾನಿನ ಅಮೇರಿಕಾ ಪರವಾದ ವಿದೇಶಿ ವ್ಯವಹಾರಗಳ ಧೋರಣೆಯನ್ನು ರಷ್ಯಾ ಖಂಡಿಸುವ ಪ್ರಯತ್ನ ಮಾಡಲಿಲ್ಲ. ಮುಂದೆ ಸಂಬಂಧಗಳು ಉತ್ತಮಗೊಳ್ಳಬಹುದು ಎಂಬ ನಿರೀಕ್ಷೆಯಲ್ಲಿ ಅದು ತೆರೆದ ನೀತಿಯನ್ನು ಅನುಸರಿಸಿತು. ಜಪಾನಿನ ಔದ್ಯಮಿಕ ಬಗ್ಗೆ, ಕಾರ್ಮಿಕರ ಕುಶಲತೆ ಬಗ್ಗೆ ಮತ್ತು ಅದರ ತಾಂತ್ರಿಕ ಜ್ಞಾನದ ಬಗ್ಗೆ ರಷ್ಯಾಕ್ಕೆ ಅಭಿಮಾನವಿತ್ತು. ಸೈಬೀರಿಯಾದ ಅಭಿವೃದ್ಧಿಗಾಗಿ ಜಪಾನಿನ ತಾಂತ್ರಿಕ ಹಾಗೂ ಹಣಕಾಸು ನೆರವನ್ನು ಪಡೆಯಲು ರಷ್ಯಾ ಕಾತುರದಿಂದಿತ್ತು. ಉತ್ತರದ ದ್ವೀಪಗಳಿಗೆ ಸಂಬಂಧಿಸಿದ ಭೂ ಪ್ರದೇಶದ ಗಡಿ ವಿವಾದ ಕೊನೆಯಾಗುವವರೆಗೆ ಜಪಾನು ಮತ್ತು ಸೋವಿಯಟ್ ರಷ್ಯಾ ನಡುವಣ ಸಂಬಂಧ ಉತ್ತಮಗೊಳ್ಳುವುದು ಸಾಧ್ಯವಿರಲಿಲ್ಲ. ಆದರೆ 1978ರಲ್ಲಿ ಜಪಾನು ಮತ್ತು ರಷ್ಯಾ ನಡುವಣ ಸಂಬಂಧವು ಹೊಸ ಮಜಲನ್ನು ತಲುಪಿತು. ಆ ವರ್ಷ ಚೀನಾದ ಉಪಪ್ರಧಾನಿ ತೆಂಗ್ ಹೊಸೈಯೋಪಿಂಗ್ ನೀಡಿದ ಜಪಾನಿನ ಭೇಟಿ ಚಾರಿತ್ರಿಕವಾಗಿತ್ತು. ಇವೆರಡೂ ದೇಶಗಳ ನಡುವಣ ಸಂಬಂಧ ಕುರಿತಂತೆ ಹೊಸ ಶಕೆಗೆ ಅಂದು ನಾಂದಿ ಹಾಡಿತು. ಇವೆರಡೂ ದೇಶಗಳ ನಡುವೆ ಸಾಂಸ್ಕೃತಿಕವಾಗಿ ಅನೇಕ ಬಗೆಯ ಸಂಬಂಧಗಳಿದ್ದರೂ ಹಳದಿ ಸಮುದ್ರಕ್ಕೆ ಸಂಬಂಧಿಸಿದ ವಿವಾದವು ಅವೆರಡೂ ದೇಶಗಳನ್ನೂ ದೂರವಿಟ್ಟಿತ್ತು. ಮಿಲಿಟರಿ ದುಸ್ಸಾಹಸ, ಕಚ್ಚಾ ಸಾಮಗ್ರಿಯ ಹೊಸ ಮೂಲಗಳು ಶೋಧನೆ, 1930ರ ದಶಕದಿಂದ ಉಂಟಾಗಿದ್ದ ಜನಸಂಖ್ಯೆಯ ಅತಿಯಾದ ಬೆಳವಣಿಗೆ ಮುಂತಾದ ಕಾರಣಗಳಿಂದಾಗಿ ಜಪಾನು ಮಂಚೂರಿಯಾದ ಮೇಲೆ ಆಕ್ರಮಣ ಮಾಡಿತು. ಚೀನಾದಲ್ಲಿ ಕಮ್ಯುನಿಸ್ಟ್ ಸರ್ಕಾರವು ಅಧಿಕಾರಕ್ಕೆ ಬಂದ ಕಾರಣದಿಂದಾಗಿ ಮತ್ತು ಅಮೇರಿಕೆಯ ಮೈತ್ರಿ ಕೂಟದಲ್ಲಿ ಜಪಾನಿಗೆ ಸ್ಥಾನ ದೊರೆತ ಕಾರಣದಿಂದಾಗಿ ಜಪಾನು ಅತ್ಯಂತ ಸೌಮ್ಯ ರೀತಿಯ ನೀತಿಯನ್ನು ಚೀನಾದ ಬಗ್ಗೆ ಅನುಸರಿಸತೊಡಗಿತು. ಅಮೇರಿಕೆಯ ಅಧ್ಯಕ್ಷ ನಿಕ್ಸನ್ 1972ರಲ್ಲಿ ಜಪಾನಿನ ಜೊತೆ ವಿಚಾರ ವಿನಿಮಯ ಮಾಡದೆ ಪೀಕಿಂಗ್‌ಗೆ ಭೇಟಿ ನೀಡಿದನು. ಇದು ಜಪಾನಿನ ಸ್ವಾಭಿಮಾನಕ್ಕೆ ದೊಡ್ಡ ಪೆಟ್ಟು ನೀಡಿತು. ಚೀನಾದ ಜೊತೆ ತನ್ನ ಸಂಬಂಧವನ್ನು ಸುಧಾರಿಸಿಕೊಳ್ಳಲು ಇದು ಅನುವು ಮಾಡಿಕೊಟ್ಟಿತು. ನಿಕ್ಸನ್ ಭೇಟಿ ನೀಡಿದ ಕೆಲವು ಸಮಯದ ನಂತರ ಜಪಾನಿನ ಪ್ರಧಾನ ಮಂತ್ರಿ ತೌನುರಾ ಕೂಡ ಪೀಕಿಂಗ್‌ಗೆ ಭೇಟಿ ನೀಡಿದನು. ಇದರಿಂದಾಗಿ ರಾಜತಾಂತ್ರಿಕ ಸಂಬಂಧಗಳ ಸುಧಾರಣೆಗೆ ಅಡಿಪಾಯ ಸಿದ್ಧವಾದಂತಾಯಿತು.

ಚೀನಾ ಮತ್ತು ಜಪಾನುಗಳ ನಡುವಣ ಶಾಂತಿ ಮತ್ತು ಮೈತ್ರಿ ಒಪ್ಪಂದಕ್ಕೆ ಪೀಕಿಂಗ್‌ನಲ್ಲಿ ಆಗಸ್ಟ್ 1978ರಲ್ಲಿ ಸಹಿ ಹಾಕಲಾಯಿತು. ಮೈತ್ರಿ ಸಾಧಿಸಿಕೊಳ್ಳಬೇಕೆಂಬ ಚೀನಾದ ಪ್ರಯತ್ನದಿಂದಾಗಿ ಮತ್ತು ಸೋವಿಯಟ್ ರಷ್ಯಾದ ಜೊತೆ ಸಂಬಂಧ ಕೆಟ್ಟರೂ ಪರವಾಗಿಲ್ಲವೆಂಬ ಚೀನಾದ ಧೋರಣೆಯಿಂದಾಗಿ ಇಂತಹ ಒಪ್ಪಂದ ಸಾಧ್ಯವಾಯಿತು. ಚೀನಾ-ಜಪಾನು ಒಪ್ಪಂದದಲ್ಲಿ ಯಜಮಾನ್ಯ ವಿರೋಧಿ ನಿಬಂಧನೆಯಿತ್ತು. ಈ ಒಪ್ಪಂದವು ಸೋವಿಯಟ್ ರಷ್ಯಾ ವಿರೋಧಿಯಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಲು ಟೋಕಿಯೋ ಪ್ರಯತ್ನಿಸಿತು. ಎಲ್ಲ ದೇಶಗಳ ಜೊತೆ ಸೌಹಾರ್ದಯುತ ಸಂಬಂಧವಿಟ್ಟುಕೊಳ್ಳುವುದೇ ತನ್ನ ವಿದೇಶಾಂಗ ನೀತಿಯ ಉದ್ದೇಶವೆಂಬುದನ್ನು ಜಪಾನು ಸಾರಿ ಹೇಳತೊಡಗಿತು. ಚೀನಾದ ಜೊತೆಗಿನ ಒಪ್ಪಂದದ ನಂತರ ಜಪಾನು ರಷ್ಯಾದ ಜೊತೆ ದ್ವಿಪಕ್ಷಿಯ ವ್ಯಾಪಾರ ಕುರಿತಂತೆ ಉನ್ನತ ಮಟ್ಟದಲ್ಲಿ ಆರಂಭಿಸಿತು. ಇದಕ್ಕೆ ಸೋವಿಯಟ್ ರಷ್ಯಾದಿಂದ ಪ್ರೋತ್ಸಾಹದಾಯಕ ಪ್ರತಿಕ್ರಿಯೆ ಬಂದಿತು. ಈ ಇವೆರಡೂ ದೇಶಗಳ ನಡುವಣ ಸಂಬಂಧದಲ್ಲಿ ಯಾವುದೇ ತಂಟೆ-ತಕರಾರುಗಳಿರಲಿಲ್ಲ. ಇವೆರಡೂ ದೇಶಗಳ ಸಂಬಂಧವು ಹೊಸ

ಅಧ್ಯಾಯವನ್ನು ಪ್ರವೇಶಿಸಿತು. ಜಪಾನು 19ನೆಯ ಶತಮಾನದಲ್ಲಿ ಫಾರ್ಮೋಸಾ (ಥೈವಾನ್)ದ ಮೇಲೆ ನಡೆಸಿದ ಆಕ್ರಮಣದ ಕಾಲದಿಂದಲೂ ಉಂಟಾಗಿದ್ದ ಘರ್ಷಣೆ ಮತ್ತು ವಿರೋಧದ ಭಾವನೆ ಈಗ ಕಣ್ಮರೆಯಾದವು. ಇವೆರಡೂ ದೇಶಗಳ ನಡುವಿನ ಸಂಬಂಧವು ವಿಶ್ವದಲ್ಲಿ ಎಂದೆಂದೂ ನಿರೀಕ್ಷಿಸದೆ ಇದ್ದ ಬದಲಾವಣೆಗಳಿಗೆ ಕಾರಣವಾಗಬಹುದೆಂದು ತಿಳಿಯಲಾಯಿತು. ಪೂರ್ವ ಏಷ್ಯಾದಲ್ಲಿ ಘರ್ಷಣೆ ಮತ್ತು ಆತಂಕಗಳನ್ನು ಚೀನಾ ಮತ್ತು ಜಪಾನು ನಡುವಣ ಒಪ್ಪಂದ ಕಡಿಮೆ ಮಾಡುತ್ತಿದೆ ಎಂದು ಭಾವಿಸಲಾಯಿತು.

## 162.5 ಏಷ್ಯಾ ದೇಶಗಳಿಗೆ ಸಂಬಂಧಿಸಿದಂತೆ ಜಪಾನಿನ ನೀತಿ

ಏಷ್ಯಾದಲ್ಲಿ ಜಪಾನಿನ ಸ್ಥಾನದ ಬಗ್ಗೆ ಹೇಳುವುದಾದರೆ, ಸುಮಾರು ಅರ್ಧ ಶತಮಾನಗಳ ಕಾಲ ಪ್ರಬಲಶಕ್ತಿಯಾಗಿ ಏಷ್ಯಾದಲ್ಲಿ ಮೆರೆದ ಜಪಾನು ಈಗ ಎರಡನೆಯ ಸ್ಥಾನವನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಈಗ ಏಷ್ಯಾದಲ್ಲಿ ಸ್ಥಾನಮಾನಗಳಿಗಾಗಿ ಅನೇಕ ದೇಶಗಳು ಪೈಪೋಟಿ ನಡೆಸುತ್ತಿದ್ದವು. ಆದರೆ ಹಿಂದಿನಂತೆ ಜಪಾನು ತನ್ನ ಮುಖಂಡತ್ವವನ್ನು ಸ್ಥಾಪಿಸುವುದು ಸಾಧ್ಯವಿರಲಿಲ್ಲ. ಏಕೆಂದರೆ ಈಗ ಮಿಲಿಟರಿ ಆಕ್ರಮಣ ಮತ್ತು ಸ್ವಾಧೀನಕ್ಕೆ ಅವಕಾಶವಿರಲಿಲ್ಲ. ತನ್ನ ಚೈತನ್ಯಶಾಲಿ ಗುಣಕ್ಕೆ ಅನುಗುಣವಾಗಿ ಜಪಾನು ಏಷ್ಯಾದಲ್ಲಿ ತನ್ನ ಮುಖಂಡತ್ವವನ್ನು ಹೊಸ ರೀತಿಯಲ್ಲಿ ಸ್ಥಾಪಿಸತೊಡಗಿತು. ಏಷ್ಯಾದ ದೇಶಗಳು, ಭೌಗೋಳಿಕವಾಗಿ ವಿಶಾಲವಾಗಿದ್ದ ಚೀನಾ ಮತ್ತು ಭಾರತಗಳನ್ನೂ ಸೇರಿಸಿಕೊಂಡು, ತಮ್ಮ ಜೀವನ ಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಶ್ರಮಪಡುತ್ತಿದ್ದಾಗ ಜಪಾನು ಹೊಸ ರೀತಿಯಲ್ಲಿ ತನ್ನ ಸ್ಥಾನವನ್ನು ಸಾಧಿಸಿಕೊಂಡುಬಿಟ್ಟಿತು. ಆರ್ಥಿಕ ಕ್ಷೇತ್ರದಲ್ಲಿ ಜಪಾನು ಏಷ್ಯಾದ ಎಲ್ಲ ದೇಶಗಳನ್ನೂ ಹಿಂದೆ ಹಾಕಿ ಮುಂದೆ ಸಾಗಿತು. ಮುಕ್ತ ಸಮಾಜ ಮತ್ತು ಸ್ವತಂತ್ರ ಸಂಸ್ಥೆಗಳ ಚೌಕಟ್ಟಿನಲ್ಲಿ ತನ್ನೆಲ್ಲ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಂಡ ಜಪಾನು ತನ್ನ ಕಾರ್ಯಕ್ಷಮತೆಯನ್ನು ಸಾಬೀತುಪಡಿಸಿತು. ಇಪ್ಪತ್ತು ದಶಲಕ್ಷ ಜನಸಂಖ್ಯೆಯನ್ನು ಮತ್ತು ಆಹಾರ ತಾಂತ್ರಿಕ ಸಂಪನ್ಮೂಲವನ್ನು ಹೊಂದಿರುವ ಜಪಾನು ಏಷ್ಯಾದಲ್ಲಿ ಆರ್ಥಿಕವಾಗಿ ಮಹತ್ವದ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಇಲ್ಲಿನ ಮುಖ್ಯ ಪ್ರಶ್ನೆಯೆಂದರೆ ಜಪಾನು ತಾನು ಸಾಧಿಸಿಕೊಂಡ ಸ್ಥಾನಮಾನವನ್ನು ಏಷ್ಯಾದ ಸ್ಥಿತಿಗತಿಗಳ ಮೇಲೆ ಪ್ರಭಾವ ಬೀರಲು ಬಳಸಿಕೊಳ್ಳುತ್ತದೊ ಅಥವಾ ಇಲ್ಲವೂ ಎಂಬುದಾಗಿದೆ. ಇತ್ತೀಚಿಗಿನ ಅವರ ಅನುಭವಗಳನ್ನು ನೋಡಿದರೆ ಅದು ಅಂತಹ ಸಾಹಸಕ್ಕೆ ಕೈ ಹಾಕುವುದಿಲ್ಲವೆಂಬುದು ತಿಳಿದು ಬರುತ್ತದೆ. ಏಷ್ಯಾದಲ್ಲಿ ಅದರ ಆಸಕ್ತಿಗಳ ಕೇವಲ ವಾಣಿಜ್ಯಕ್ಕೆ ಸಂಬಂಧಿಸಿವೆ. ಅದರ ಹಿತಾಸಕ್ತಿಗಳು ರಾಜಕೀಯ ಸ್ವರೂಪ ಪಡೆದಿಲ್ಲ. ಸಹಯೋಗದ ಮೂಲಕ ಅದು ಬಡದೇಶಗಳ ಅಭಿವೃದ್ಧಿಗೆ ನೆರವು ನೀಡುತ್ತಿದೆ. ಹೊಸದಾಗಿ ಸ್ವಾತಂತ್ರ್ಯ ಪಡೆದ ಏಷ್ಯಾದ ಹಿಂದುಳಿದ ದೇಶಗಳ ಆರ್ಥಿಕ ಅಭಿವೃದ್ಧಿಗೆ ಜಪಾನು ನೀಡಿರುನ ಕಾಣಿಕೆ ಅಪಾರವಾದುದು. ಅದು ಸಹಯೋಗದಲ್ಲಿ ಮಾರುತಿ-ಸುಜುಕಿ ಕಾರು, ಟಯೋಟಾ ಮತ್ತು ಹೊಂಡಾ ಮೋಟಾರು ಬೈಸಿಕಲ್ಲುಗಳು, ನೈಕಾಯಿ-ತೋಷಾ ಟೆಲಿವಿಷನ್ ಮುಂತಾದ ಉದ್ದಿಮೆಗಳನ್ನು ಭಾರತದಲ್ಲಿ ಸ್ಥಾಪಿಸಿದೆ. ಜಪಾನು ಈಗ ಏಷ್ಯಾದಲ್ಲಿ ಕೇವಲ ಆರ್ಥಿಕ ಬೆಳವಣಿಗೆ ಮತ್ತು ವಾಣಿಜ್ಯ ವ್ಯವಹಾರಗಳಿಗೆ ತನ್ನ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಳ್ಳದೆ ಅಲ್ಲಿನ ರಾಜಕಾರಣದಲ್ಲೂ ಹೆಚ್ಚಿನ ಕ್ರಿಯಾಶೀಲ ಪಾತ್ರವಹಿಸುವ ಕ್ರಮ ತೆಗೆದುಕೊಳ್ಳಬಹುದೆಂದು ನಿರೀಕ್ಷಿಸಬಹುದಾಗಿದೆ.

## 162.6 ವಿಶ್ವದ ರಾಷ್ಟ್ರಗಳ ಸಮುದಾಯದಲ್ಲಿ ಅವಿಭಾಜ್ಯ ಸ್ಥಾನವನ್ನು ಮತ್ತೊಮ್ಮೆ ಗಳಿಸಿಕೊಂಡಿದ್ದು

ಜಪಾನು 1952ರ ಅನೇಕ ಮಾರ್ಗಗಳ ಮೂಲಕ ಘನತೆ ಮತ್ತು ಮನ್ನಣೆ ಗಳಿಸಿಕೊಳ್ಳಲು ಪ್ರಯತ್ನಿಸಿತು. ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಅದು ಸದಸ್ಯತ್ವವನ್ನು ಒತ್ತಾಯಿಸತೊಡಗಿತು. ಸ್ಯಾನಿಫ್ರಾನ್ಸಿಸ್ಕೊ ಒಪ್ಪಂದವಾದ ಒಂದು ವರ್ಷದೊಳಗೆ ಅದು ಕನಿಷ್ಟ 25 ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದುಕೊಂಡಿತು. ಪ್ರವೇಶವು ಅದಕ್ಕೆ ಸುಲಭ ಸಾಧ್ಯವಾಗಿರಲಿಲ್ಲ. ಸೊವಿಯಟ್ ರಷ್ಯಾದ ವಿಟೋದಿಂದಾಗಿ ಡಿಸೆಂಬರ್ 1956ರ ವರೆಗೆ ಅದು ವಿಶ್ವಸಂಸ್ಥೆಯ ಹೊರಗುಳಿಯ ಬೇಕಾಯಿತು. ಬ್ರಿಟಿಷ್ ಕಾಮನ್ ವೆಲ್ತ್ ರಾಷ್ಟ್ರಗಳ ವಿರೋಧದಿಂದಾಗಿ ಸೆಪ್ಟೆಂಬರ್ 1955ರವರೆಗೆ ಅದಕ್ಕೆ ಜನರಲ್ ಅಗ್ರಿಮೆಂಟ್ ಆನ್ ಟಾರಿಫ್ ಅಂಡ್ ಟ್ರೇಡ್‌ನೊಳಗೆ ಪ್ರವೇಶವು ಸಾಧ್ಯವಾಗಲಿಲ್ಲ. ಮುಂದೆ ಅದಕ್ಕೆ ಗ್ಯಾಟ್‌ನೊಂದಿಗಿನ ವ್ಯಾಪಾರಕ್ಕೆ ಸೀಮಿತ ಅವಕಾಶಗಳನ್ನು ನೀಡಲಾಯಿತು. ಅಂತಾರಾಷ್ಟ್ರೀಯ

ಕ್ರೀಡಾ ಕೂಟದಲ್ಲಿ ಭಾಗವಹಿಸಲು ಅವಕಾಶ ನೀಡಲಾಯಿತು. ಅದರಂತೆ 1964ರಲ್ಲಿ ಒಲಿಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಲು ಅದನ್ನು ಆಹ್ವಾನಿಸಲಾಯಿತು. ಜಪಾನಿನ ವಿಜ್ಞಾನಿಗಳು 1957-58ರ ನಂತರ ತೀವ್ರ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿದರು. ಅಂತಾರಾಷ್ಟ್ರೀಯ ಭೌತಶಾಸ್ತ್ರ ವರ್ಷ, ಅಂತರಾಷ್ಟ್ರೀಯ ವ್ಯಾಪಾರಿ ಮೇಳಗಳಲ್ಲಿ ಭಾಗವಹಿಸಲು ಜಪಾನಿಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡಲಾಯಿತು.

ಈ ಎಲ್ಲ ಚಟುವಟಿಕೆಗಳ ಪರಿಣಾಮವಾಗಿ ಜಪಾನಿಗೆ ತನ್ನ ಬಗ್ಗೆ ತನಗೆ ವಿಶ್ವಾಸ ಮೂಡತೊಡಗಿತು. ಏಕಾಕಿತನದ ಭಾವನೆ ಮರೆಯಾಯಿತು. ಕೆಲವೊಂದು ಕ್ರಮಗಳು ಅದರ ಆರ್ಥಿಕ ಸ್ಥಾನಮಾನ ಉತ್ತಮಗೊಳ್ಳಲು ಕಾಣಿಕೆ ನೀಡಿದವು. ಇಷ್ಟಾದರೂ ಜಪಾನು ವ್ಯಾಪಾರ ಬೆಳವಣಿಗೆಯಲ್ಲಿ, ರಷ್ಯಾದೊಂದಿಗಿನ ಮೀನುಗಾರಿಕೆ ವಿವಾದದಲ್ಲಿ, ಯುದ್ಧ ಪರಿಹಾರಕ್ಕೆ ಸಂಬಂಧಿಸಿದಂತೆ, ಕೊರಿಯಾದ ಜೊತೆಗಿನ ಗಡಿ ತಂಟೆ ಬಗ್ಗೆ, ರಷ್ಯಾದ ಜೊತೆ ಗಡಿ ತಕರಾರುಗಳ ಬಗ್ಗೆ ಅನೇಕ ರಾಜತಾಂತ್ರಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ರಷ್ಯಾದ ಜೊತೆ ರಾಜತಾಂತ್ರಿಕ ಸಂಬಂಧವನ್ನು 1956ರಲ್ಲಿ ಮರು ಸ್ಥಾಪಿಸಲಾಯಿತು.

## 162.7 ಆರ್ಥಿಕ ರಾಜಕಾರಣ

ದಕ್ಷಿಣ ಏಷ್ಯಾದಲ್ಲಿನ ಅದರ ಆರ್ಥಿಕ ರಾಜಕಾರಣದಿಂದಾಗಿ ಜಪಾನಿನ ವ್ಯಾಪಾರದಲ್ಲಿ ಉತ್ತಮ ಬೆಳವಣಿಗೆ ಆರಂಭದಲ್ಲಿ ಕಾಣಲಿಲ್ಲ. ದಕ್ಷಿಣ ಏಷ್ಯಾ ಆರ್ಥಿಕತೆಗಳ ದುರ್ಬಲ ಸ್ಥಿತಿಗತಿ ಇದಕ್ಕೆ ಒಂದು ಕಾರಣವಾಗಿದ್ದರೆ ಯುರೋಪಿನ ಪೈಪೋಟಿ ಇದಕ್ಕೆ ಇನ್ನೊಂದು ಕಾರಣವಾಗಿತ್ತು. ವಿಶ್ವಸಂಸ್ಥೆಯ ಆಫ್ರೋ-ಏಷ್ಯನ್ ಬಣದಲ್ಲಿ ಅದಕ್ಕೆ ಕೇವಲ ತಾತ್ಕಾಲಿಕ ಸದಸ್ಯತ್ವ ನೀಡಲಾಯಿತೆ ವಿನಾ ಅದನ್ನೊಂದು ಪ್ರಧಾನ ದೇಶವೆಂದು ಪರಿಗಣಿಸಲಿಲ್ಲ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ 1958 ಮತ್ತು 1959 ಹೀಗೆ ಎರಡು ವರ್ಷ ಜಪಾನಿಗೆ ಸದಸ್ಯತ್ವ ನೀಡಿದ್ದರಿಂದ ಅದರ ಘನತೆ ಉತ್ತಮಗೊಂಡಿತು. ಆದರೆ ಅದು ಪೂರ್ವ ಮತ್ತು ಪಶ್ಚಿಮಗಳ ನಡುವೆ ಮಧ್ಯವರ್ತಿಯಾಗಿ ಅಥವಾ ಸಂಧಾನಕಾರಿಯಾಗಿ ಕೆಲಸ ಮಾಡಬಲ್ಲದು ಎಂಬ ನಂಬಿಕೆ ವಿಫಲವಾಯಿತು. ಮಿಲಿಟರಿ ಒಪ್ಪಂದ ಅಥವಾ ಸೈದ್ಧಾಂತಿಕ ಸಂಗತಿಗಳಿಗಿಂತ ಹೆಚ್ಚಾಗಿ ಅಮೆರಿಕದ ಮೇಲಿನ ಆರ್ಥಿಕ ಅವಲಂಬನೆಯು ಅದು ಕಮ್ಯುನಿಸ್ಟ್ ವಿರೋಧಿ ಬಣದಲ್ಲಿ ನೆಲೆನಿಲ್ಲುವಂತೆ ಮಾಡಿತು. ಅನೇಕ ಜಪಾನೀಯರು ಮತ್ತು ಅಮೆರಿಕೆಯೊಂದಿಗೆ ಸೌಹಾರ್ದಯುತ ಸಂಬಂಧ ಬಯಸುವವರು ಕೂಡ ಪೂರ್ವ ಮತ್ತು ಪಶ್ಚಿಮಗಳೊಂದಿಗೆ ಕಟ್ಟುನಿಟ್ಟಾದ ತಾಟಸ್ಥ್ಯ ನೀತಿ ಮಾತ್ರ ಜಪಾನಿನ ಏಕತೆ ಮತ್ತು ಸ್ವಾತಂತ್ರ್ಯವನ್ನು ಕಾಪಾಡಬಲ್ಲದೆಂದು ವಾದಿಸತೊಡಗಿದರು. ಮತ್ತೆ ಕೆಲವರು ಜಪಾನು ಪಶ್ಚಿಮದೊಂದಿಗೆ ಸಂಬಂಧವನ್ನಿಟ್ಟುಕೊಂಡು ಕಮ್ಯುನಿಸ್ಟ್ ಚೀನಾದ ಜೊತೆ ಮತ್ತು ರಷ್ಯಾದ ಜೊತೆ ವ್ಯಾಪಾರ ಕುರಿತಂತೆ ಒಪ್ಪಂದ ಮಾಡಿಕೊಂಡು ಪಶ್ಚಿಮ ಫೆಸಿಫಿಕ್ ಪ್ರದೇಶದಲ್ಲಿ ತನ್ನ ನಾಯಕತ್ವವನ್ನು ಜಪಾನು ಸ್ಥಾಪಿಸಬಹುದೆಂದು ನಂಬಿದ್ದರು.

ಎರಡನೆಯ ಮಹಾಯುದ್ಧದ ನಂತರ ಜಪಾನಿನ ಕ್ಷಿಪ್ರ ಆರ್ಥಿಕ ಪುನಶ್ಚೇತನವು ಏನನ್ನು ಸಾಬೀತುಪಡಿಸಿತೆಂದರೆ, ಅದರ ಚೈತನ್ಯ, ಕುಶಲತೆ, ಸಂಪನ್ಮೂಲ, ಕಾರ್ಯಕ್ಷಮತೆ ಮತ್ತು ದೃಢ ನಿಶ್ಚಯಗಳ ಉಪಯೋಗದ ಮೂಲಕ ಅದು ಏಷ್ಯಾದ ಔದ್ಯೋಗಿಕ ರಾಷ್ಟ್ರಗಳ ಸಾಲಿನಲ್ಲಿ ಪ್ರಥಮ ಸ್ಥಾನಪಡೆದುಕೊಳ್ಳಬಹುದು ಎಂಬುದಾಗಿತ್ತು. ಜಪಾನೀಯರು ಇಂತಹ ನಿರೀಕ್ಷೆಗಳನ್ನು ಕಾರ್ಯರೂಪಕ್ಕಿಳಿಸುವ ಆರ್ಥಿಕ ಮತ್ತು ರಾಜಕೀಯ ನಾಯಕತ್ವದ ಸಾಮರ್ಥ್ಯದ ಬಗ್ಗೆ ಅನುಮಾನ ತಳೆದಿದ್ದರು. ಕಮ್ಯುನಿಸ್ಟ್ ಚೀನಾ ಮತ್ತು ಭಾರತಗಳು ಏಷ್ಯಾದ ನಾಯಕತ್ವಕ್ಕೆ ಸೆಣಸುತ್ತಿದ್ದವು. ಏಷ್ಯಾದ ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳ ಮೇಲೆ ಚೀನಾದ ನೀತಿಗಳು ನಿಶ್ಚಯವಾಗಿ ಬಲವಾದ ಪ್ರಭಾವ ಬೀರಬಹುದೆಂದು ಭಾವಿಸಲಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಪೈಪೋಟಿಯಲ್ಲಿ ನಿರತವಾದ ದೇಶಗಳ ಘನತೆ ಮತ್ತು ಪ್ರತಿಷ್ಠೆಗಳು ಇಲ್ಲಿ ಪಣಕ್ಕೆ ಒಳಗಾಗಿದ್ದವು. ಜಪಾನು ಇತರೆ ದೇಶಗಳೊಂದಿಗೆ, ಅದರಲ್ಲೂ ಏಷ್ಯಾದ ದೇಶಗಳೊಂದಿಗೆ ಸಂಬಂಧ ಸಾಧಿಸಿಕೊಳ್ಳುವುದರ ಮೂಲಕ ಆರ್ಥಿಕ ಪ್ರಗತಿ ಸಾಧಿಸಿಕೊಳ್ಳಬಹುದೆಂದು ನಂಬಿತ್ತು. ಕಮ್ಯುನಿಸ್ಟ್ ಚೀನಾದ ಉದಯ ಮತ್ತು ಮಿಲಿಟರಿ ದುಸ್ಸಾಹಸಕ್ಕೆ ಪ್ರತಿಯಾಗಿ ಶಾಂತಿ ನೀತಿಗಳಿಗೆ ಮೊರೆ ಹೋದ ಜಪಾನಿನ ಕ್ರಮಗಳಿಂದಾಗಿ

ಏಷ್ಯಾದಲ್ಲಿ ಒಂದು ಯುಗ ಅಂತ್ಯಕಂಡಿತು. ಆದರೆ ಬದಲಾದ ಸನ್ನಿವೇಶದಲ್ಲಿ ತನ್ನ ಸಾಮರ್ಥ್ಯದ ಬಗ್ಗೆ ಜಪಾನು ಬಹಳ ಎಚ್ಚರಿಕೆಯ ಆಶಾವಾದವನ್ನು ಹೊಂದಿತ್ತು.

## 162.8 ಆಧುನಿಕ ಜಪಾನ್

ಸೋವಿಯಟ್ ರಷ್ಯಾ ಮತ್ತು ಅಮೆರಿಕೆಯ ನಂತರ ವಿಶ್ವದ ಮೂರನೆಯ ಅತಿದೊಡ್ಡ ಔದ್ಯಮಿಕ ರಾಷ್ಟ್ರ ಜಪಾನ್. ತಂತ್ರಜ್ಞಾನ ಕ್ಷೇತ್ರದಲ್ಲಿ ಅದು ಅಸಾಧಾರಣ ಪ್ರಗತಿ ಸಾಧಿಸಿದೆ. ಜಪಾನು ಒಂದು ಸಾಲಧಾತ ರಾಷ್ಟ್ರವಾಗಿದೆ. ವಿಶ್ವದ ಎಲ್ಲ ಪ್ರಧಾನ ದೇಶಗಳಲ್ಲೂ ಜಪಾನು ಸಹಯೋಗದಲ್ಲಿ ಉದ್ದಿಮೆಗಳನ್ನು ಸ್ಥಾಪಿಸಿದೆ.

ಇದರಿಂದ ನಮಗೆ ಸ್ಪಷ್ಟವಾಗುವ ಸಂಗತಿಯೆಂದರೆ ಇಂದು ಜಪಾನು ವಿಶ್ವದಲ್ಲಿ ಅತ್ಯಂತ ಮುಂದುವರಿದ ದೇಶವಾಗಿದೆ. ಅದರ ಅದ್ಭುತ ಜಾಣತನವೆಲ್ಲಿದೆಯೆಂದರೆ ವಿದೇಶಗಳಿಂದ ಎಲ್ಲವನ್ನು ತರಿಸಿಕೊಳ್ಳುವುದು ಮತ್ತು ಅಳವಡಿಸಿಕೊಳ್ಳುವ ಸಾಮರ್ಥ್ಯದಲ್ಲಿದೆ ಮತ್ತು ಅವುಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಸಾಮರ್ಥ್ಯದಲ್ಲಿದೆ. ಈ ಸಂಗತಿಯು ಎರಡನೆಯ ಮಹಾಯುದ್ಧದಲ್ಲಿ ಸೋಲನ್ನು ಅನುಭವಿಸಿದ ನಂತರ ಅದು ಏಷ್ಯಾದಲ್ಲಿ ಮತ್ತು ವಿಶ್ವದಲ್ಲಿ ಶಾಂತಿಗಾಗಿ ಪ್ರಚಾರ ಮಾಡುತ್ತಿರುವ ಪ್ರಸಂಗದಿಂದ ಸ್ಪಷ್ಟವಾಗುತ್ತದೆ.

ತನ್ನ ಅಭಿವೃದ್ಧಿ ಮತ್ತು ರಕ್ಷಣೆಯ ದೃಷ್ಟಿಯಿಂದ ಚೀನಾದ ಜೊತೆಗಿನ ಸಂಬಂಧ ಎಷ್ಟು ಮಹತ್ವದ್ದೆಂದು ಅರಿತುಕೊಂಡ ಜಪಾನು ಅತ್ಯಂತ ಜಾಗರೂಕತೆಯಿಂದ ಏಷ್ಯಾದಲ್ಲಿನ ತನ್ನ ಅತಿದೊಡ್ಡ ನೆರೆ ರಾಷ್ಟ್ರವಾದ ಚೀನಾದೊಂದಿಗೆ ಒಳ್ಳೆಯ ಸಂಬಂಧವನ್ನು ಪೋಷಿಸಿಕೊಂಡು ಬಂದಿತು. ಚೀನಾಕ್ಕೆ ಜಪಾನಿನ ತಾಂತ್ರಿಕ ಜ್ಞಾನದ ಅವಶ್ಯಕತೆಯಿತ್ತು ಮತ್ತು ಜಪಾನಿಗೆ ಚೀನಾದ ಕಚ್ಚಾ ಪದಾರ್ಥಗಳು ಬೇಕಾಗಿದ್ದವು. ಈ ಸಂಗತಿಯನ್ನು ಅರಿತುಕೊಂಡು ಆಗಸ್ಟ್ 1978ರಲ್ಲಿ ಜಪಾನು ಚೀನದೊಂದಿಗೆ ಅನಿವಾರ್ಯವಾಗಿ ಹತ್ತು ವರ್ಷಗಳ ಶಾಂತಿ ಒಪ್ಪಂದವನ್ನು ಮಾಡಿಕೊಂಡಿತು. ಅದೇ ಸಮಯದಲ್ಲಿ ಅದು ದಕ್ಷಿಣ ಏಷ್ಯಾದ ಮತ್ತು ಆಗ್ನೇಯ ಏಷ್ಯಾದ ಇತರೆ ದೇಶಗಳೊಂದಿಗೂ ಒಳ್ಳೆಯ ಸಂಬಂಧವನ್ನು ಕಾಪಾಡಿಕೊಂಡು ಬಂದಿತು. ಅದು ಪಾಶ್ಚಿಮಾತ್ಯ ದೇಶಗಳೊಂದಿಗೆ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸಲು ಮತ್ತು ದೃಢಪಡಿಸಿಕೊಳ್ಳಲು ಪ್ರಯತ್ನಿಸಿತು. ಮುಖ್ಯವಾಗಿ ಅದು ಅಮೆರಿಕೆಯ ಜೊತೆ ಇಂತಹ ಸಂಬಂಧವನ್ನು ಪೋಷಿಸಿಕೊಂಡು ಬಂದಿತು. ಅದು ದಕ್ಷಿಣ ಏಷ್ಯಾದಲ್ಲಿ, ಆಗ್ನೇಯ ಏಷ್ಯಾದಲ್ಲಿ, ಪಶ್ಚಿಮದ ರಾಷ್ಟ್ರಗಳೊಂದಿಗೆ ಹಾಗೂ ಜಾಗತಿಕ ರಾಜಕಾರಣದಲ್ಲಿ ಶಕ್ತಿ ಸಮತೋಲನವನ್ನು ಕಾಯ್ದುಕೊಳ್ಳಬೇಕಾಗಿತ್ತು. ಜಪಾನು ಮುಖ್ಯವಾಗಿ ಮತ್ತು ಅಕ್ಷರಶಃ ಏಷ್ಯಾದ ಒಂದು ದೇಶ. ಆದರೂ ಅದು ಪಶ್ಚಿಮ ಮತ್ತು ಪೂರ್ವದ ಎರಡೂ ಭೂಭಾಗಗಳಲ್ಲೂ ಒಳ್ಳೆಯ ಸಂಬಂಧವನ್ನು ಕಾಯ್ದುಕೊಂಡು ಬರುವಲ್ಲಿ ಯಶಸ್ವಿಯಾಯಿತು.

ಇಂದು ಏಷ್ಯಾದ ದೇಶಗಳಿಗೆಲ್ಲ ಅದು ಒಂದು ಸ್ಫೂರ್ತಿಯ ನೆಲೆಯಾಗಿದೆ. ಅದು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಯಶಸ್ವೀ ರಾಷ್ಟ್ರವಾಗಿದೆ. ಇದನ್ನು ಉಳಿದ ದೇಶಗಳು ಅನುಸರಿಸಿ ಲಾಭ ಮಾಡಿಕೊಳ್ಳಬಹುದಾಗಿದೆ. ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಜಪಾನು ಸಾಧಿಸಿಕೊಂಡಿರುವ ಅದ್ಭುತ ಯಶಸ್ಸಿನ ಹಿನ್ನೆಲೆಯಲ್ಲಿ ಅದು ಏಷ್ಯಾದ ದೇಶದ ಆರ್ಥಿಕ ಸಮಸ್ಯೆಗಳ ನಿವಾರಣೆಗೆ ನೆರವು ನೀಡಬಹುದಾಗಿದೆ. ಜಪಾನು ಭೌಗೋಳಿಕವಾಗಿ ಪುಟ್ಟ ರಾಷ್ಟ್ರವಾದರೂ, ಅದು ವಿಶ್ವವನ್ನು ಕಾಡುತ್ತಿರುವ ಸಂಕೀರ್ಣವಾದ ಜಟಿಲವಾದ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವ ದಿಶೆಯಲ್ಲಿ ಅದು ತನ್ನದೇ ಅದ ಕಾಣಿಕೆ ಸಲ್ಲಿಸಬಹುದಾಗಿದೆ.

## 162.9 ಸಾರಾಂಶ

ಈ ವಿಭಾಗದಲ್ಲಿ 1952ರ ನಂತರದ ಜಪಾನಿನ ವಿದೇಶಾಂಗ ನೀತಿಯನ್ನು ಕುರಿತಂತೆ ಚರ್ಚಿಸಲಾಗಿದೆ. ಅಮೆರಿಕ, ಸೊವಿಯಟ್ ರಷ್ಯಾ, ಕಮ್ಯುನಿಸ್ಟ್ ಚೀನಾ ಮತ್ತು ಇತರೆ ಏಷ್ಯಾ ದೇಶಗಳೊಂದಿಗಿನ ಜಪಾನಿನ ಸಂಬಂಧವನ್ನು ಇಲ್ಲಿ ಚರ್ಚಿಸಲಾಗಿದೆ. ಇದರಿಂದಾಗಿ ಜಪಾನು ಒಂದು ಸಾಲಧಾತ ದೇಶವಾಗುವುದು ಸಾಧ್ಯವಾಯಿತು. ಜಪಾನು ವಿಶ್ವದ ಎಲ್ಲ ದೇಶಗಳಲ್ಲಿ ಸಹಯೋಗದಲ್ಲಿ ಉದ್ದಿಮೆಗಳನ್ನು ಸ್ಥಾಪಿಸಿತು. ಇಂದು ಅದೊಂದು ವಿಶ್ವದಲ್ಲಿ ಮೂರನೆಯ ಬಹುದೊಡ್ಡ ಔದ್ಯಮಿಕ ಶಕ್ತಿಯಾಗಿದೆ. ಈ ವಿಭಾಗದಲ್ಲಿ ನಾವು ತಿಳಿದುಕೊಂಡ ಸಂಗತಿಗಳು ಹೀಗಿವೆ.

* ಶಾಂತಿ ಒಪ್ಪಂದದ ನಂತರ ಜಪಾನು ಶಾಂತಿಯುತ ನೀತಿಯನ್ನು ಪಾಲಿಸುವುದರ ಮೂಲಕ ಆರ್ಥಿಕ ಅಭಿವೃದ್ಧಿ ಸಾಧಿಸಿಕೊಂಡಿತು ಮತ್ತು ಈ ದಿಶೆಯಲ್ಲಿ ಅದು ಅದ್ಭುತ ಯಶಸ್ಸನ್ನು ಸಾಧಿಸಿಕೊಂಡಿತು.
* ಆರ್ಥಿಕ ಕ್ಷೇತ್ರದಲ್ಲಿ ಜಪಾನ್ ಅದ್ಭುತ ಔನ್ನತ್ಯ ಸಾಧಿಸಿಕೊಂಡಿತು.
* ಜಪಾನು ಅಮೆರಿಕೆಯ ಜೊತೆ ಮೈತ್ರಿ ಸಂಬಂಧ ಬೆಳೆಸಿಕೊಂಡಿತು ಮತ್ತು ಸೊವಿಯಟ್ ರಷ್ಯಾ ಹಾಗೂ ಏಷ್ಯಾದ ಇತರೆ ದೇಶಗಳ ಜೊತೆಗೂ ಅದು ಸೌಹಾರ್ದಯುತ ಸಂಬಂಧವನ್ನು ಪೋಷಿಸಿಕೊಂಡು ಬಂದಿತು.
* ಏಷ್ಯಾದ ಎಲ್ಲ ದೇಶಗಳಲ್ಲೂ ಅದು ಸಹಯೋಗದಲ್ಲಿ ಉದ್ದಿಮೆಗಳನ್ನು ಸ್ಥಾಪಿಸಿತು ಮತ್ತು ಏಷ್ಯಾದ ಅಭಿವೃದ್ಧಿಶೀಲ ದೇಶಗಳಿಗೆ ಅದು ಆರ್ಥಿಕ ನೆರವನ್ನು ಒದಗಿಸಿತು.
* ಏಷ್ಯಾದ ದೇಶಗಳಲ್ಲಿ "ಏಷ್ಯಾನ್ನರಿಗೆ" ಎಂಬ ಘೋಷಣೆಯು ಇಂದೂ ಅನಾವರಣಗೊಳ್ಳುತ್ತಿದೆ.

## 162.10 ಸ್ವಯಂ ಪ್ರಗತಿ ಪರೀಕ್ಷೆ

***I. ಕೆಳಗಿನವುಗಳಿಗೆ ಲಘು ಟಿಪ್ಪಣಿ ಬರೆಯಿರಿ***

ಅ. ತನಾಕ

ಆ. ಸ್ಯಾನಿಫ್ರಾನ್ಸಿಸ್ಕೋ ಶಾಂತಿ ಒಪ್ಪಂದ

ಇ. ಜಿ.ಎ.ಟಿ.ಟಿ

***II. ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೂ ಎರಡು ಪುಟಗಳಲ್ಲಿ ಉತ್ತರಿಸಿ***

ಅ. "ಸ್ವಾಧೀನ ಆಡಳಿತವು 1952ರಲ್ಲಿ ಅಂತ್ಯಗೊಂಡಿದ್ದು ಜಪಾನಿಗೆ ಅನುಕೂಲಕರವಾಯಿತು" ಚರ್ಚಿಸಿರಿ.

ಆ. ಜಪಾನಿನ 1952ರ ನಂತರದ ವಿದೇಶಾಂಗ ನೀತಿಯ ಬಗ್ಗೆ ಒಂದು ಪ್ರಬಂಧ ಬರೆಯಿರಿ.

## 162.11 ಹೆಚ್ಚಿನ ಓದಿಗೆ ಗ್ರಂಥಗಳು


| | | |
|---|---|---|
| ವಿಲಿಯಮ್ ಬ್ಯಾರಿ | : | ಮಾರ್ಡನ್ ಜಪಾನ್ |
| ಬೋರ್ಟನ್ ಎಚ್. | : | ಜಪಾನ್ಸ್ ಮಾರ್ಡನ್ ಸೆಂಚುರಿ |
| ಸ್ಟೋರ್ನಿ | : | ಹಿಸ್ಟರಿ ಆಫ್ ಮಾರ್ಡನ್ ಜಪಾನ್ |
| ಬೋರ್ಟನ್ ಹೆಚ್. ಮತ್ತು ಇತರರ | : | ಜಪಾನ್ ಬಿಟ್ವೀನ್ ಈಸ್ಟ್ ಆಂಡ್ ವೆಸ್ಟ್. |

## ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✛ **M.Ed Study Centres : 06**


STUDENT
INSTRUCTIONAL SYSTEM